ಅಕ್ಟೋಬರ್ 20, 2024

40ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1955

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

ವಿಶೇಷ ಸಂಚಿಕೆ

## ಬಲೆಗೆ ಬಿದ್ದ ಗಂಡಸರಿಂದ ಲಕ್ಷ-ಲಕ್ಷ ಸುಲಿಗೆ ಮಾಡಿದ

# ಹನಿಟ್ರ್ಯಾಪ್ ಸುಂದರಿಯರು!





## ಖಾಕಿ ಖೆಡ್ಡಾದಲ್ಲಿ ಖತರ್‌ನಾಕ್ ಖದೀಮರು...



## ಪತ್ನಿ ಕಪ್ಪಾಗಿದ್ದಾಳೆಂದು ಗಂಡ ಅವಮಾನಿಸಿದಕ್ಕೆ ಆತ್ಮಹತ್ಯೆ ಮಾಡಿಕೊಂಡ ನವವಿವಾಹಿತೆ ಬಿಂದು!

## ಹೆಂಡ್ತಿ ಮೇಲೆ ಕಣ್ಣಿಟ್ಟವನ ತಲೆಗೆ ಪಿಸ್ತೂಲ್ ಇಟ್ಟ!





## ಲವ್ವಿಡವ್ವಿ ಇಟ್ಟುಕೊಂಡವಳಿಂದಲೇ ಕೊಲೆಯಾದ ಶರಣಪ್ಪ!


## ‘ತುಂಡು ದಾರಿ’ಗಾಗಿ ಸಹೋದರ ಸಂಬಂಧಿಯನ್ನೇ ಕೊಂದರು!





# ಅಂಡರ್‌ವರ್ಲ್ಡ್ ನಿಗೂಢ ಸತ್ಯಗಳು

# ಅಮರ್ ಆಳ್ವ ಹತ್ಯೆ ಯಾಕಾಯಿತು?



## ಅಮರ್ ಹತ್ಯೆಗೆ ಬಲ್ಲಾಳ್‌ಬಾಗ್ ರಘು ಸಾಥ್

(ಹಿಂದಿನ ಸಂಚಿಕೆಯಿಂದ)

ಮಂಗಳೂರು ಅಂಡರ್ ವರ್ಲ್ಡ್ ಇದುವರೆಗೂ ನೋಡಿರದ ಅತ್ಯಂತ ಶಕ್ತಿಶಾಲಿ ಹಾಗೂ ಸುತ್ತೂರದ್ರೂಪಿ ಅಮರ್ ಆಳ್ವಾ ಹತ್ಯೆಗೆ ಡಾನ್ ಅಶೋಕ್ ಶೆಟ್ಟಿ ನಿರ್ಧರಿಸಿ ಯಾಗಿತ್ತು ಎಂಬಲ್ಲಿಯವರೆಗೆ ಹಿಂದಿನ ಸಂಚಿಕೆಯ ಕಥೆ ಬಂದುನಿಂತಿತ್ತುಫಿ. ಅಂಡರ್‌ವರ್ಲ್ಡ್‌ನಲ್ಲಿಯಾವಕೊಲೆಯೂ ಕಾರಣವಿಲ್ಲದೆ ಆಗುವುದಿಲ್ಲಫಿ. ಅಮರ್ ಹತ್ಯೆಯೂ ಇದಕ್ಕೆ ಹೊರತಾಗಿರಲಿಲ್ಲಫಿ. ಇಲ್ಲಿ ಕಾರಣವಾದದ್ದು ಹವಾಲಾ ಹಣ ದರೋಡೆ ವಿಷಯ.

ಉಡುಪಿ ಸಮೀಪದ ಇಂದ್ರಾಳಿಯ ವ್ಯಕ್ತಿಯೊಬ್ಬರಿಗೆ ಸೇರಿದ ಆರು ಲಕ್ಷ ರೂ. ಹವಾಲಾ ಹಣವನ್ನು 1991ರ ಡಿಸೆಂಬರ್ 13ರಂದು ಯತೀಶ್ ಶೆಟ್ಟಿಫಿ, ಶ್ರೀಕರ, ಮುರಳಿ ಎಂಬುವರು ದೋಚಿಬಿಟ್ಟಿದ್ದರು. ಇವರಲ್ಲಿ ಇಬ್ಬರು ನಿಟ್ಟೆ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು.



ಅಮರ್ ಆಳ್ವ

ಇದಕ್ಕೂ ಕೆಲವು ದಿನಗಳ ಮೊದಲು ನಿಟ್ಟೆ ಕಾಲೇಜಿನಲ್ಲಿ ಮುರಳಿಯ ಸಹಪಾಠಿಯಾಗಿದ್ದ ತಿಲಕ್ ಎಂಬಾತನಿಗೆ ಹಣಕಾಸಿನ ವಿಷಯಕ್ಕೆ ಸಂಬಂಽಸಿದಂತೆ ಮುಸ್ಲಿಂ ಯುವಕರ ಗುಂಪೊಂದು ಹಲ್ಲೆ ನಡೆಸಿತ್ತುಫಿ. ಸ್ನೇಹಿತನ ಮೇಲೆ ನಡೆದ ಹಲ್ಲೆಯಿಂದ ಸಹಜವಾಗಿಯೇ ಮುರಳಿ ಆಕ್ರೋಶಗೊಂಡಿದ್ದಫಿ. ಆತನನ್ನು ಶಿವ ದ ಮಂಚಕಲ್‌ನಲ್ಲಿದ್ದ ಯತೀಶ್ ರೂಮಿಗೆ ಕರೆ ತಂದು ಮುರಳಿ ಸೇಡು ತಿರಿಸಿಕೊಳ್ಳುವ ಮಾತನಾಡಿದ. ತನಗೆ ಹಲ್ಲೆ ನಡೆಸಿದವರಿಗೆ ದುಬೈ ವ್ಯಕ್ತಿಯೊಬ್ಬರು ಬೆಂಬಲ ನೀಡಿದ್ದರು ಎಂಬ ಮಾಹಿತಿಯನ್ನು ತಿಲಕ್ ತಿಳಿಸಿದ್ದಫಿ. 'ಈಗೇನು ಮಾಡುವುದು? ದುಬೈನಲ್ಲಿದ್ದವರ ಮೇಲೆ ಹಲ್ಲೆ ನಡೆಸಲು ಸಾಧ್ಯವಾ?' ಅಂತ ಯತೀಶ್ ಅಸಹಾಯಕತೆ ವ್ಯಕ್ತಪಡಿಸಿದಾಗ 'ಹಲ್ಲೆಗೆ ಬೆಂಬಲ ನೀಡಿದ ದುಬೈ ವ್ಯಕ್ತಿಯ ಹವಾಲಾ ಹಣ ಯಾವ ದಿನ, ಎಲ್ಲಿಗೆಫಿ, ಹೇಗೆ ಬರುತ್ತಿದೆ ಎಂಬುದು ನನಗೆ ತಿಳಿದಿದೆ. ಅದನ್ನೇ ಎಳೆದೊಯ್ಯುವ ಮೂಲಕ ಆತನಿಗೆ ಬುದ್ಧಿ ಕಲಿಸೋಣ' ಅನ್ನುವ ಸೂಪರ್ ಐಡಿಯಾ ನೀಡಿದ ತಿಲಕ್. ಅದು ಹವಾಲಾ ಹಣವಾದ ಕಾರಣ ಯಾವುದೇ ಕೇಸ್ ಆಗುವುದಿಲ್ಲ ಅಂತ ಮತ್ತೊಂದು ಮಾತು ಸೇರಿಸಿದ.

ಆ ದಿನಗಳಲ್ಲಿ ಯತೀಶ್‌ಗೆ ಹಣಕಾಸಿನ ತೊಂದರೆಯೇ ನಿರಲಿಲ್ಲ. ಹೆಸರಾತ ರಸಮಂಜರಿ ಕಾರ್ಯಕ್ರಮಗಳ ಆಯೋಜಕರಾಗಿದ್ದ ಪ್ರಕಾಶ್ ಮಲ್ಲಿಯವರ, ಮೂರ್ನಾಲ್ಕು ಕಾರ್ಯಕ್ರಮಗಳಲ್ಲಿ ಯತೀಶ್‌ಗೆ ಯಥೇಚ್ಛ ದುಡ್ಡು ಹರಿದು ಬಂದಿತ್ತುಫಿ. ಆದರೆ ಮುರಳಿ ಮಾತಿಗೆ ಇಲ್ಲ ಎನ್ನಲೂ ಆಗಲಿಲ್ಲಫಿ. ಮುಂಬೈನಿಂದ ಬಸ್ ಮೂಲಕ ಬಂದ ಹಣವನ್ನು ರಿಕ್ಷಾದಲ್ಲಿ ಕೊಂಡೊಯ್ಯುತ್ತಿರುವಾಗ ಯತೀಶ್, ಶ್ರೀಕರ, ಮುರಳಿ ಸೇರಿಕೊಂಡು ಇಂದ್ರಾಳಿಯಲ್ಲಿ ದೋಚಿಬಿಟ್ಟರು.


ತಮಾಷೆಗಾಗಿ ದೋಚಿದರೋ, ಅಥವಾ ಅದೇನೋ ಮಾಡಲುಹೋಗಿ ಇನ್ನೇನಾಯ್ತೋ ಅದು ಬೇರೆ ಮಾತು. ಸರಿಯಾದ ರೀತಿಯಲ್ಲಿ ಹ್ಯಾಂಡಲ್ ಮಾಡಿದ್ದರೆ ಸಮಸ್ಯೆ ಮುಗಿದು ಹೋಗುತ್ತಿತ್ತೇನೋ.

ಆದರೆ ಹಾಗಾಗಲಿಲ್ಲಫಿ. ನಂದಳಿಕೆಯ ಸಂದೇಶ್ ಯಾನೇ ಕಿಣ್ಣು ಮೂಲಕ ಹೇಳಿದರೂ ಯತೀಶ್ ಗುಂಪು ಹಣ ಹಿಂದಿರುಗಿಸಲು ನಿರಾಕರಿಸಿತು. ಕೊನೆಗೆ ಹಣ ವಸೂಲಿ ಡೀಲ್ ಉಡುಪಿ ಉದ್ಯಮಿಯೊಬ್ಬರ ಮೂಲಕ ಬಂದದ್ದು ಅಮರ್ ಆಳ್ವ ಬಳಿಗೆ.

ಅದೊಂದು ದಿನ ದೊಡ್ಡದೊಂದು ಗುಂಪು ಕಟ್ಟಿಕೊಂಡ ಅಮರ್, ಕಾಪು ಬಳಿಯ ಯತೀಶ್ ಮನೆಗೆ ನುಗ್ಗಿ ಅಬ್ಬರಿಸಿಬಿಟ್ಟರು. ಯತೀಶ್ ಮನೆಯಲ್ಲಿರಲಿಲ್ಲಫಿ. 'ಮರ್ಯಾದೆಯಾಗಿ ಹಣ ಹಿಂತಿರುಗಿಸದಿದ್ದರೆ ಪರಿಸ್ಥಿತಿಯೂ ನೆಟ್ಟಗಿರುವುದಿಲ್ಲ' ಅಂತ ಹೇಳಿ ಬಂದಿದ್ದರು. ಜೊತೆಗಿದ್ದವನೊಬ್ಬ ಯತೀಶ್ ಸಹೋದರಿಗೆ ಅದೇನೋ ಆಡಬಾರದ ಮಾತೊಂದನ್ನು ಅಂದಿದ್ದನಂತೆ. ತಾಯಿಯ ಬಾಯಿಗೆ ಲೋಡೆಡ್ ರಿವಾಲ್ವರ್ ಇರಿಸಿ, ಹಲ್ಲೆ ನಡೆಸಿದರಂತೆ ಎಂಬ ಸುದ್ದಿ ಮಾತ್ರ ಯತೀಶ್ ಕಿವಿಗೆ ಬಿತ್ತುಫಿ. ಆತನ ಪಿತ್ತ ನೆತ್ತಿಗೇರಲು ಇಷ್ಟೇ ಸಾಕಾಗಿತ್ತುಫಿ.

ಅದೇನೇ ರೌಡಿಗಳ ಲೋಕ ಅಂದರೂ ಅಲ್ಲೂ ಕೂಡ ಒಂದಷ್ಟು ನೀರಿ ನಿಯಮಗಳಿವೆ. ರೀತಿ ರಿವಾಜುಗಳಿವೆ. ಯಾವ ಕಾರಣಕ್ಕೂ ಹೆಂಗಸರ ಮೇಲೆ ಕೈ ಮಾಡಬಾರದು ಅನ್ನುವುದು ಕೂಡ ಅಂತಹದ್ದೇ ಒಂದು ನಿಯಮ. ಆದರೆ ಆವತ್ತು ಅಮರ್ ಗ್ಯಾಂಗ್ ಈ ನಿಯಮವನ್ನು ಮುರಿದುಬಿಟ್ಟಿತ್ತುಫಿ.

ಅಮರ್ ಮತ್ತಾತನ ತಂಡ ತಮ್ಮ ಬೆನ್ನು ಬಿದ್ದಿರುವುದು ಖಚಿತವಾಗುತ್ತಿದ್ದಂತೆ ಯತೀಶ್ ಮತ್ತು ಸ್ನೇಹಿತರು ಕಾರವಾರ, ಗೋವಾ ಮುಂಬೈಗಳಲ್ಲಿ ತಲೆ ಮರೆಸಿಕೊಂಡರು. ಬಚಾವ್ ಆಗುವುದು ಅಸಾಧ್ಯ ಎಂದು ಖಚಿತವಾದಾಗ ನ್ಯೂ ಬಾಂಬೆಯ ಭಾಸ್ಕರ್ ಶೆಟ್ಟಿ ಎಂಬುವರ ಹೋಟೆಲ್‌ನಲ್ಲಿ ಮಂಗಳೂರಿನ ಬಲ್ಲಾಳ್ ಬಾಗ್ ರಘು ಪರಿಚಯವಾಯಿತು. ಬೆಳ್ಳಿ ಸಾಗಾಟ ವಿಷಯಕ್ಕೆ ಸಂಬಂಽಸಿದಂತೆ ಅಮರ್ ಆಳ್ವ ಮತ್ತು ಅಶೋಕ್ ಶೆಟ್ಟಿಗೆ ವೈರತ್ವ ಬೆಳೆದಿರುವುದು ರಘುವಿಗೆ ತಿಳಿದಿತ್ತುಫಿ. ವಿಷಯಗಳನ್ನು ಸಂಕ್ಷಿಪ್ತವಾಗಿ ತಿಳಿದುಕೊಂಡ ಆತ ದುಬೈನಲ್ಲಿದ್ದ ಅಶೋಕ್ ಶೆಟ್ಟಿಯೊಂದಿಗೆ ಯತೀಶ್‌ನನ್ನು ಮಾತನಾಡಿಸಿದ.



ಬಲ್ಲಾಳ್‌ಬಾಗ್ ರಘು

ತನ್ನ ಬಳಿ ಸಹಾಯ ಕೇಳಿ ಬಂದಿರುವವರಿಗೆ ನೆರವು ನೀಡುವ ನೆಪದಲ್ಲಿ ಅಮರ್ ಕೊಲೆಗೆ ಪ್ಲಾನ್ ಸಿದ್ಧಪಡಿಸುವುದು ಮತ್ತು ಅದನ್ನು ಯತೀಶ್ ತಂಡದ ಮೂಲಕ ಜಾರಿಗೊಳಿಸುವ ಮಾಸ್ಟರ್ ಪ್ಲಾನ್ ಅದಾಗಲೇ ಅಶೋಕ್ ಶೆಟ್ಟಿ ಮನಸ್ಸಿನಲ್ಲಿತ್ತುಫಿ.

ಅಶೋಕ್ ಶೆಟ್ಟಿ ಸೂಚನೆಯಂತೆ ಯತೀಶ್ ಮತ್ತಾತನ ಸಹಚರರು ಘಟನೆಯ ವಿವರವನ್ನು ರಘುವಿಗೆ ವಿವರಿಸಿದರು.

'ಅಮರ್ ಗ್ಯಾಂಗ್ ನಿನ್ನ ತಾಯಿ ಮತ್ತು ಸಹೋದರಿಯ ಮೇಲೆ ಕೈ ಮಾಡುವುದೆಂದರೇನು? ಇದು ನಮಗೆಲ್ಲರಿಗೂ ಆದ ಅವಮಾನ' ಅಂತ ಅನ್ನುತ್ತಲೇ ಮಾತು ಶುರುವಿಟ್ಟುಕೊಂಡ ಬಲ್ಲಾಳ್‌ಬಾಗ್ ರಘು.

ಇದು ಜನಜಂಗುಳಿ ಸೇರಿದ ಸಂತೆಯಲ್ಲಿ ಆಟ ಆಡಿಸುವವನ ಮೊದಲ ತಂತ್ರಫಿ.

''ಎಲ್ಲಾ ವಿಷಯ ನನಗೂ ತಿಳಿದಿದೆ. ಆದರೆ ಒಂದಂತೂ ಸತ್ಯಫಿ. ಅಮರ್ ಬದುಕಿರುವ ತನಕವೂ ನಿಮ್ಮನ್ನು ನೆಮ್ಮದಿಯಾಗಿರಲು ಬಿಡಲಾರ. ಜೀವ ತೆಗೆದರೂ ತೆಗೆದಾನು. ನೀವೇನು ಮಾಡಬೇಕೆಂದು ನಿರ್ಧರಿಸಿದ್ದೀರಿ?'' ಅಂತ ಯತೀಶ್‌ನನ್ನು ನೇರವಾಗಿ ಕೇಳಿದ್ದಫಿ.

ಇದು ಸಂತೆಯಲ್ಲಿ ಆಟ ಹಾಕುವವನ ಎರಡನೇ ತಂತ್ರ ಈ ಮಾತಿಗೆ ಯತೀಶ್ ತಕ್ಷಣ ಉತ್ತರಿಸಲಿಲ್ಲಫಿ. ''ಅಮರ್‌ನನ್ನು ಕೊಲ್ಲುತ್ತೀರಾ ಹೇಳಿ. ಅದಕ್ಕೊಂದು ವ್ಯವಸ್ಥೆ ನಾನೇ ಮಾಡಿಕೊಡುತ್ತೇನೆ'' ಅಂತ ಕೊನೆಯಲ್ಲಿ ಒಂದು ಮಾತು ಸೇರಿಸಿಬಿಟ್ಟಫಿ.

ಯತೀಶ್ ಮತ್ತು ಶ್ರೀಕರ್ ನಿಜಕ್ಕೂ ಗಲಿಬಿಲಿಗೊಂಡದ್ದೇ ಆವಾಗ. ಅಮರ್ ಆಳ್ವಾನನ್ನು ಹೆದರಿಸಿ, ಬೆದರಿಸಿ ರಕ್ಷಣೆ ನೀಡಿಯಾರು ಎಂದು ಇಲ್ಲಿಗೆ ಬಂದರೆ ಇವರು ಕೊಲೆಯ ಮಾತಾಡುತ್ತಿದ್ದಾರೆ. ಈಗಷ್ಟೇ ಮೀಸೆ ಚಿಗುರಿ ಕಾಲೇಜು ಮೆಟ್ಟಿಲು ಹತ್ತುತ್ತಿದ್ದೇವೆ. ಅಂತಹದ್ದರಲ್ಲಿ ಇವರು ಕೊಲ್ಲಲು ಹೇಳುತ್ತಿದ್ದಾರೆ ಅದೇನು ತಮಾಷೆಯ ಮಾತಾ? ಅಮರ್ ಆಳ್ವನನ್ನು ಎದುರು ಹಾಕಿಕೊಳ್ಳುವ ಗಂಡಸು ಅಂಡರ್‌ವರ್ಲ್ಡ್‌ನಲ್ಲಿ ಹುಟ್ಟೇ ಇಲ್ಲ ಅಂತ ನಂಬಿಕೊಂಡಿದ್ದ ಕಾಲ ಅದು. ಅಂತದ್ದರಲ್ಲಿ ಬಾಯಿ ಲೋಗ್‌ಗಳು ಇದೆಂಥ ಮಾತನಾಡುತ್ತಿದ್ದಾರೆ? ಅಂತ ಯತೀಶ್ ಮನಸ್ಸಿನಲ್ಲೇ ಯೋಚಿಸಿದ. 'ಅದು ನಮ್ಮಿಂದಾಗುವ ಕೆಲಸವಾ ಅಣ್ಣಫಿ?' ಅಂತ ಧೈರ್ಯ ಮಾಡಿ ಕೇಳಿಯೂ ಬಿಟ್ಟಫಿ.



ಮುತ್ತಪ್ಪ ರೈ

'ಯಾಕೆ ಸಾಧ್ಯವಿಲ್ಲಫಿ?' ಅಂತ ಪ್ರಶ್ನಿಸಿದವರು ದುಬೈನಲ್ಲಿದ್ದ ಅಶೋಕ್ ಶೆಟ್ಟಿಫಿ, ಮಾತುಕತೆಯ ಮಧ್ಯೆ ಅವರೊಂದಿಗೆ ಯತೀಶ್‌ನನ್ನು ರಘು ಮಾತನಾಡಿಸಿದ್ದಫಿ. 'ಯಾಕೆ, ಅಮರ್ ಎದೆಗೆ ಗುಂಡು ನುಗ್ಗುವುದಿಲ್ಲವಾ?' ಅಂತಲೂ ಕೇಳಿದ್ದಾರೆ. 'ಏನೋ ನೀವು ಹೇಗೆಂದರೆ ಹಾಗೆ' ಅಂತ ಯತೀಶ್ ಅನ್ನುವಲ್ಲಿಗೆ ಆವತ್ತಿನ ಮಾತುಕತೆ ಮುಗಿದಿತ್ತುಫಿ.

ಹವಾಲ ಹಣದ ವಿವಾದ ಪರಿಹರಿಸಲು ಅಮರ್‌ನನ್ನು ಶಿರ್ವದ ನಿರ್ದಿಷ್ಟ ಜಾಗಕ್ಕೆ ಕರೆಯುವುದು. ಆತ ತನ್ನ ತಂಡದೊಂದಿಗೆ ಬಂದಾಗ ಅವರೆಲ್ಲರನ್ನು ಅಲ್ಲಿಯೇ ಕೊಂದುಬಿಡುವುದು. ಅಂತದ್ದೊಂದು ಐಡಿಯ ಅಶೋಕ್ ಶೆಟ್ಟಿ ಮನಸ್ಸಿನಲ್ಲಿತ್ತುಫಿ. ಅದಕ್ಕಾಗಿ ಮುಂಬೈನಿಂದ ಮೂವರು ಶಾರ್ಪ್ ಶೂಟರ್‌ಗಳನ್ನು ಕಳುಹಿಸಿಕೊಟ್ಟಿದ್ದರು. ನಿರ್ಧರಿಸಿದಂತೆ ಮಧ್ಯವರ್ತಿ ಒಬ್ಬರ ಮೂಲಕ ಮಾತುಕತೆಗೆ ಬರುವಂತೆ ಹೇಳಲಾಯಿತು. ಆದರೆ ಅಮರ್ ಬಂದಿರಲಿಲ್ಲಫಿ. ಒಂದೊಮ್ಮೆ ಬಂದಿದ್ದೇ ಆದರೆ ಆವತ್ತು ಅಲ್ಲಿ ದೊಡ್ಡದೊಂದು ಮಾರಣಹೋಮ ನಡೆದು ಹೋಗುತ್ತಿತ್ತುಫಿ ಅಂತ ಅಂಡರ್‌ವರ್ಲ್ಡ್ ಈಗಲೂ ಮಾತನಾಡಿಕೊಳ್ಳುತ್ತದೆ.

ಹತ್ಯೆಯ ಮೊದಲ ಸ್ಕೆಚ್ ವಿಫಲವಾದ ಬೆನ್ನಲ್ಲೇ ಎರಡನೇ ಸ್ಕೆಚ್ ತಯಾರಾಗತೊಡಗಿತು. ಒಂದು ವಾರ ಒಳಗಾಗಿ ಅಂಬಾಸಿಡರ್ ಕಾರು (ಎಫ್‌ಜಿ 6296) ಉಡುಪಿಯಿಂದ ಬಂತು. ಅದು ಅಮರ್ ಹುಡುಕಾಟಕ್ಕೆ ಮುಂಬೈನಿಂದ ಯುಎಸ್ ಕಾರ್ಬೈನ್ ಎಂಬ ಅನಾಹುತಕಾರಿ ವೆಪನ್, ಮೂರು ರಿವಾಲ್ವರ್ ಶಿರ್ವ ತಲುಪಿತು. ಕೊಲ್ಲಲು ಯತೀಶ್ ಮತ್ತಾತನ ಗ್ಯಾಂಗ್ ಅದಾಗಲಂ ತಾಯಾರಿಗಿಬಿಟ್ಟಿತ್ತುಫಿ.

ಎರ್ಮಾಳ್‌ನ ಸಮುದ್ರ ತೀರದ ದೊಡ್ಡ ಬಂಗಲೆಯ ಹಿತ್ತಲಿನಲ್ಲಿ ಹಂತಕರಿಗೆ ದಿನಗಟ್ಟಲೆ ಗುಂಡು ಹಾರಿಸುವ ತರಬೇತಿ ನೀಡಲಾಯಿತು. ಯತೀಶ್ ಶೆಟ್ಟಿ ಮಾತ್ರ ಮನೆ ಸಮೀಪದ ಮರಕ್ಕೆ ಗುರಿ ಇಟ್ಟು ಪದೇಪದೇ ಪ್ರಾಕ್ಟೀಸ್ ಮುಂದುವರಿಸಿದ. ಮುಂಬೈನ ಪಾತಕಿ, ಅಶೋಕ್ ಶೆಟ್ಟಿಯ ನಂಬಿಕೆಯ ಭಂಟ ಬಾಲಕೃಷ್ಣ ಶೆಟ್ಟಿ ಯಾನೆ ಬಾಲೇಶ ಎಂಬಾತನೂ ಈ ಹಂತದಲ್ಲಿ ಹಂತಕರಿಗೆ ಜೊತೆಯಾದ.

ಈ ನಡುವೆ ಕಾಪೂರಿನ ಸಪ್ತಗಿರಿ ಹೋಟೆಲ್ ಯತೀಶ್ ಮತ್ತಾತನ ಸಹಚರರು ವಾಸ್ತವ್ಯ ಮಾಡಿದ್ದರು. ಅದೊಂದು ದಿನ ಮಂಗಳೂರಿನ ಹೋಟೆಲ್ ಮೋತಿ ಮಹಲ್ ರೂಂನಲ್ಲಿದ್ದ ಅಮರ್‌ಗೆ ದೂರವಾಣಿ ಕರೆ ಮಾಡಿದ ಯತೀಶ್, ''ಈ ಗೊಂದಲ ಗಲಾಟೆ ಸಾಕಾಗಿದೆ. ದರೋಡೆ ಮಾಡಿದ ಹಣದಲ್ಲಿ ಒಂದಷ್ಟು ಖರ್ಚಾಗಿದೆ. ಉಳಿದದ್ದನ್ನು ಹಿಂದಿರುಗಿಸುತ್ತೇನೆ. ಸಪ್ತಗಿರಿ ಹೋಟೆಲ್‌ಗೆ ಬನ್ನಿ'' ಅಂದಿದ್ದಾನೆ.

ಅಮರ್ ಹೋಟೆಲ್ ರೂಮ್‌ನಿಂದ ಹೊರಡಲು ಸಿದ್ಧತೆ ನಡೆಸುವಷ್ಟರಲ್ಲಿಯೇ ಅದೇ ರೂಂಗೆ ಮತ್ತೊಂದು ಅಂತರಾಷ್ಟ್ರೀಯ ಕರೆ ಬಂದಿತ್ತುಫಿ. 'ವಿಷಯ ಹೀಗಿದೆ' ಅಂತ ಅಮರ್ ಹೇಳಿದ್ದು ರೂಂನಲ್ಲಿದ್ದವರಿಗೂ ಕೇಳಿಸಿತು. ''ಯಾವ ಕಾರಣಕ್ಕೂ ಸಪ್ತಗಿರಿ ಹೋಟೆಲ್‌ಗೆ ಹೋಗಬೇಡ. ಅಲ್ಲಿ ನಿನ್ನ ಮಾರಣ ಹೋಮಕ್ಕೆ ಸಿದ್ಧತೆ ನಡೆದಿದೆ'' ಎಂದು ಹೇಳಿದ ವ್ಯಕ್ತಿ ಫೋನ್ ಡಿಸ್ಕನೆಕ್ಟ್ ಮಾಡಿದ್ದರು.

ದುಬೈನಿಂದ ಮಾತನಾಡಿದ್ದು ಶರತ್ ಶೆಟ್ಟಿಯಾ?

ಗೊತ್ತಿಲ್ಲಫಿ!

ಸಪ್ತಗಿರಿಗೆ ಹೋಗುವುದನ್ನು ಅಮರ್ ರದ್ದುಪಡಿಸುತ್ತಿದ್ದಂತೆಯೇ, ಅತ್ತ ಯತೀಶ್‌ನನ್ನು ಸಂಪರ್ಕಿಸಿದ ಅಶೋಕ್ ಶೆಟ್ಟಿ ತಕ್ಷಣ ಹೋಟೆಲ್ ಖಾಲಿ ಮಾಡುವಂತೆ ಸೂಚಿಸಿದ್ದರು. ಆ ಹೊತ್ತಿಗಾಗಲೇ ಶರತ್ ಶೆಟ್ಟಿ ಗೇಮ್ ಪ್ಲಾನ್ ಅವರಿಗೆ ಗೊತ್ತಾಗಿ ಹೋಗಿತ್ತುಫಿ!

ಇದಾದ ಕೆಲವು ದಿನಗಳ ನಂತರ... ನಾಲ್ವರು ಹಂತಕರು ಪಣಂಬೂರಿನ ವುಡ್‌ಲ್ಯಾಂಡ್ ಹೋಟೆಲಿಗೆ ಬಂದಿಳಿದರು. ನಂತರ ಕಂಕನಾಡಿಯ ಫ್ಲಾಟ್ ಒಂದಕ್ಕೆ ವಾಸ್ತವ್ಯ ಬದಲಾಯಿಸಿಕೊಂಡರು. ಅದು ಸಿಬಿಐ ನಿವೃತ್ತ ಅಽಕಾರಿಯ ಒಡೆತನದ್ದುಫಿ!

ಒಂದು ವಾರಕ್ಕೂ ಹೆಚ್ಚು ಕಾಲ ಮಂಗಳೂರಿನಲ್ಲಿ ಹಂತಕರು ಅಮರ್‌ನ ಬೆನ್ನು ಬಿದ್ದಿದ್ದರು. ಆತ ಇಂತಹ ನಿರ್ದಿಷ್ಟ ಸ್ಥಳದಲ್ಲಿದ್ದಾನೆ ಎಂಬ ಮಾಹಿತಿ ಸಿಗುತ್ತಿತ್ತಾದರೂ ಅಲ್ಲಿಗೆತಲುಪುವ ಹೊತ್ತಿಗಾಗಲೇ ಅಮರ್ ಅಲ್ಲಿರುತ್ತಿರಲಿಲ್ಲಫಿ. ಆತನ ಚಾಣಾಕ್ಷತೆ, ನಡಿಗೆಯ ವೇಗ ಹಂತಕರಲ್ಲಿ ಅಚ್ಚರಿ, ಅಸಹನೆ ಎರಡನ್ನು ಒಮ್ಮೆಲೇ ಉಂಟು ಮಾಡುತ್ತಿತ್ತುಫಿ. ಮತ್ತೊಂದು ದಿನ ಹಂಪನಕಟ್ಟೆ ಸಿಗ್ನಲ್‌ನಲ್ಲಿ ಹಂತಕರಿದ್ದ ಅಂಬಾಸಿಡರ್ ಕಾರಿನ ಬಲ ಬದಿಗೇ ಅಮರ್ ಫಿಯೆಟ್ ಕಾರಿನಲ್ಲಿ ಕಾಣಿಸಿಕೊಂಡಿದ್ದರು ಆದರೆ ಟಾರ್ಗೆಟ್ ಸಾಧ್ಯವಾಗಿರಲಿಲ್ಲಫಿ. ರಿವಾಲ್ವರ್ ಅಸೆಂಬಲ್ ಮಾಡುವಷ್ಟರಲ್ಲಿ ಕಾರು ಹೊರಟು ಹೋಗಿತ್ತುಫಿ. ಅಪಾಯದ ಯಾವ ಮುನ್ಸೂಚನೆಯೂ ಗೊತ್ತಿರದ ಅಮರ್ ತನ್ನ ಮುದ್ದಿನ ಮಗಳ ಮೊದಲನೇ ಬರ್ತಡೇ ಆಮಂತ್ರಣ ಪತ್ರಿಕೆ ಹಂಚುವಲ್ಲಿ ಬ್ಯುಸಿಯಾಗಿದ್ದರು.

ಅಮರ್ ಆಳ್ವಾರ ನಿತ್ಯದ ಚಲನವಲನಗಳನ್ನು ಯತೀಶ್ ಟೀಮ್ ಗಮನಿಸುತ್ತಲೇ ಇತ್ತುಫಿ. ಒಂದಿಡೀ ವಾರದ ರೌಂಡಿಂಗ್ ಅದು. ಯತೀಶ್ ಮತ್ತು ಶ್ರೀಕರ್ ತಯಾರಿ ಅದೆಷ್ಟು ಪಕ್ಕಾ ಆಗಿತ್ತೆಂದರೆ ಗುಂಪಿನಲ್ಲಿದ್ದಾಗ ಅಮರ್ ಅದೆಷ್ಟರ ಮಟ್ಟಿಗೆ ಮೈ ಮರೆಯುತ್ತಾರೆ ಮತ್ತು ಅಪರಿಚಿತರನ್ನು ಅವರ ಹುಡುಗರು ಎಷ್ಟು ಹತ್ತಿರದ ತನಕ ಬಿಟ್ಟುಕೊಳ್ಳುತ್ತಾರೆ ಅನ್ನುವುದನ್ನು ಗಮನಿಸಿದ್ದರು. ಮಂಗಳೂರಿನ ಮಿಲಾಗ್ರೀಸ್ ಸುತ್ತಮುತ್ತ ಅಮರ್ ಚಲನವಲನಗಳನ್ನು

☞ 14

### ಧಾರವಾಡ ವಿದ್ಯಾಗಿರಿ ಇನ್ಸ್‌ಪೆಕ್ಟರ್ ಸಂಗಮೇಶ ದಿಡಿಗಿನಹಾಳ ತಂಡದ ಕಾರ್ಯಾಚರಣೆ...

# 'ಹನಿಟ್ರ್ಯಾಪ್' ಮಾಡಿ ಪರ ಪುರುಷರನ್ನು ಬಲೆಗೆ ಬೀಳಿಸಿ ಲಕ್ಷಫಿ... ಲಕ್ಷ ಹಣ ಸುಲಿಗೆ ಮಾಡುತ್ತಿದ್ದ ಇಬ್ಬರು ಮಹಿಳೆಯರು ಸೇರಿದಂತೆ ನಾಲ್ವರು ವಂಚಕರು ಅಂದರ್!

'ಹನಿಟ್ರ್ಯಾಪ್' ಇಂದುರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸುದ್ದಿ ಮಾಡುತ್ತ ಸದ್ದಿಲ್ಲದೇ ಎಂತೆಂತಹ ಘಟಾನುಘಟಿಗಳ ಭವಿಷ್ಯವನ್ನೇ ಬುಡುಮೇಲು ಮಾಡಿದೆ. ಇದರಲ್ಲಿ ಉದ್ಯಮಿಗಳು, ಚಿತ್ರನಟರು, ಅಧಿಕಾರಿಗಳು, ಶ್ರೀಮಂತರು, ರಾಜಕಾರಣಿಗಳು ಸಿಲುಕಿಕೊಂಡು ಹೊರಬರದೇ ಪರಿತಪಿಸುತ್ತಿದ್ದಾರೆ. ಮರ್ಯಾದೆಗೆ ಹೆದರಿ ಇದ್ದು-ಬಿದ್ದುದೆಲ್ಲವನ್ನು ಕಳೆದುಕೊಂಡು ಬೀದಿಗೆ ಬಂದವರು ಇದ್ದಾರೆ. ಕೆಲವ್ರೊಬ್ಬರು ಹಣ ಕೊಡಲು ಆಗದೇ ಆತ್ಮಹತ್ಯೆ ಮಾಡಿಕೊಂಡವರು ಇದ್ದಾರೆ. ಇತ್ತೀಚಿಗಂತೂ 'ಹನಿಟ್ರ್ಯಾಪ್' ಒಂದು ಫ್ಯಾಷನ್ ಆಗಿಬಿಟ್ಟಿದೆ. ಎಂತಹ ಹೈ ಪ್ರೊಫಾಯಿಲ್ ಸುಂದರಿಯರು ಇದನ್ನೇ ಒಂದು ಉದ್ಯೋಗವನ್ನಾಗಿರಿಸಿಕೊಂಡು ಐಷಾರಾಮಿ ಜೀವನಕ್ಕೆ ವಾಲಿದ್ದಾರೆ.






'ಹನಿಟ್ರ್ಯಾಪ್' ಗ್ಯಾಂಗ್‌ನ ಖದೀಮರಾದ ರವಿ ಆಕಾಶ ಉಪ್ಪಾರ, ಗಜಾಲಾಬಾನು ಅ|| ಅಂಜು ಅ|| ಪರ್ವಿನ್, ರೇಣುಕಾ ಅ|| ರಿಯಾನಾ ಆಕಾಶ ಉಪ್ಪಾರ ಹಾಗೂ ಮಲ್ಲಿಕ್‌ಜಾನ್

**ಐಷಾರಾಮಿ ಜೀವನ ಸಾಗಿಸುವುದಕ್ಕೆ ಇಬ್ಬರು ಮಹಿಳೆಯರು ಸಾಮಾಜಿಕ ಜಾಲತಾಣಗಳಲ್ಲಿ ಪರ ಪುರುಷರ ಪರಿಚಯ ಮಾಡಿಕೊಂಡು ಅವರ ಮೊಬೈಲ್ ನಂಬರ್ ಪಡೆದು ಸಂಪರ್ಕ ಸಾಧಿಸಿ, ತೀರಾ ಸಲುಗೆ ಬೆಳೆಸಿಕೊಂಡು ಉಪಾಯವಾಗಿ ತಮ್ಮ ಮನೆಗೆ ಕರೆಸಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ಪರ ಪುರುಷರೊಂದಿಗೆ ಸರಸ-ಸಲ್ಲಾಪದ, ಏಕಾಂತದ ತೀರಾ ಅಸಹ್ಯ ಎನಿಸುವಂತಹ ಫೋಟೋ, ವ್ಹಿಡಿಯೋಗಳನ್ನು ಮಾಡಿಕೊಂಡು ತಮ್ಮ ಇಬ್ಬರು ಪುರುಷ ಸಹಚರರನ್ನು ಬಳಸಿಕೊಂಡು ಹಣಕ್ಕಾಗಿ ಇನ್ನಿಲ್ಲದ ಬ್ಲಾಕ್‌ಮೇಲ್ ಕೃತ್ಯ ಆರಂಭಿಸುತ್ತಿದ್ದರು. ಇತ್ತೀಚಿಗೆ ಹುಬ್ಬಳ್ಳಿ-ಧಾರವಾಡದಲ್ಲಿ ರಾಯಚೂರು ಜಿಲ್ಲೆಯ ಮಸ್ಕಿ ಪಟ್ಟಣದ ಆಗರ್ಭ ಶ್ರೀಮಂತ ರೈತನಿಗೆ ಇಬ್ಬರು ಮಹಿಳೆಯರು ಹನಿಟ್ರ್ಯಾಪ್ ಮಾಡಿ 50 ಲಕ್ಷ ರೂ. ಹಣ ಪೀಕುವುದಲ್ಲದೇ ಇನ್ನೂ ಹೆಚ್ಚಿನ ಹಣಕ್ಕೆ ಬೇಡಿಕೆಯಿಟ್ಟು ಕಾಡಿಸಿದ್ದಾರೆ. 'ಹನಿಟ್ರ್ಯಾಪ್'ಗೆ ಒಳಗಾದ ರೈತ ಧಾರವಾಡದ ವಿದ್ಯಾನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾನೆ. ಪ್ರಕರಣದ ಬೆನ್ನುಬಿದ್ದ ಇನ್ಸ್‌ಪೆಕ್ಟರ್ ಸಂಗಮೇಶ ದಿಡಿಗಿನಹಾಳ ಅವರ ತಂಡ 'ಹನಿಟ್ರ್ಯಾಪ್'ನ ಇರ್ವರು ಮಹಿಳೆಯರು, ಇರ್ವರು ಪುರುಷ ಸೇರಿದಂತೆ ನಾಲ್ವರನ್ನು ಬಂಧಿಸಿ ಜೈಲಿಗಟ್ಟಿದ್ದಾರೆ. ಬಂಧಿತರಿಂದ ಸ್ಕೋಡಾ ಕಾರು, 5.50 ಲಕ್ಷ ರೂ. ನಗದು ಹಣ, 6.63 ಲಕ್ಷ ರೂ. ಮೌಲ್ಯದ ಚಿನ್ನಾಭರಣ, 4 ಮೊಬೈಲ್ ಸೇರಿದಂತೆ ಒಟ್ಟು 14.73 ಲಕ್ಷ ರೂ. ಮೌಲ್ಯದ ಸ್ವತ್ತನ್ನು ವಶಪಡಿಸಿಕೊಂಡಿದ್ದಾರೆ.**



ಕಮೀಷನರ್ ಎನ್. ಶಶಿಕುಮಾರ್



ಡಿಸಿಪಿ (ಲಾ) ಮಹಾನಿಂಗ ನಂದಗಾವಿ

ಆದರೆ ಕೊನೆಗೆ ಖಾಕಿ ಕೈಯಲ್ಲಿ ಸಿಕ್ಕು ಪರಿತಪಿಸುತ್ತಾರೆ. ಇಂತಹುದೇ ಒಂದು 'ಹನಿಟ್ರ್ಯಾಪ್' ಪ್ರಕರಣ ಹುಬ್ಬಳ್ಳಿ-ಧಾರವಾಡದಲ್ಲಿ ವರದಿಯಾಗಿದೆ. ಅದರ ಕುರಿತಾಗಿ ಮಾಹಿತಿ ಇಲ್ಲಿದೆ.

**ಐಷಾರಾಮಿ ಜೀವನದ ಕನಸು...**

'ಮೈ ಮುರಿದು ದುಡಿದು ತಿಂದರೆ ದೇವರ ಹೆದರಿಕೆಯೂ ಇರಲಾರದು.' ಆದರೆ ಇತ್ತೀಚಿಗೆ ಐನಾತಿ ಯುವಕ-ಯುವತಿಯರು ಐಷಾರಾಮಿ ಜೀವನದ ಮರೀಚಿಕೆಯ ಬೆನ್ನೇರಿ, ಸುಲಭವಾಗಿ ದುಡ್ಡು ಮಾಡಲು ವಾಮ ಮಾರ್ಗ ಬಳಸಿ ಕೊನೆಗೆ ಕಾನೂನಿನ ಕುಣಿಕೆಗೆ ಸಿಕ್ಕು ಬೀಳುತ್ತಾರೆ. ಇಲ್ಲೂ ಕೂಡಾ ಆದದ್ದು ಇಷ್ಟೇಫಿ...! ಇಬ್ಬರು ಮಹಿಳೆಯರು, ಇಬ್ಬರು ಪುರುಷರು ಸೇರಿಕೊಂಡು ದಿಢೀರ್ ದುಡ್ಡು ಮಾಡಲು ಸಂಚು ರೂಪಿಸುತ್ತಾರೆ. ಅದು ಪರ ಪುರುಷರ ಮುಂದೆ ತಮ್ಮ ಬೆತ್ತಲೆ ದೇಹ ತೋರಿಸಿಕೊಂಡು ಅದನ್ನು ಫೋಟೋ, ವ್ಹಿಡಿಯೋ ಮಾಡಿಕೊಂಡು ನಂತರ ತಮ್ಮ ಪುರುಷ ಸಹಚರರಿಂದ ಬ್ಲ್ಯಾಕ್‌ಮೇಲ್ ಮಾಡಿ ಹಣ ಪೀಕುವ ಕೆಲಸ... ಒಮ್ಮೆ ಇಂತಹ ಜಾಲದಲ್ಲಿ ಸಿಲುಕಿದ ವ್ಯಕ್ತಿ ಹೊರ ಬರುವುದು ಅಷ್ಟು ಸರಳವಲ್ಲಫೆ. ಹುಬ್ಬಳ್ಳಿ-ಧಾರವಾಡ ಮೂಲದ 'ಹನಿಟ್ರ್ಯಾಪ್' ಗ್ಯಾಂಗ್

**ಧಾರವಾಡ**
✍ ಮನ್ನಾಪೂರ


ನಲ್ಲಿ ಗಂಡ-ಹೆಂಡತಿ ಪ್ರತ್ಯಕ್ಷ ಸೂತ್ರಧಾರರು ಎಂದರೆ ಅಚ್ಚರಿ ಪಡಬೇಕಾಗಿಲ್ಲಫೆ.

**ಹನಿಟ್ರ್ಯಾಪ್‌ಗೆ ಮುಂದಾದರು...**

ಇಲ್ಲಿ ಐನಾತಿ ಆಕಾಶ ರವಿ ಉಪ್ಪಾರ ಎಂಬಾತನಿಗೆ ಹುಬ್ಬಳ್ಳಿ ಮೂಲದ ಮಲ್ಲಿಕ್‌ಜಾನ್ ಮೆಹಬೂಬಸಾಬ ನದಾಫ ಎಂಬ ಮಹಾ ದುಷ್ಟ ಸ್ನೇಹಿತ ಇರುತ್ತಾನೆ. ಇವರಿಬ್ಬರು ದಂಡ-ಪಿಂಡಗಳು. ಹೇಗಾದರೂ ಮಾಡಿ ಸುಲಭವಾಗಿ ಹಣ ಹೇಗೆ ಮಾಡಬೇಕು...? ಹೀಗೆ ಸುಲಭವಾಗಿ ಬಂದ ಹಣದಿಂದ ಐಷಾರಾಮಿ ಜೀವನ ಸಾಗಿಸಬೇಕೆಂಬ ಕನಸು ಕಂಡಿದ್ದವರು. ಇದಕ್ಕೆ ಆಕಾಶ ಉಪ್ಪಾರನ ಹೆಂಡತಿ ರೇಣುಕಾ ಅಲಿಯಾಸ್ ರಿಯಾನಾ ಸಾಥ್ ನೀಡುತ್ತಾಳೆ. ಆಶ್ಚರ್ಯವೆಂದರೆ ಗಂಡ-ಹೆಂಡತಿ ಇಲ್ಲಿ ಹಣಕ್ಕಾಗಿ ಎಂತಹ ಕೆಲಸಕ್ಕೂ ಸಿದ್ಧರಾಗುತ್ತಾರೆ. ರೇಣುಕಾಳಿಗೆ ಹುಬ್ಬಳ್ಳಿ ಮೂಲದ ಗಜಲಾಬಾನು ಅಲಿಯಾಸ್ ಅಂಜು ಅಲಿಯಾಸ್ ಪರ್ವಿನ್ ತಂದೆ ಬಷೀರ್ ನಗರಿ ಎಂಬಾಕೆ ಪರಿಚಯದವಳಿರುತ್ತಾಳೆ. ಗಜಲಾಬಾನು ಹಣಕ್ಕಾಗಿ ಎಂತಹ ಹೇಸಿಗೆ ತಿನ್ನುವ ಕೆಲಸಕ್ಕಾದರೂ ಸೈ ಎನಿಸಿದ್ದಳು. ಈ ನಾಲ್ಕು ಜನರು ಸೇರಿಕೊಂಡು ಸುಲಭ ಹಣ ಗಳಿಕೆಯ ದಾರಿ ಎಂದರೆ 'ಹನಿಟ್ರ್ಯಾಪ್' ಮಾಡುವುದು. ಅದಕ್ಕೆ ಗಜಲಾಬಾನು ಒಪ್ಪಿಕೊಂಡಳು. ಗಜಲಾಬಾನುವಿಗೆ ಎಲ್ಲಾ ರೀತಿಯಿಂದಲೂ ಸಹಾಯ-ಸಹಕಾರ ನೀಡುವುದಾಗಿ ರೇಣುಕಾ ಉಪ್ಪಾರ ಒಪ್ಪಿಕೊಂಡಳು. ಸಂಪೂರ್ಣವಾಗಿ 'ಹನಿಟ್ರ್ಯಾಪ್' ಕುರಿತು ಸಂಚು ರೂಪಿಸಲಾಯಿತು. ಆಕಾಶ ಮತ್ತು ಮಲ್ಲಿಕ್‌ಜಾನ್ ತಾವು ನಕಲಿ ಪೊಲೀಸ್ ಅಧಿಕಾರಿಗಳಾಗಿ 'ಹನಿಟ್ರ್ಯಾಪ್'ಗೆ ಒಳಗಾದ ಪರ ಪುರುಷರನ್ನು ಬ್ಲ್ಯಾಕ್‌ಮೇಲ್ ಮಾಡುವುದಲ್ಲದೇ ಅವರಿಂದ ಹಣ ಕೀಳುವ ಕೆಲಸ ಮಾಡುತ್ತೇವೆ ಎಂದರು. ಬಂದ ಹಣದಲ್ಲಿ ನಾಲ್ವರು ಹಂಚಿಕೊಂಡು ಐಷಾರಾಮಿ ಜೀವನ ಮಾಡೋಣ ಎಂದು ಅಲಿಖಿತ ಒಪ್ಪಂದ ಮಾಡಿಕೊಂಡರು.



ಪಿಎಸ್‌ಐ ಪ್ರಮೋದ ಹೆಚ್.ಜಿ.



ಪಿಎಸ್‌ಐ ಬಾಬಾ ಎಮ್.

**ಸಾಮಾಜಿಕ ಜಾಲತಾಣದಲ್ಲಿ ಗಾಳ...**

ಅಕ್ಷರಶಃ ಗಜಾಲಾಬಾನು ಮೂರು ಬಿಟ್ಟವಳು. ದುಡ್ಡಿಗಾಗಿ ಎಂತಹವರ ಮುಂದೆ ಬೆತ್ತಲಾಗಲು ಸಹಿ. ಅವಳು ಸಾಮಾಜಿಕ ಜಾಲತಾಣಗಳಲ್ಲಿ ಪರಪುರುಷರನ್ನು ಸರ್ಚ್ ಮಾಡತೊಡಗಿದಳು. ಮೊದಲಿಗೆ 'ಹಾಯ್-ಹಲೋ' ಎಂದು ಶುರುಹಚ್ಚಿಕೊಂಡು, 'ಗುಡ್ ಮಾರ್ನಿಂಗ್, ಗುಡ್‌ನೈಟ್, ಸ್ವೀಟ್ ಡ್ರೀಮ್ಸ್' ಎನ್ನುತ್ತ ಇವಳ ಗಾಳಕ್ಕೆ ಸಿಕ್ಕವರ ಮೊಬೈಲ್ ನಂಬರ್ ಪಡೆದು ವ್ಯಾಟ್ಸಪ್ 'ಚಾಟ್' ಆರಂಭಿಸುತ್ತಿದ್ದಳು. ಟೈಮ್‌ಪಾಸ್



ಎಸಿಪಿ ಸಿದ್ದನಗೌಡ ಪಾಟೀಲ



ಇನ್ಸ್‌ಪೆಕ್ಟರ್ ಸಂಗಮೇಶ ದಿಡಿಗಿನಹಾಳ

ಮಾಡುವ ಪುರುಷರನ್ನು ಬ್ಲಾಕ್ ಮಾಡುತ್ತ ಉಪಯೋಗಕ್ಕೆ ಬರುವವರ ಜತೆಗೆ ತನ್ನ ತಂತ್ರವನ್ನು ಮುಂದುವರೆಸುವ ಚಾಲಾಕಿ ಈಕೆ. ಮೊದಮೊದಲು ಸಣ್ಣ-ಸಣ್ಣ ಕುಳಗಳಿಗೆ ಹನಿಟ್ರ್ಯಾಪ್ ಗಜಾಲಾಬಾನು ಮಾಡತೊಡಗಿದಳು. ಇದಕ್ಕೆ ರೇಣುಕಾ ಉಪ್ಪಾರ ತನ್ನ ಮನೆ ಇದಕ್ಕಾಗಿ ನೀಡುತ್ತಿದ್ದಳು... ಆಗ ದಿಢೀರನೇ ಗಜಾಲಾಬಾನುವಿನ ಜತೆಗೆ ಏಕಾಂತವಿದ್ದಾಗ ತಾನು ಪೊಲೀಸ್ ಅಧಿಕಾರಿ ಎಂದು ಆಕಾಶ ಉಪ್ಪಾರ ಎಂಟ್ರಿ ಕೊಡುತ್ತಿದ್ದನು. ಮತ್ತೋರ್ವ ವಂಚಕನಾದ ಮಲ್ಲಿಕ್‌ಜಾನ್ ಮೊಬೈಲ್ ನಂಬರನ್ನು ಧಾರವಾಡ ಡಿವೈಎಸ್ಪಿ ಎಂದು ಸೇವ್ ಮಾಡಿಕೊಂಡು ನಮ್ಮ ಸಾಹೇಬರು ಮಾತಾಡುತ್ತಾರೆಂದು ಪರಪುರುಷರಿಗೆ ಕೊಡುತ್ತಿದ್ದನು. ಆ ಕಡೆಯಿಂದ ವಂಚಕ ಮಲ್ಲಿಕ್‌ಸಾಬ್ ಜೋರಾಗಿ ಆವಾಜ್ ಹಾಕಿ ಹೆದರಿಸಿ 'ನಮ್ಮ ಸಿಬ್ಬಂದಿ ಹೇಳಿದಂತೆ ಕೇಳು ಇಲ್ಲದಿದ್ದರೆ ನಿನ್ನ ಪರಿಸ್ಥಿತಿ ನೆಟ್ಟಗಿರಲಾರದು' ಎಂದು ಫೋನ್ ಕಟ್ ಮಾಡುತ್ತಿದ್ದನು. ಹೀಗೆ ವಂಚಕರು ಆರಂಭದಲ್ಲಿ ಒಂದೆರಡು ಪ್ರಕರಣಗಳಲ್ಲಿ

☞ 12

ಮದುವೆಯಾದ ಹೊಸದರಲ್ಲಿ ಪತ್ನಿಗೆ ನೀನೆ ನನ್ನ ಚಿನ್ನಫಿ, ರನ್ನಫಿ, ಮುದ್ದು ಎಂದು ಹೇಳಿಕೊಂಡು ಆಕೆಯೊಂದಿಗೆ ಏಳು ತಿಂಗಳಿಂದ ಸಂಸಾರ ಮಾಡಿಕೊಂಡಿದ್ದ ಗಂಡನಿಗೆ ಪತ್ನಿ ಕಪ್ಪಾಗಿ ಕಾಣದವಳು, ವರದಕ್ಷಿಣೆ ಹಣ ತಂದುಕೊಡದಿದ್ದಕ್ಕೆ ನೀನೊಂದು ದೃಷ್ಟಿ ಬೊಟ್ಟುಫಿ, ನಿನ್ನಂತಹ ಕಪ್ಪಗಿರುವವಳು ನನ್ನಂಥವನ ಜೊತೆ ಸಂಸಾರ ಮಾಡಲು ನಿನಗೆ ಯೋಗ್ಯತೆ ಇಲ್ಲಫಿ. ಗಂಡ ಬೇಕಾದರೆ ನಾನೇಳಿದಷ್ಟು ಹಣ ತಂದು ಕೊಡು ಇಲ್ಲವಾದರೆ ಇಲ್ಲಿಂದ ಹೊರಡು ಎಂದು ಹೇಳಿ ಲಗೇಜ್ ಸಮೇತ ಮನೆಯಿಂದ ಪತ್ನಿಯನ್ನು ಹೊರ ಹಾಕಿ ಅವಮಾನಿಸಿದ ಗಂಡನ ದುರ್ನಡತೆಯಿಂದ ಬೇಸತ್ತ ನವವಿವಾಹಿತೆ ತವರುಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿರುವ ಘಟನೆ ಚಿಂತಾಮಣಿ ನಗರದಲ್ಲಿ ನಡೆದಿದೆ.


ಆರೋಪಿ ಗಂಡ ರಾಘವೇಂದ್ರ

# ಪತ್ನಿ ಕಪ್ಪಾಗಿದ್ದಾಳೆಂದು ಗಂಡ ಅವಮಾನಿಸಿದಕ್ಕೆ ಆತ್ಮಹತ್ಯೆ ಮಾಡಿಕೊಂಡ ನವವಿವಾಹಿತೆ!


ಬಿಂದುಶ್ರೀ ಬದುಕಿದ್ದಾಗ

**ಕೋಲಾರ**

✍ ಕೋಲಾರ ಮಂಜು

ಚಿಕ್ಕಬಳ್ಳಾಪುರ ಜಿಲ್ಲೆ ಮರಿಮಾಕನಹಳ್ಳಿ ಗ್ರಾಮದ ವಾಸಿ ಕೃಷಿಕ ದೊಡ್ಡಬೂದಲಪ್ಪ ಮತ್ತು ಭತ್ತೆಮ್ಮ ದಂಪತಿಗಳಿಗೆ ವೆಂಕಟರಮಣಪ್ಪಫಿ, ನಾರಾಯಣಸ್ವಾಮಿ, ದೇವರಾಜ್ ಎಂಬ ಮೂರು ಜನ ಮಕ್ಕಳಿರುತ್ತಾರೆ. ಎಲ್ಲರಿಗೂ ಮದುವೆಗಳಾಗಿದ್ದುಫಿ, ಕೊನೆ ಮಗನಾದ ದೇವರಾಜ್ ಸಾವಿತ್ರಮ್ಮ ಎಂಬುವವರನ್ನುಮದುವೆಯಾಗಿದ್ದುಫಿ, ಇವರಿಗೆಬಿಂದುಶ್ರೀ ಎಂಬ ಏಕಮಾತ್ರ ಪುತ್ರಿ ಇರುತ್ತಾಳೆ. ತಂದೆಗೆ ಸೇರಿದ ಪಿತ್ರಾರ್ಜಿತ ಆಸ್ತಿ ನಾಲ್ಕೂವರೆ ಎಕರೆ ಜಮೀನಿನಲ್ಲಿ ವ್ಯವಸಾಯದ ಜೊತೆಗೆ ಅವರಿಗೆ ಬೇಕಾದ ಕೆಲಸಗಳಲ್ಲಿ ತೊಡಗಿದ್ದ ಮಕ್ಕಳಲ್ಲಿ ಮೂರನೇ ಮಗ ಟೈಲರ್ ಕೆಲಸ ಮಾಡುತ್ತಿದ್ದರು. ಮಗಳು ಬಿಂದುಶ್ರೀ ಗ್ರಾಮದಲ್ಲಿನ ಶಾಲೆಯಲ್ಲಿ ಏಳನೇ ತರಗತಿ ಮುಗಿಸಿದ ಮೇಲೆ ಮುಂದಿನ ವಿದ್ಯಾಭ್ಯಾಸಕ್ಕಾಗಿ ಚಿಂತಾಮಣಿಯ ಹೈಸ್ಕೂಲ್‌ಗೆ ಸೇರಿಸಿದ್ದುಫಿ, ಬಿಂದುಶ್ರೀ ದಿನವು ಹಳ್ಳಿಯಿಂದ ಶಾಲೆಗೆ ಹೋಗಿ ಬರುವುದು ಕಷ್ಟವಾಗುತ್ತಿತ್ತುಫಿ. ಮೊಮ್ಮಗಳು ಕಷ್ಟಪಡುತ್ತಿರುವುದನ್ನು ನೋಡಿದ ಅಜ್ಜ-ತಾತ ಪಟ್ಟಣದ ಶಾಲೆಯಲ್ಲಿ ಚೆನ್ನಾಗಿ ಓದಿ ಒಳ್ಳೆಯ ಕೆಲಸಕ್ಕೆ ಸೇರಿ ಹೆಣ್ಣು ಮಗು ತನ್ನ ಕಾಲ ಮೇಲೆ ನಿಲ್ಲಲಿ ಎನ್ನುವ ಉದ್ದೇಶದಿಂದ ಮಗ ದೇವರಾಜ್‌ಗೆ ಹಳ್ಳಿ ಬಿಟ್ಟು ಚಿಂತಾಮಣಿಗೆ ಹೋಗಿ ಅಲ್ಲಿಯೇ ಮನೆ ಮಾಡಿ ಟೈಲರ್ ಕೆಲಸ ಮಾಡಿಕೊಂಡು, ಮಗಳನ್ನು ಚೆನ್ನಾಗಿ ಓದಿಸಿಕೊಂಡು ಇರುವಂತೆ ಹೇಳಿದರಲ್ಲದೆ ವಾರದಲ್ಲಿ ಒಂದೆರಡು ದಿನ ಹಳ್ಳಿಗೆ ಬಂದು ಹೋಗುವಂತೆ ತಿಳಿಸುತ್ತಾರೆ. ಅದರಂತೆ ದೇವರಾಜ್ ಕಳೆದ 10 ವರ್ಷದ ಹಿಂದೆ ಚಿಂತಾಮಣಿಯ ಗಾಂಽ ನಗರದಲ್ಲಿ ಮನೆಯೊಂದನ್ನು ತೆಗೆದುಕೊಂಡು ಹೆಂಡತಿ, ಮಗಳೊಂದಿಗೆ ವಾಸವಾಗಿದ್ದರು. ಎಸ್‌ಎಸ್‌ಎಲ್‌ಸಿಯಲ್ಲಿ ಫಸ್ಟ್ ಕ್ಲಾಸ್‌ನಲ್ಲಿ ಪಾಸ್ ಆದ ನಂತರ ಬಿಂದುಶ್ರೀ ನಗರದ ಸರ್ಕಾರಿ ಮಹಿಳಾ ಕಾಲೇಜಿಗೆ ಸೇರಿ ಪಿಯುಸಿ ನಂತರ ಇದೀಗ ಬಿಕಾಂ ಕೊನೆ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದಳು.

ಡಿಗ್ರಿ ಮುಗಿದ ಮೇಲೆ ಒಳ್ಳೆಯ ವರನನ್ನು ಹುಡುಕಿ ಮಗಳಿಗೆ ಮದುವೆ ಮಾಡಬೇಕೆಂದು ತಂದೆ ದೇವರಾಜ್ ವರನನ್ನು ಹುಡುಕುವ ಪ್ರಯತ್ನದಲ್ಲಿ ಇರಬೇಕಾದರೆ ಮಧ್ಯವರ್ತಿಯೊಬ್ಬರು ವರನ ಬಗ್ಗೆ ತಿಳಿಸಿದರು. ಇವರು ಹೊಸಕೋಟೆ ತಾಲ್ಲೂಕಿನ ಆವಲಹಳ್ಳಿ ಬಳಿ ಇರುವ ಹಿರಂಡಹಳ್ಳಿ ಗ್ರಾಮದ ವಾಸಿ ಕೇಂದ್ರ ರಕ್ಷಣಾ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಮುನಿರಾಜು ಮತ್ತು ಲತಾ ಎಂಬುವವರಿಗೆ ರಾಘವೇಂದ್ರ, ಮತ್ತು ನರಸಿಂಹ ಎಂಬ ಇಬ್ಬರು ಮಕ್ಕಳಿದ್ದುಫಿ, ದೊಡ್ಡ ಮಗ ರಾಘವೇಂದ್ರ ಕೆ.ಆರ್. ಪುರಂ ಬಳಿ ಇರುವ ಐಟಿಐ ಕಾರ್ಖಾನೆಯಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರೆ ಎರಡನೇ ಮಗ ನರಸಿಂಹ ಖಾಸಗಿ ಕಂಪನಿಯಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿರುತ್ತಾನೆ. ಹಿರಂಡಹಳ್ಳಿ ಸ್ವಂತ ಮನೆ ಮತ್ತು ಸ್ವಲ್ಪ ಜಮೀನು ಇರುವುದಾಗಿ ಹೇಳಿದರು. ಆಗ ದೇವರಾಜ್ ಈ ವಿಷಯವನ್ನು ತಮ್ಮ ಕುಟುಂಬದವರಿಗೆ ತಿಳಿಸಿ ಒಪ್ಪಿಗೆ ಪಡೆದು ವರನ ಕಡೆಯವರಿಗೆ ವಧು ನೋಡಲು ಬರುವಂತೆ ತಿಳಿಸುತ್ತಾರೆ. ಅದರಂತೆ 2024 ಜನವರಿ 19ರಂದು ಶುಕ್ರವಾರ ಮುನಿರಾಜು ಕುಟುಂಬದವರು ವಧುವನ್ನು ನೋಡಲು ಬಂದರು. ಮಧ್ಯವರ್ತಿಗಳ ಮೂಲಕ ವಧುವಿನ ತಂದೆ ದೇವರಾಜ್‌ಗೆ ಇರುವುದು ಒಬ್ಬಳೇ ಮಗಳು, ಅವರು ಸಂಪಾದನೆ ಮಾಡಿರುವ ಆಸ್ತಿಫಿ, ಹಣ ಹಾಗೂ ಹಳ್ಳಿಯಲ್ಲಿರುವ ಜಮೀನು ಎಲ್ಲವು ಮಗಳಿಗೆ ಸೇರುತ್ತದೆ ಎಂದು ಹೇಳಿದ್ದರು. ಬಿಂದುಶ್ರೀಯನ್ನು ಸೊಸೆಯಾಗಿ ಮಾಡಿಕೊಂಡರೆ ಅವಳಿಗೆ ಸೇರುವ ಹಣ, ಆಸ್ತಿ ಎಲ್ಲವು ನಮ್ಮದಾಗುತ್ತದೆ ಎನ್ನುವ ಉದ್ದೇಶದಿಂದ ಮುನಿರಾಜು ನಮಗೆ ಹೆಣ್ಣುಮಕ್ಕಳಿಲ್ಲಫಿ, ನಿಮ್ಮ ಮಗಳು ಬಿಂದುಶ್ರೀಯನ್ನು ನನ್ನ ಮಗ ರಾಘವೇಂದ್ರನೊಂದಿಗೆ ಮದುವೆ ಮಾಡಿಕಳುಹಿಸಿದರೆ ನಮ್ಮ ಮನೆಯಲ್ಲಿ ಮಗಳಂತೆ ನೋಡಿಕೊಳ್ಳುತ್ತೇವೆ. ಯಾವುದೇ ವರದಕ್ಷಿಣೆ, ಹಣವಾಗಲಿ, ಬಂಗಾರವಾಗಲಿ ಬೇಡ. ನಿಮ್ಮ ಮಗಳಿಗೆ ಏನು ಕೊಡುತ್ತೀರೋ ಅಷ್ಟನ್ನು ಕೊಟ್ಟು ಸರಳವಾಗಿ ಮದುವೆ ಮಾಡಿಕೊಟ್ಟರೆ ಸಾಕು ಎಂದು ಹೇಳಿದರು. ಅದಕ್ಕೆ ಬಿಂದುಶ್ರೀ ತಂದೆ ದೇವರಾಜ್ ಬೀಗರಿಗೆ ನಿಮ್ಮಂತಹ ಒಳ್ಳೆಯ ಜನರು ಈ ಪ್ರಪಂಚದಲ್ಲಿಯೇ ಇಲ್ಲಫಿ. ಸದ್ಯಕ್ಕೆ ಮಗಳು ಬಿಂದುಶ್ರೀ ಬಿಕಾಂನ ಕೊನೆಯ ಸೆಮಿಸ್ಟರಿನಲ್ಲಿ ವ್ಯಾಸಂಗ ಮಾಡುತ್ತಿದ್ದುಫಿ, ಪರೀಕ್ಷೆ ಮುಗಿದ ನಂತರ ಕಾರ್ತಿಕ ಮಾಸದಲ್ಲಿ ಮದುವೆ ಮಾಡೋಣ ಎಂದು ಹೇಳಿದರು. ಅದಕ್ಕೆ ಮುನಿರಾಡು ಎರಡು ಕಡೆ ಒಪ್ಪಿಗೆಯಾದ ಮೇಲೆ ತಡ ಮಾಡುವುದು ಬೇಡ ಮುಂದಿನ ತಿಂಗಳು ಮಾಘಮಾಸದಲ್ಲಿ ಮದುವೆ ಮಾಡಿದರೆ ಒಳ್ಳೆಯದು ಆಗುತ್ತದೆ ಎಂದು ಹೇಳಿದರು.

ಅದರಂತೆ ಮದುವೆ ಮಾತುಕತೆಗೆ ಹೆಣ್ಣಿನ ಕಡೆಯಿಂದ ಸಾವಿತ್ರಮ್ಮನ ಸೋದರಮಾವ ಮಹಾತ್ಮೆಪ್ಪಫಿ, ದೇವರಾಜ್‌ರವರ ಬಾವಮೈದುನ ದೇವರಾಜು, ಮಾವ ಕೃಷ್ಣಪ್ಪ ಹಾಗೂ ಗಂಡಿನ ಕಡೆಯಿಂದ ಗಂಡಿನ ತಂದೆ ಮುನಿರಾಜು, ತಾಯಿ ಲತಾ, ಸೋದರಮಾವ ಮಂಜು ಮುಂತಾದವರಸಮ್ಮುಖದಲ್ಲಿ ಕೊಟ್ಟುಫಿ, ತೆಗೆದುಕೊಳ್ಳುವುದರ ಬಗ್ಗೆ ಮಾತನಾಡಿದರಲ್ಲದೆ ಮದುವೆಯನ್ನು ಫೆಬ್ರವರಿ 21ರಂದು ಶ್ರೀಕ್ಷೇತ್ರ ಕೈವಾರದ ದಬ್ಬಕುಂಟೆ ಕಲ್ಯಾಣ ಮಂಟಪದಲ್ಲಿ ನಡೆಸಲು ನಿಶ್ಚಯಿಸಿದರು. ಮದುವೆ ಮಾತುಕತೆ ಸಂದರ್ಭದಲ್ಲಿ ಗಂಡಿನ ಕಡೆಯವರು ಮಗಳಿಗೆ ಹಾಗೂ ಅಳಿಯನಿಗೆ ನಿಮ್ಮ ಕೈಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಬಂಗಾರದ ಒಡವೆಗಳನ್ನು ಕೊಡಲು ಹೇಳಿದರು. ಅದರಂತೆ ಆರತಕ್ಷತೆಯ ದಿನ ಸಂಜೆ ಮಗಳು ಬಿಂದುಶ್ರೀ ಮತ್ತು ಅಳಿಯ ರಾಘವೇಂದ್ರನಿಗೆ ಸೇರಿ 220 ಗ್ರಾಂ ಬಂಗಾರದ ಒಡವೆಗಳನ್ನು ಕೊಟ್ಟರು. ಮದುವೆ ದಿನ ಬೆಳಿಗ್ಗೆ ಗಂಡಿನ ತಾಯಿ ಲತಾರವರು ಮಾತುಕತೆ ಸಂದರ್ಭದಲ್ಲಿ ಮಗನಿಗೆ ಏನು ಬೇಡ, ನಿಮ್ಮ ಮಗಳಿಗೆ ನೀವು ಏನು ಕೊಡುತ್ತೀರೋ ಕೊಟ್ಟು ಮದುವೆ ಮಾಡಿ ಮುಗಿಸಿ ಎಂದವರು, ಮಗನಿಗೆ 100 ಗ್ರಾಂ ಒಡವೆಯನ್ನು ವರದಕ್ಷಿಣೆಯಾಗಿ ತಂದುಕೊಟ್ಟರೇನೆ ನಿಮ್ಮ ಮಗಳ ಕುತ್ತಿಗೆಗೆ ನನ್ನ ಮಗ ತಾಳಿ ಕಟ್ಟುತ್ತಾನೆಂದು ಹೇಳಿಬಿಟ್ಟರು. ಆಗ ದೇವರಾಜ್ ಚಿಂತಾಮಣಿಗೆ ಹೋಗಿ ಇರುವ

☞ 5


ಆರೋಪಿಗಳಾದ ಮಾವ ಮುನಿರಾಜು, ಅತ್ತೆ ಲತಾ ಹಾಗೂ ಮೈದುನ ನರಸಿಂಹ


ಎಸ್ಪಿ ಕುಶಾಲ್ ಚೌಕ್ಸೆ


ಡಿವೈಎಸ್ಪಿ ಮುರುಳಿಧರ್


ಸಿಪಿಐ ವಿಜಯಕುಮಾರ್


ಆತ್ಮಹತ್ಯೆಗೆ ಶರಣಾದ ಬಿಂದುಶ್ರೀ

4 ☞

ಹಣದಲ್ಲಿ 60 ಗ್ರಾಂ ಚಿನ್ನದ ಒಡವೆಗಳನ್ನು ತಂದು ಗಂಡಿಗೆ ಕೊಟ್ಟರು. ನಂತರ ಯಾವುದೇ ತೊಂದರೆ ಇಲ್ಲದೆ ಮದುವೆ ನಡೆಯಿತು. ತಿರಂಗಚ್ಚಿ ಮತ್ತು ಮರಗಂಚ್ಚಿ ಶಾಸ್ತ್ರ ಮುಗಿದ ಮೇಲೆ ಅತ್ತೆ ಮನೆ ಸೇರಿದ ಬಿಂದುಶ್ರೀ ತನ್ನ ಅವರ ಮನೆಯವರು ತುಂಬಾ ಚೆನ್ನಾಗಿ ನೋಡಿಕೊಂಡಿದ್ದರು. ಮಗಳು ಸಂತೋಷವಾಗಿರುವುದನ್ನು ನೋಡಿದ ತಂದೆತಾಯಿಗೆ ಒಳ್ಳೆಯ ಮನೆಗೆ ನಮ್ಮ ಮಗಳು ಹೋಗಿ ಸುಖವಾಗಿ ಜೀವನ ಸಾಗಿಸುತ್ತಿದ್ದಾಳೆಂದು ಖುಷಿಯಾಗಿದ್ದರು.

### ಆತ್ಮಹತ್ಯೆ ಮಾಡಿಕೊಂಡ ಬಿಂದುಶ್ರೀ

ಮದುವೆ ಮಾತುಕತೆ ಸಂದರ್ಭದಲ್ಲಿ ಬಿಕಾಂ ಅಂತಿಮ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದರಿಂದ ಅದನ್ನು ಇನ್ನು ಐದು ತಿಂಗಳಲ್ಲಿ ಪೂರ್ತಿ ಮಾಡಿಕೊಳ್ಳಲು ಅವಕಾಶ ಕೊಡುವಂತೆ ಬಿಂದುಶ್ರೀ ತಂದೆ ಕೇಳಿದರು. ಅದರಂತೆ ಗಂಡಿನ ಮನೆಯವರು ಕಾಲೇಜಿಗೆ ಹೋಗಿ ಸೆಮಿಸ್ಟರ್‌ನ್ನು ಮುಗಿಸಿಕೊಳ್ಳಲು ಒಪ್ಪಿಗೆ ಸೂಚಿಸಿದ್ದರು. ಅದರಂತೆ ಕ್ಲಾಸ್ ಸ್ಟಾರ್ಟ್ ಆಗಿದ್ದಕ್ಕೆ ಬಿಂದುಶ್ರೀ ಹಿರಂಡಹಳ್ಳಿಯಿಂದ ದಿನವು ಚಿಂತಾಮಣಿಗೆ ಹೋಗಿ ಕಾಲೇಜು ಮುಗಿಸಿಕೊಂಡು ತವರುಮನೆಯಲ್ಲಿ ಸ್ವಲ್ಪ ಹೊತ್ತು ಇದ್ದು ನಂತರ ಗಂಡನ ಮನೆಗೆ ಹೋಗುತ್ತಿದ್ದರು. ದಿನವು ಇದೇ ರೀತಿ ಚಿಂತಾಮಣಿಗೆ ಹೋಗಿ ಬರಲು ತೊಂದರೆಯಾಗಿ ತವರುಮನೆಯಲ್ಲಿಯೇ ಎರಡು-ಮೂರು ತಿಂಗಳು ಉಳಿದುಕೊಂಡು ಕಾಲೇಜಿಗೆ ಹೋಗುತ್ತೇನೆ. ಶನಿವಾರ, ಭಾನುವಾರ ಮತ್ತು ರಜಾದಿನಗಳಲ್ಲಿ ಹಿರಂಡಹಳ್ಳಿಗೆ ಬರುವುದಾಗಿ ಹೇಳಿದಳು. ಅದಕ್ಕೆ ಒಪ್ಪಿಗೆ ಕೊಟ್ಟ ಗಂಡ, ಅತ್ತೆಫಿ, ಮಾವ ಮೂವರು ಸೇರಿಕೊಂಡು, ಬಿಕಾಂ ಅಂತಿಮ ಸೆಮಿಸ್ಟರ್ ಕ್ಲಾಸ್‌ಗೆ ಹೋಗುತ್ತಿರುವ ನೀನು ಡಿಗ್ರಿ ಮುಗಿಸಿಕೊಂಡು ನಮ್ಮ ಮನೆಗೆ ಬರುವಾಗ 20 ಲಕ್ಷ ಹಣ ಹಾಗೂ ಒಂದು ಕಾರನ್ನು ವರದಕ್ಷಿಣೆ ರೂಪದಲ್ಲಿ ತೆಗೆದು ಬಂದರೇನೆ ನಿನ್ನನ್ನು ಮನೆ ಒಳಕ್ಕೆ ಸೇರಿಸುತ್ತೇನೆ ಇಲ್ಲವಾದರೆ ಖಾಯಂ ಆಗಿ ನಿನ್ನ ತವರುಮನೆಯಲ್ಲಿಯೇ ಇದ್ದುಬಿಡು ಎಂದು ಹೇಳಿ ಕಳುಹಿಸಿದರು.


ಬಿಂದುಶ್ರೀಯ ತಾಯಿ ಸುಮಿತ್ರಮ್ಮ ಹಾಗೂ ತಂದೆ ದೇವರಾಜ್

ಈ ವಿಷಯವನ್ನು ತಂದೆ, ತಾಯಿಗೆ ತಿಳಿಸಿದಳು. ಅದಕ್ಕೆ ಅವರು ಕೇಳಿದಷ್ಟು ಹಣ ಕೊಡಲು ನಮ್ಮ ಬಳಿ ಇಲ್ಲಫಿ. ನೀನು ಸೆಮಿಸ್ಟರ್ ಮುಗಿಸಿಕೊಂಡು ಅತ್ತೆ ಮನೆಗೆ ಹೋಗುವಾಗ ನಮ್ಮ ಕೈಯಲ್ಲಿ ಆಗುವಷ್ಟು ಹಣವನ್ನು ಕೊಡುತ್ತೇವೆ. ನೀನು ತಲೆಕೆಡಿಸಿಕೊಳ್ಳದೆ ಡಿಗ್ರಿ ಮುಗಿಸಿಕೊಂಡು ಗಂಡನ ಮನೆಗೆ ಹೋದರೇ ಸಾಕಮ್ಮ ಎಂದು ಹೇಳಿದರು. ಅದರಂತೆ ಬಿಂದುಶ್ರೀ ಕಾಲೇಜಿಗೆ ಹೋಗಿ ಬರುತ್ತಿದ್ದವಳು ಆಗಾಗ ಗಂಡನ ಮನೆಗೆ ಹೋಗಿ ಬರುವುದನ್ನು ಮರೆಯದೆ ವಾರದಲ್ಲಿ ಎರಡು ದಿನ ಇದ್ದು ಬರುತ್ತಿದ್ದಳು. ತಿಂಗಳುಗಳು ಕಳೆಯುತ್ತಿದ್ದಂತೆ ಗಂಡ ರಾಘವೇಂದ್ರನಿಗೆ ಹಣದ ವ್ಯಾಮೋಹ ಹೆಚ್ಚಾಗಿ ಪತ್ನಿ ಬಿಂದುಶ್ರೀಗೆ ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆ ನೀಡಲು ಪ್ರಾರಂಭಿಸಿದನು. ತಪ್ಪಾಗಿರುವ ನಿನ್ನನ್ನು ಮದುವೆ ಮಾಡಿಕೊಳ್ಳಲು ಯಾರು ಮುಂದೆ ಬರದೆ ಇದ್ದಾಗ ನಿನ್ನಂತಹ ದೃಷ್ಟಿ ಬಟ್ಟನು ನಾನು ಮದುವೆ ಮಾಡಿಕೊಂಡು ಕನ್ಯಾಸೆರೆಯಿಂದ ಬಿಡಿಸಿದ್ದೇನೆ. ನಿನ್ನ ತಂದೆ ಸಂಪಾದನೆ ಮಾಡುತ್ತಿರುವ ಹಣ ಹಾಗೂ ಆಸ್ತಿ ಎಲ್ಲವು ನನಗೆ ಸೇರಿದ್ದುಫಿ, ನಾನು ಕೇಳಿದಷ್ಟು ಹಣವನ್ನು ತಂದು ಕೊಡದ ನೀನು ನನ್ನಂತಹ ಮನ್ಮಥನ ಜೊತೆ ಸಂಸಾರ ಮಾಡಲು ನಿನಗೆ ಯೋಗ್ಯತೆ ಇಲ್ಲವೆಂದು ಹೇಳಿ ಅವಮಾನ ಮಾಡಿ ಮನೆಯಿಂದ ಹೊರ ಹಾಕಿದನು. ಗಂಡನಿಂದಾದ ಅವಮಾನವನ್ನು ಸಹಿಸಿಕೊಂಡು ತವರುಮನೆಗೆ ಬಂದ ಬಿಂದುಶ್ರೀ ಬೇಸರದಿಂದಲೇ ಕಾಲ ಕಳೆಯುತ್ತಿದ್ದಳು.

ಸೆಪ್ಟೆಂಬರ್ 14ರಂದು ಕಾಲೇಜಿಗೆ ಹೋಗದೆ ಮನೆಯಲ್ಲಿಯೇ ಇದ್ದಳು. ಸಂಜೆ 5 ಗಂಟೆ ಸಮಯದಲ್ಲಿ ತಾಯಿ ಸಾವಿತ್ರಮ್ಮ ಗಂಗಮ್ಮನಪಾಳ್ಯದಲ್ಲಿರುವ ಶ್ರೀ ಗಂಗಾಭಿಕಾ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿಕೊಂಡು ಬರುವುದಾಗಿ ಮಗಳಿಗೆ ಹೇಳಿ ಹೊರಟರು. 5.15ಕ್ಕೆ ತಂದೆ ದೇವರಾಜ್ ಮನೆಗೆ ಬಂದರು. ಆಗ ಬಿಂದುಶ್ರೀ ಅಪ್ಪ ನನಗೆ ಅಲೂಗಡ್ಡೆ ಚಿಪ್ಸ್ ತಿನ್ನಬೇಕೆನ್ನಿಸುತ್ತಿದೆ. ಅದಕ್ಕೆ ನೀವು ಚಿಪ್ಸ್ ತೆಗೆದುಕೊಂಡು ಬರುವಾಗ ದೇವಸ್ಥಾನಕ್ಕೆ ಹೋಗಿರುವ ಅಮ್ಮನನ್ನು ಜೊತೆಯಲ್ಲಿಯೇ ಕರೆದುಕೊಂಡು ಬನ್ನಿ ಎಂದು ಹೇಳಿ ಕಳುಹಿಸಿದಳು. ಮಗಳು ಹೇಳಿದಂತೆ ತಂದೆ ದೇವರಾಜ್ ದೇವಸ್ಥಾನಕ್ಕೆ ಹೋಗಿ ಪತ್ನಿ ಸಾವಿತ್ರಮ್ಮನನ್ನು ಕರೆದುಕೊಂಡು ದ್ವಿಚಕ್ರ ವಾಹನದಲ್ಲಿ ಬರುವಾಗ ಚಾಟ್ಸ್ ಅಂಗಡಿಯಿಂದ ಚಿಪ್ಸ್‌ನ್ನು ತೆಗೆದುಕೊಂಡು ಮನೆಗೆ ಬಂದಾಗ ಸಂಜೆ 6.15 ಗಂಟೆ ಆಗಿತ್ತುಫಿ. ಮನೆಗೆ ಬಂದ ತಂದೆ, ತಾಯಿ ಮಗಳನ್ನು ಕರೆದು ಚಿಪ್ಸ್ ಕೊಡಲು ಮುಂದಾದರು. ಆದರೆ ಮಗಳು ಬಿಂದುಶ್ರೀಯ ಸುಳಿವೇ ಇಲ್ಲಫಿ. ತಕ್ಷಣ ರೂಂಗೆ ಹೋಗಿ ನೋಡಲಾಗಿ ಫ್ಯಾನ್‌ಗೆ ಬಟ್ಟೆಯಿಂದ ನೇಣು ಬಿಗಿದುಕೊಂಡಿರುವುದನ್ನು ನೋಡಿ ಗಾಬರಿ ಜೊತೆಗೆ ಭಯವಾಗಿ ಕೂಡಲೇ ಅಕ್ಕಪಕ್ಕದವರನ್ನು ಕೂಗಿ ಕರೆದಾಗ ಪಕ್ಕದ ಮನೆಯ ಶ್ರೀನಾಥ ಮತ್ತು ಇತರರು ಬಂದು ನೇಣಿನ ಕುಣಿಕೆಯಿಂದ ಬಿಡಿಸಿ ಕೆಳಗೆ ಇಳಿಸಿ ಆ್ಯಂಬುಲೆನ್ಸ್‌ನಲ್ಲಿ ನಗರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ಬಿಂದುಶ್ರೀಯನ್ನು ಪರೀಕ್ಷಿಸಿ ಮೃತಪಟ್ಟಿರುವುದಾಗಿ ಹೇಳಿದರು. ನಂತರ ಮೃತದೇಹವನ್ನು ಆಸ್ಪತ್ರೆಯ ಶವಗಾರಕ್ಕೆ ಸಾಗಿಸಲಾಯಿತು.



### ಅಳಿಯನ ವಿರುದ್ಧ ದೂರು

ಮಗಳು ಬಿಂದುಶ್ರೀ ಸಾವಿಗೆ ಕಾರಣರಾದವರ ವಿರುದ್ಧ ದೂರು ಕೊಡಲು ಮುಂದಾದ ತಂದೆ ದೇವರಾಜ್‌ರವರು ಸೆಪ್ಟೆಂಬರ್ 14ರಂದು ರಾತ್ರಿ 8 ಗಂಟೆಗೆ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆಗೆ ಹಾಜರಾಗಿ ಕಳೆದ ಏಳು ತಿಂಗಳ ಹಿಂದೆ ಆವಲಹಳ್ಳಿ ಬಳಿ ಇರುವ ಹಿರಂಡಹಳ್ಳಿ ಗ್ರಾಮದ ನಿವಾಸಿ ರಾಘವೇಂದ್ರ ಎನ್ನುವವರ ಜೊತೆ ನನ್ನ ಮಗಳು ಬಿಂದುಶ್ರೀ (22) ಎನ್ನುವವರ ಜೊತೆ ಮದುವೆ ಮಾಡಿಕೊಟ್ಟಿರುತ್ತೇನೆ. ಮದುವೆಯಾದ ಮೂರು ತಿಂಗಳ ನಂತರ ವರದಕ್ಷಿಣೆ ಹಣಕ್ಕಾಗಿ ಪೀಡಿಸುತ್ತಿದ್ದ ಧನದಾಹಿಗಳಾದ ಮಗಳ ಗಂಡ ರಾಘವೇಂದ್ರ, ಅತ್ತೆ ಲತಾ, ಮಾವ ಮುನಿರಾಜು, ಮೈದುನ ನರಸಿಂಹರವರು ನನ್ನ ಮಗಳಿಗೆ ನೀನು ಯಾಕೆ ನಿಮ್ಮ ತಂದೆಯಿಂದ ಇನ್ನೂ ಹಣ ತೆಗೆದುಕೊಂಡು ಬಂದಿಲ್ಲವೆಂದು ನನ್ನ ಮಗಳಿಗೆ ಅವಾಚ್ಯ ಶಬ್ದಗಳಿಂದ ಬೈದು ನೀನು ಒಬ್ಬಳೆ ಮಗಳು, ನಿಮ್ಮ ತಂದೆಗೆ ಬಂದಿರುವ ಪಿತ್ರಾರ್ಜಿತ ಆಸ್ತಿ ಎರಡೂವರೆ ಎಕರೆ ಜಮೀನು ಮಾರಾಟ ಮಾಡಿ ಹಣವನ್ನು ತಂದುಕೊಡುವಂತೆ ವರದಕ್ಷಿಣೆ ಕಿರುಕುಳ ನೀಡಿ ನೀನು ಹಣವನ್ನು ತರದೇ ಇದ್ದರೆ ನೀನು ನಮ್ಮ ಮನೆಗೆ ಬರಬೇಡವೆಂದು, ನೀನು ಬಲವಂತವಾಗಿ ಬಂದಿದ್ದೆ ಆದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ನೀಡಿ ಕಳುಹಿಸಿರುತ್ತಾರೆಂದು ನನ್ನ ಮಗಳು ತಿಳಿಸಿದಳು. ಅದರಿಂದ ನನ್ನ ಮಗಳಾದ ಬಿಂದುಶ್ರೀಯನ್ನು ಅವಳ ಗಂಡನ ಮನೆಗೆ ಕಳುಹಿಸದೆ ಕಾಲೇಜಿಗೆ ಕಳುಹಿಸಿ ಕಾಲೇಜು ಮುಗಿಯುವಷ್ಟರಲ್ಲಿ ಏನಾದರೂ ಪರಿಹಾರ ಹುಡುಕೋಣವೆಂದು ಮಗಳಿಗೆ ಹೇಳಿ ಮನೆಯಲ್ಲಿ ಇಟ್ಟುಕೊಂಡಿದ್ದೆನು. ಹೀಗಿರುವಾಗ ನನ್ನ ಮಗಳಿಗೆ ಕಾಲೇಜು ಆಗಸ್ಟ್ ತಿಂಗಳ 7ನೇ ತಾರೀಕು ಮುಗಿದಿದ್ದುಫಿ, ಮರುದಿನ ನನ್ನ ಹೆಂಡತಿ ಸಾವಿತ್ರಮ್ಮ ನನ್ನ ಮಗಳನ್ನು ಕರೆದುಕೊಂಡು ನನ್ನ ಅಳಿಯನ ಮನೆಯಲ್ಲಿ ಬಿಡಲು ಹೋದಾಗ ನನ್ನ ಮಗಳ ಗಂಡ, ಅವರ ಮಾವ, ಅತ್ತೆ ಮತ್ತು ಮೈದುನ ಸೇರಿಕೊಂಡು ನೀನು ನಮಗೆ ಬೇಡ, ನೀನು ತುಂಬಾ ಕಪ್ಪಾಗಿದ್ದೀಯಾ ಅಲ್ಲದೆ ನೀನು ಇನ್ನು ನಾವು ಹೇಳಿದಷ್ಟು ವರದಕ್ಷಿಣೆ ಸಹ ತಂದಿಲ್ಲ ಎಂದು ನನ್ನ ಮಗಳಿಗೆ ಹೇಳಿದ್ದುಫಿ, ಆ ದಿನ ನನ್ನ ಹೆಂಡತಿ ನನ್ನ ಮಗಳನ್ನು ಅಲ್ಲಿಯೇ ಬಿಟ್ಟು ವಾಪಸ್ಸು ಬಂದು ವಾಪಸ್ಸು ಬಂದು ಈ ವಿಚಾರವನ್ನು ನನಗೆ ತಿಳಿಸಿದಳು. ಆಗಸ್ಟ್ 10ರಂದು ನನ್ನ ಮಗಳು ಪುನಃ ಲಗೇಜ್ ಸಮೇತ ನಮ್ಮ ಮನೆಗೆ ಬಂದಿದ್ದುಫಿ, ಈ ಬಗ್ಗೆ ವಿಚಾರಿಸಲಾಗಿ ನನ್ನ ಗಂಡನ ಮನೆಯವರು ನಾನು ವರದಕ್ಷಿಣೆ ಹಣವನ್ನು ತಂದುಕೊಟ್ಟಿಲ್ಲವೆಂದು ಕಿರುಕುಳ ನೀಡಿ ಲಗೇಜ್ ಸಮೇತ ಬಸ್ ಹತ್ತಿಸಿ ನೀನು ಹಣ ತರುವವರೆಗೂ ನಮ್ಮ ಮನೆಗೆ ಬರಬೇಡ ಎಂದು ಹೇಳಿ ಕಳುಹಿಸಿರುತ್ತಾರೆಂದು ತಿಳಿಸಿದಳು.

ಗೌರಿಗಣೇಶ ಹಬ್ಬ ಮುಗಿದ ನಂತರ ಸೆಪ್ಟೆಂಬರ್ 11ರಂದು ನಾನು ಮತ್ತು ನನ್ನ ಹೆಂಡತಿ ನನ್ನ ಮಗಳು ಬಿಂದುಶ್ರೀಯನ್ನು ಕರೆದುಕೊಂಡು ಅಳಿಯನ ಮನೆಗೆ ಹೋದೆವು. ಆಗ ಮನೆಯಲ್ಲಿದ್ದ ಅಳಿಯ ರಾಘವೇಂದ್ರ, ಆತನ ತಂದೆ ಮುನಿರಾಜು, ತಾಯಿ ಲತಾರವರು ನಮ್ಮನ್ನು ಕುರಿತು ನೀವು ಏಕೆ ನಿಮ್ಮ ಮಗಳನ್ನು ಕರೆದುಕೊಂಡು ಬಂದಿದ್ದೀರಿ, ಸೊಸೆಯನ್ನು ಕಂಡರೆ ನಮಗೆ ಇಷ್ಟವಿಲ್ಲಫಿ. ನೀವು ಬಂದ ದಾರಿಗೆ ಸುಂಕ ಇಲ್ಲ ಎನ್ನುವಂತೆ ಮರ್ಯಾದೆಯಾಗಿ ಕರೆದುಕೊಂಡು ಹೋಗಿ ಎಂದು ಅವಾಚ್ಯ ಶಬ್ದಗಳಿಂದ ಬೈದು ಗಲಾಟೆ ಮಾಡಿ ನಮಗೆ ಇಷ್ಟವಿಲ್ಲ ಕರೆದುಕೊಂಡು ಹೋಗಿ ಎಂದು ಹೇಳಿ ಮನೆಯಿಂದ ಹೊರ ಹಾಕಿ ಬಾಗಿಲು ಹಾಕಿಕೊಂಡರು. ಆ ದಿನ ಮಗಳನ್ನು ಅವರ ಮನೆಯಲ್ಲಿ ಬಿಡಲು ಸಾಧ್ಯವಾಗದೆ ವಾಪಸ್ಸು ಚಿಂತಾಮಣಿಗೆ ಹೊರಟುಬಿಟ್ಟೆವು. ಮರುದಿನ 12ನೇ ತಾರೀಕು ಬೆಳಿಗ್ಗೆ ಆವಲಹಳ್ಳಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದೆವು. ಆಗ ಪೊಲೀಸರು ನನ್ನ ಅಳಿಯ ಹಾಗೂ ಅವರ ತಂದೆ, ತಾಯಿಯನ್ನು ಠಾಣೆಗೆ ಕರೆಸಿ ವಿಚಾರ ಮಾಡಲಾಗಿ ಪೊಲೀಸ್ ಬಳಿ ಇದು ನಮ್ಮ ಫ್ಯಾಮಿಲಿ ಮ್ಯಾಟರ್, ನಾವು ಕುಳಿತುಕೊಂಡು ಮಾತನಾಡಿ ಇತರ್ಮಾನದ ಬಗ್ಗೆ ತಿಳಿಸಲು ನಾಳೆ ಬರುತ್ತೇವೆಂದು ಹೇಳಿದ ಬೀಗರಾದ ಮುನಿರಾಜು ಪೊಲೀಸ್ ಠಾಣೆಯಿಂದ ಹೊರ ಬಂದವರು, ನಮಗೆ ಮಿಲಿಟರಿ ಸಪೋರ್ಟ್ ಇದೆ, ಗೃಹ ಸಚಿವರ ಬೆಂಬಲವಿದೆ. ನಿಮ್ಮ ಮಗಳ ಕತ್ತು ಹಿಸುಕಿ ನಮ್ಮೂರಿನ ಕುಂಟೆಯಲ್ಲಿ ಹಾಕಿದರೂ ನೀವು ನಮ್ಮನ್ನು ಏನು ಮಾಡಕ್ಕಾಗಲ್ಲಫಿ, ಜಾಸ್ತಿ ಮಾತನಾಡಿದರೆ ಚಪ್ಪಲಿ ಪೂಜೆ ಮಾಡಬೇಕಾಗುವುದೆಂದು ಚಪ್ಪಲಿ ತೋರಿಸಿ, ನಿಮಗೆ ಎಲ್ಲಿಯೂ ನ್ಯಾಯ ಸಿಗದಂತೆ ಮಾಡುತ್ತೇವೆಂದು ಹೇಳಿ ಬೆದರಿಕೆ ಹಾಕಿ ಹೋದರು. ಪೊಲೀಸ್ ಠಾಣೆ ಮುಂದೆ ನಮಗಾದ ಅವಮಾನವನ್ನು ತಡೆದುಕೊಂಡು ಮಗಳೊಂದಿಗೆ ಚಿಂತಾಮಣಿಗೆ ವಾಪಸ್ಸು ಬಂದೆವು. ನಂತರ ಸೆಪ್ಟೆಂಬರ್ 14ರಂದು ಸಂಜೆ ನಡೆಯಬಾರದ ಘಟನೆ ನಡೆದು ಹೋಯಿತು. ನನ್ನ ಮಗಳು ಬಿಂದುಶ್ರೀಯ ಸಾವಿಗೆ ಅಳಿಯ ರಾಘವೇಂದ್ರಫಿ, ಅವನ ತಂದೆ ಮುನಿರಾಜು, ತಾಯಿ ಲತಾ ಹಾಗೂ ಸಹೋದರ ನರಸಿಂಹರವರು ನೀಡಿದ ವರದಕ್ಷಿಣೆ ಕಿರುಕುಳವೇ ಕಾರಣವಾಗಿರುತ್ತದೆ. ಆದುದರಿಂದ ತಾವುಗಳು ಇವರ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸುವಂತೆ ಕೋರಿ ನೀಡಿದ ದೂರಿನ ಮೇರೆಗೆ ನಗರ ಪೊಲೀಸ್ ಠಾಣೆ ಮೊ.ಸಂ. 167/2024 ಕಲಂ 80, 85, 352, 351(2) 3(35) ಬಿಎನ್‌ಎಸ್ ಹಾಗೂ ಕಲಂ 3 ಮತ್ತು 4 ಡಿಪಿ ಆಕ್ಟ್ ರೀತ್ಯಾ ಠಾಣಾಧಿಕಾರಿಗಳು ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡರು.


ಬಿಂದುಶ್ರೀ-ರಾಘವೇಂದ್ರ ವಿವಾಹ ಸಂದರ್ಭದಲ್ಲಿ ಅತ್ತೆ ಲತಾ, ಮಾವ ಮುನಿರಾಜು


ವಿವಾಹ ಸಂದರ್ಭದಲ್ಲಿ ಬಿಂದುಶ್ರೀ ಮತ್ತು ರಾಘವೇಂದ್ರ

ಎಸ್ಪಿ ಕುಶಾಲ್ ಚೌಕ್ಸೆಫಿ, ಡಿವೈಎಸ್ಪಿ ಮುರಳಿಧರ್, ಪಿಐ ವಿಜಯ್‌ಕುಮಾರ್, ಸಿಬ್ಬಂದಿ ವರ್ಗ ಹಾಗೂ ಬೆರಳಚ್ಚು ತಜ್ಞರು ಆಗಮಿಸಿ ಸ್ಥಳದ ಪರಿಶೀಲನೆ ನಡೆಸಿದರು. ಮೃತ ಬಿಂದುಶ್ರೀ ಸಾವಿಗೆ ಕಾರಣರಾದವರನ್ನು ಬಂಧಿಸಿ ವಿಚಾರಣೆ ಮಾಡಲು ಎಸ್ಪಿ ಕುಶಾಲ್ ಚೌಕ್ಸೆಫಿ, ಡಿವೈಎಸ್ಪಿ ಮುರುಳಿಧರರವರ ಮಾರ್ಗದರ್ಶನದಲ್ಲಿ ಪಿಐ ವಿಜಯ್‌ಕುಮಾರ್‌ರವರ ನೇತೃತ್ವದಲ್ಲಿ ಕ್ರೈಂ ತಂಡವನ್ನು ರಚಿಸಲಾಗಿದ್ದುಫಿ, ಆರೋಪಿಗಳು ಮನೆಗೆ ಬೀಗ ಹಾಕಿಕೊಂಡು ತಲೆಮರೆಸಿಕೊಂಡಿದ್ದರು. ಆಸ್ಪತ್ರೆಯಲ್ಲಿ ಬಿಂದುಶ್ರೀ ಮೃತದೇಹದ ಶವಪರೀಕ್ಷೆಯನ್ನು ಆಸ್ಪತ್ರೆಯ ವೈದ್ಯರು ನಡೆಸಿದ ನಂತರ ಶವವನ್ನು ವಾರಸುದಾರರಿಗೆ ನೀಡಲಾಯಿತು. ಆರೋಪಿಗಳಿಗಾಗಿ ಶೋಧ ಕಾರ್ಯ ನಡೆಸುತ್ತಿರುವಾಗ ಆರೋಪಿ ಸ್ಥಾನದಲ್ಲಿರುವವರು ನ್ಯಾಯಾಲಯದಿಂದ ಜಾಮೀನು ತೆಗೆದುಕೊಂಡು ಬಂದಿದ್ದರಿಂದ ಪೊಲೀಸರು ಅವರನ್ನು ಪೊಲೀಸ್ ಠಾಣೆಗೆ ಕರೆಸಿಕೊಂಡು ವಿಚಾರಣೆ ಮಾಡಿ ಕಳುಹಿಸಿ ಕೊಟ್ಟಿರುತ್ತಾರೆ. ಬಿಂದುಶ್ರೀ ಸಾವಿನ ಪ್ರಕರಣವು ಡಿವೈಎಸ್ಪಿ ಮುರುಳಿಧರರವರ ನೇತೃತ್ವದಲ್ಲಿ ತನಿಖೆ ಮುಂದುವರೆದಿದೆ.

ಇವತ್ತು ಅನೈತಿಕ ಸಂಬಂಧಗಳು ಬೇಕಾದಷ್ಟಿದ್ದು, ಕೆಲವು ಗೊತ್ತೇ ಆಗದಂತೆ ರಹಸ್ಯವಾಗಿ ನಡೆಯುತ್ತಿದ್ದರೆ, ಮತ್ತೆ ಕೆಲವು ರಾಜಾರೋಷವಾಗಿಯೇ ನಡೆಯುತ್ತಿರುತ್ತವೆ. ಕೆಲವೊಂದು ಸಂಬಂಧದಿಂದ ಸಂಸಾರವೇ ಸರ್ವನಾಶವಾಗಿದ್ದರೆ, ಮತ್ತೆ ಕೆಲವು ಗೊತ್ತಿದ್ದೂ ಗೊತ್ತಿಲ್ಲದಂತೆ ಸಾಗುತ್ತಿರುತ್ತದೆ. ಬಹಳಷ್ಟು ಕೊಲೆಯತ್ನ, ಕೊಲೆಗಳು, ಆತ್ಮಹತ್ಯೆಗಳು

# ಹೆಂಡ್ತಿ ಮೇಲೆ ಕಣ್ಣಿಟ್ಟವನ ತಲೆಗೆ ಪಿಸ್ತೂಲಿಟ್ಟ ಗಂಡ!



ಆರೋಪಿ ಶಿವರಾಜು

**ಶತ್ರುವಿನ ತಲೆಗೆ ಗುಂಡಿಟ್ಟು ಸೇಡು ತೀರಿಸಿಕೊಳ್ಳಲು ಹೋದ ವ್ಯಕ್ತಿಯೊಬ್ಬ ಅಂದರ್ ಆಗಿದ್ದಾನೆ. ಆದರೆ ಅದೃಷ್ಟ ವಶಾತ್ ಗುಂಡೇಟು ತಿಂದವನು ಸ್ವಲ್ಪದರಲ್ಲಿಯೇ ಬಚಾನ್ ಆಗಿದ್ದಾನೆ. ಸದ್ಯ ಗುಂಡು ಹಾರಿಸಿದವನು ಜೈಲ್ ಸೇರಿದರೆ, ಗುಂಡೇಟು ತಿಂದವನು ಆಸ್ಪತ್ರೆ ಸೇರಿದ್ದಾನೆ. ಇಷ್ಟಕ್ಕೂ ಆಗಿದ್ದೇನು? ಏನಿದು ಘಟನೆ? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಸಿಗಬೇಕಾದರೆ ಅದೊಂದು ಸಂಬಂಧದ ಬಗ್ಗೆ ಹೇಳಲೇಬೇಕಾಗುತ್ತದೆ.**



ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಂಜು

ಹೀಗೆ ಅಪರಾಧ ಘಟನೆಗಳು ಅಕ್ರಮ ಸಂಬಂಧದಿಂದಲೇ ನಡೆಯುತ್ತಿವೆ ಎಂಬುದನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ.

ಗಂಡ ಇರಲಿ, ಹೆಂಡತಿ ಇರಲಿ ಅಕ್ರಮ ಸಂಬಂಧದ ಸುಳಿಗೆ ಸಿಕ್ಕರೆ ಅವರ ಕಥೆ ಮುಗಿದಂತೆಯೇ ಮೊದಲಿಗೆ ಎಲ್ಲವೂ ಚೆನ್ನಾಗಿಯೇ ನಡೆಯುತ್ತಿರುತ್ತದೆ. ಕದ್ದು ಮುಚ್ಚಿ ನಡೆಯುವ ಈ ಸಂಬಂಧ ಹಾಗೆಯೇ ಉಳಿದು ಬಿಟ್ಟರೆ ಬಚಾನ್ ಒಂದು ವೇಳೆ ಬಹಿರಂಗವಾಯಿತೆಂದರೆ ಸಂಸಾರದಲ್ಲಿ ಜಟಾಪಟಿ ಆರಂಭವೇ... ಸಾಮಾನ್ಯವಾಗಿ ಗಂಡಸರು ತಾನು ಅಕ್ರಮ ಸಂಬಂಧ ಹೊಂದಿದರೂ ಹೆಂಡತಿ ಮಾತ್ರ ತನಗೆ ನಿಯತ್ತಾಗಿ ಇರಬೇಕೆಂದು ಬಯಸುತ್ತಾರೆ.

ಸದಾ ಹೆಂಡತಿ ಪತಿವ್ರತೆಯಾಗಿ ಇರಬೇಕೆಂದು



ಎಎಸ್ಪಿ ತಿಮ್ಮಯ್ಯ



ಡಿವೈಎಸ್ಪಿ ಮುರುಳಿ

ಬಯಸುವ ಗಂಡಸು ತಾನು ಮಾತ್ರ ಎಲ್ಲೆಂದರಲ್ಲಿ ಅಂಡಲೆಯುತ್ತಾನೆ. ಅಷ್ಟೇ ಅಲ್ಲದೆ ಹೆಂಡತಿ ಬೇರೆ ಗಂಡಸರ ಜತೆ ಮಾತಾಡಿದ್ದು ಕಂಡರೆ ಸಾಕು ಇಲ್ಲಸಲ್ಲದ ನೆಪ ತೆಗೆದು ಜಗಳ ಮಾಡುತ್ತಾನೆ. ನೀನೇಕೆ ಅವನ ಜತೆ ಮಾತಾಡಿದೆ? ಅವನು ನಿನ್ನನ್ನೇ ಏಕೆ ಮಾತಾಡಿಸುತ್ತಾನೆ? ಹೀಗೆ ಕಾರಣವೇ ಇಲ್ಲದೆ ನೂರೆಂಟು ಪ್ರಶ್ನೆ ಹಾಕುತ್ತಾ ಸಂಶಯ ವ್ಯಕ್ತಪಡಿಸುತ್ತಾನೆ.

ಒಂದು ವೇಳೆ ಹೆಂಡತಿ ಅಕ್ರಮ ಸಂಬಂಧ ಹೊಂದಿರುವ ವಿಚಾರ ಗೊತ್ತಾದರೆ ಕಥೆ ಮುಗಿದಂತೆಯೇ.. ಬಹಳಷ್ಟು ಕೊಲೆ ಪ್ರಕರಣದಲ್ಲಿ ಅನೈತಿಕ ಸಂಬಂಧ ಹೊಂದಿದ ಹೆಂಗಸು ತನ್ನ ಗಂಡನಿಗೆ ಅಕ್ರಮ ಸಂಬಂಧದ ವಿಷಯ ತಿಳಿಯುತ್ತಿದ್ದಂತೆಯೇ ಪ್ರಿಯಕರನಿಗೆ ವಿಷಯ ತಿಳಿಸಿ ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿರುವ ಗಂಡನನ್ನು ಮುಗಿಸಿದರೆ ನೆಮ್ಮದಿಯಾಗಿರಬಹುದೆಂಬ ಭ್ರಮೆಯಲ್ಲಿ ಕೊಲೆ ಮಾಡಿಸಿ ಜೈಲ್ ಸೇರಿದ ಘಟನೆಗಳು ಬೇಕಾದಷ್ಟಿವೆ.

ಇನ್ನು ಕೆಲವು ಪ್ರಕರಣಗಳಲ್ಲಿ ಗಂಡನೇ ಹೆಂಡತಿಯನ್ನು ಅಥವಾ ಪ್ರಿಯಕರನ ಕೊಂದಿರುವುದು ನಡೆದಿದೆ. ಒಟ್ಟಾರೆ ಅನೈತಿಕ ಸಂಬಂಧಗಳು ಯಾರನ್ನೂ ಸುಖವಾಗಿಯಾಗಲೀ, ನೆಮ್ಮದಿಯಿಂದಾಗಲಿ ಇಟ್ಟಿರುವುದು ಕಡಿಮೆಯೇ... ಅಕ್ರಮ ಎನ್ನುವುದು ಯಾವತ್ತಿಗಿದ್ದರೂ ಅಪಾಯವೇ.. ನಮ್ಮ ಹಿರಿಯರು ನೆಮ್ಮದಿಯಾಗಿ ಸಂಸಾರ ಮಾಡಿಕೊಂಡು ಹೋಗಲಿ ಎಂದೇ ಮದುವೆ, ಗಂಡ, ಹೆಂಡತಿ ಮಕ್ಕಳು ಎಂಬ ಚೌಕಟ್ಟು ಹಾಕಿದ್ದು ಆದರೆ ಅದನ್ನು ಮೀರಿ ಇನ್ನೇನನ್ನೋ ಮಾಡುತ್ತೇನೆಂದು ಹೋದವರು ಯಾರೂ ಉದ್ದಾರವಾದ ಉದಾಹರಣೆಗಳಿಲ್ಲ.



ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ

## ಇದು ಮೂರು ವರ್ಷದ ಹಿಂದಿನ ಸೇಡಿನ ಕಥೆ

ಇವತ್ತು ಹಣವೇ ಮುಖ್ಯವಾಗಿರುವ ಕಾರಣ ಅದನ್ನು ಸಂಪಾದಿಸುವ ಸಲುವಾಗಿ ಅಡ್ಡಮಾರ್ಗ ಹಿಡಿಯುವವರ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿಯೇ ನೈತಿಕತೆ ಮೀರಿದ ಘಟನೆಗಳು ಎಲ್ಲೆಂದರಲ್ಲಿ ನಡೆಯುತ್ತಿದ್ದು, ಗಂಡು ಹೆಣ್ಣು ಬೇಧವಿಲ್ಲದೆ ಎಲ್ಲರೂ ಅನೈತಿಕ ಚಟುವಟಿಕೆಗೆ ಮುಂದಾಗುತ್ತಿದ್ದಾರೆ. ಇದರ ಪರಿಣಾಮ ಅಪರಾಧ ಪ್ರಕರಣಗಳು ಗಣನೀಯವಾಗಿ ಹೆಚ್ಚುತ್ತಿವೆ. ಈಗ ಯಾರನ್ನು ನಂಬುವ ಸ್ಥಿತಿಯಲ್ಲಿ ಇಲ್ಲದಂತಾಗಿದೆ.

ಅದರಲ್ಲೂ ಹಣವಿರುವವರನ್ನು ತಮ್ಮ ಮಗ್ಗುಲಿಗೆ ಕೆಡವಿಕೊಂಡು ಅವರೊಂದಿಗೆ ಕಳೆದ ಖಾಸಗಿ ಕ್ಷಣಗಳನ್ನು ವೀಡಿಯೋ ಮಾಡಿಟ್ಟುಕೊಂಡು ಬಳಿಕ ಅವರಿಗೆ ಅದನ್ನು ತೋರಿಸಿ ವೈರಲ್ ಮಾಡುವ ಭಯ ಹುಟ್ಟಿಸಿ ಹಣ ಕೀಳುವ ದಂಧೆ ಜೋರಾಗಿದ್ದು, ಈ ಹನಿಟ್ರ್ಯಾಪ್ ದಂಧೆಗೆ ಹಲವರು ಸಿಕ್ಕಿ ನರಳಾಡುತ್ತಿದ್ದಾರೆ. ಇದರಲ್ಲಿ ಪ್ರತಿಷ್ಟಿತರು, ಶ್ರೀಮಂತರು, ಅಧಿಕಾರಿಗಳು ಹೀಗೆ ಹಲವರು ಸಿಕ್ಕಿ ಬಿದ್ದು ಒದ್ದಾಡುತ್ತಿದ್ದಾರೆ.

ಈ ದಂಧೆಯನ್ನು ಗಂಡಹೆಂಡಿರೇ ಮಾಡುತ್ತಿರುವುದು ಮಾತ್ರ ದುರಂತದ ಸಂಗತಿಯೇ... ಒಟ್ಟಾರೆ ಅನೈತಿಕತೆ ವಿಜೃಂಭಿಸುತ್ತಿದ್ದು, ನೈತಿಕತೆ ಹಳ್ಳ ಹಿಡಿಯುವಂತಾಗಿದೆ. ಇದೆಲ್ಲದರ ನಡುವೆ ಸೋಷಿಯಲ್ ಮೀಡಿಯಾ ಬಂದ ನಂತರ ಗೊತ್ತು ಗುರಿಯಿಲ್ಲದವರ ನಡುವೆಯೂ ಅಕ್ರಮ ಸಂಬಂಧಗಳು ಬೆಳೆಯುತ್ತಿರುವುದು ದುರದೃಷ್ಟಕರವಾಗಿದೆ. ಈ ನಡುವೆ ವ್ಯಕ್ತಿಯೊಬ್ಬ ತನ್ನ ಹೆಂಡತಿಯೊಂದಿಗೆ ಸಂಬಂಧ ಹೊಂದಿದ್ದ ವ್ಯಕ್ತಿಯನ್ನು ಕೊಲೆ ಮಾಡಲು ಏನೆಲ್ಲ ಸಂಚು ಮಾಡಿದ್ದ? ಮೂರು ವರ್ಷದ ಸೇಡನ್ನು ತೀರಿಸಿಕೊಳ್ಳಲು ಮುಂದಾಗಿದ್ದನಾದರೂ

**ಮಂಡ್ಯ**

**ಬಿ.ಎಂ. ಲವಕುಮಾರ್**

ಕೊನೆ ಗಳಿಗೆಯಲ್ಲಿ ಫ್ಲಾನ್ ಕೈಕೊಟ್ಟು ಜೈಲ್ ಸೇರಿದ ಘಟನೆ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಶಂಭುನಹಳ್ಳಿ ಗ್ರಾಮದಲ್ಲಿ ನಡೆದಿದೆ.

ನಿಜಕ್ಕೂ ಇದೊಂದು ಸೇಡಿನ ಕಥೆಯಾಗಿದ್ದು, ವ್ಯಕ್ತಿಯೊಬ್ಬ ತನ್ನ ಹೆಂಡತಿಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದ ವ್ಯಕ್ತಿಯನ್ನು ಕೊಲೆ ಮಾಡಲು ಏನೆಲ್ಲ ಮಾಡಿದ? ಮತ್ತು ಗುಂಡು ಹಾರಿಸುವ ವೇಳೆ ಅದು ವಿಫಲವಾಗಿ ಜನರ ಕೈಗೆ ಸಿಕ್ಕಿ ಹಾಕಿಕೊಂಡು ಜೈಲ್ ಸೇರಿದ ಮತ್ತು ಗುಂಡೇಟಿನಿಂದ ಸ್ವಲ್ಪದರಲ್ಲಿಯೇ ಪಾರಾದ ಕಥೆ ಕೇಳಿದರೆ ಇದೊಂದು ಯಾವುದೇ ಸಿನಿಮಾಕ್ಕೂ ಕಡಿಮೆ ಇಲ್ಲ ಎಂದೆನಿಸಿ ಬಿಡುತ್ತದೆ.

## ಮುಂಬೈ ಚೋರ್ ಬಜಾರಲ್ಲಿ ಪಿಸ್ತೂಲ್ ಖರೀದಿ

ಇವತ್ತು ಗುಂಡು ಹಾರಿಸಿಕೊಲೆಗೈಯ್ಯುವಲ್ಲಿ ವಿಫಲನಾಗಿ ಜೈಲ್ ಸೇರಿದ ಶಿವರಾಜು(37) ಮತ್ತು ಗುಂಡೇಟಿನಿಂದ ಸ್ವಲ್ಪದರಲ್ಲಿ ಪಾರಾಗಿ ಆಸ್ಪತ್ರೆ ಸೇರಿದ ಮಂಜು(29) ಇವರಿಬ್ಬರೂ ಪಾಂಡವಪುರ ತಾಲೂಕಿನ ಶಂಭುನಹಳ್ಳಿ ಗ್ರಾಮದವರು. ಕೆಲವು ವರ್ಷದ ಹಿಂದೆ ಮಂಜು ಮದುವೆಯಾಗಿದ್ದನು. ಇವರ ದಾಂಪತ್ಯ ಜೀವನ ಎಲ್ಲ ದಂಪತಿಗಳಂತೆ ಸಾಗುತ್ತಿತ್ತು. ಹೀಗಿರುವಾಗಲೇ ಶಿವರಾಜು ಹೆಂಡತಿಗೆ ಮಂಜು ಪರಿಚಯವಾಗಿತ್ತು. ದಿನಕಳೆದಂತೆಲ್ಲ ಇವರ ಪರಿಚಯ ಮತ್ತು ಸಂಬಂಧ ಎಲ್ಲೆ ಮೀರಿ ಬಿಟ್ಟಿತು.

ಗಂಡ ಶಿವರಾಜುಗಿಂತ ಹೆಚ್ಚಾಗಿ ಮಂಜು ಮೇಲೆ ಪ್ರೀತಿ ದುಪ್ಪಟ್ಟಾಯಿತು. ಇವರ ನಡುವಿನ ರಹಸ್ಯ ಸಂಬಂಧ ಬಹಿರಂಗಗೊಳ್ಳಲು ಹೆಚ್ಚು ಸಮಯ ಬೇಕಾಗಿರಲಿಲ್ಲ. ಯಾವಾಗ ಅಕ್ರಮ ಸಂಬಂಧ ಬೀದಿಗೆ ಬಂತೋ ಮಂಜು ಮತ್ತು ಶಿವರಾಜು ಶತ್ರುಗಳಾಗಿ ಬಿಟ್ಟರು. ತನ್ನ ಹೆಂಡತಿ ಮೇಲೆ ಕಣ್ಣು ಹಾಕಿದ ಮಂಜುವನ್ನು ಮುಗಿಸಲೇ ಬೇಕೆಂಬ ಹಠಕ್ಕೆ ಶಿವರಾಜು ಬಿದ್ದು ಬಿಟ್ಟನು. ಕಳೆದ ಮೂರು ವರ್ಷದ ಹಿಂದೆಯೇ ಚೂರಿಯಿಂದ ಚುಚ್ಚಿ ಮಂಜುವನ್ನು ಕೊಲ್ಲಲು ಶಿವರಾಜು ಮುಂದಾಗಿದ್ದನು. ಆದರೆ ಮಂಜುವಿನ ಅದೃಷ್ಟ ಗಟ್ಟಿಯಿತ್ತು ಬಚಾನ್ ಆಗಿದ್ದನು.

ಈ ವೇಳೆ ಊರಿನಲ್ಲಿದ್ದವರು ಇಬ್ಬರಿಗೆ ಉಗಿದು ಬುದ್ದಿ ಹೇಳಿದ್ದರಲ್ಲದೆ, ರಾಜಿಸಂಧಾನ ನಡೆಸಿ ಇನ್ಮುಂದೆ ಇಂತಹ ಗಲಾಟೆ ನಡೆಯಬಾರದು ಎಂದು ಅಲ್ಲದೆ ಶಿವರಾಜು ಹೆಂಡತಿ ಸುದ್ದಿಗೆ ಹೋಗದಂತೆ ಮಂಜುಗೆ ಉಗಿದು ಬುದ್ದಿ ಹೇಳಿದ್ದರು. ಹೀಗಾಗಿ ಪ್ರಕರಣ ಅಲ್ಲಿಗೆ



ಕೃತ್ಯಕ್ಕೆ ಬಳಸಿದ ಪಿಸ್ತೂಲ್

ಅಂತ್ಯವಾಗಿತ್ತು. ಆದರೆ ಮಂಜು ಮೇಲಿನ ದ್ವೇಷ ಮಾತ್ರ ಶಿವರಾಜುಗೆ ಕಡಿಮೆ ಆಗಿರಲಿಲ್ಲ. ತನ್ನ ಹೆಂಡತಿಯೊಂದಿಗೆ ಸಂಬಂಧ ಬೆಳೆಸಿ ತನ್ನ ಮನೆ ಮರ್ಯಾದೆ ಕಳೆದ ಮಂಜುವನ್ನು ಹೇಗಾದರೂ ಮಾಡಿ ಮುಗಿಸಲೇ ಬೇಕೆಂಬ ದೃಢ ಮನಸ್ಸು ಮಾಡಿದ್ದನಲ್ಲದೆ, ಆತನನ್ನು ಚೂರಿಯಿಂದಾಗಲೀ, ಮಚ್ಚಿನಿಂದಾಗಲೀ ಸಾಯಿಸದೆ ಗುಂಡಿಟ್ಟೇ ಸಾಯಿಸಬೇಕೆಂಬ ತೀರ್ಮಾನಕ್ಕೆ ಬಂದು ಬಿಟ್ಟಿದ್ದನು.

ಇತ್ತ ಊರಿನಲ್ಲಿ ಘಟನೆ ಬಳಿಕ ದಿನಗಳು ಸರಿದು ಹೋಗಿದ್ದರಿಂದ ದ್ವೇಷವೂ ಮರೆತು ಹೋಯಿತು ಎಂದು ನಂಬಿದ್ದರು. ಅಲ್ಲದೆ ಮಂಜು ಕೂಡ ಇನ್ಮುಂದೆ ಶಿವರಾಜು ತನ್ನ ತಂಟೆಗೆ ಬರಲ್ಲ ಎಂದು ನಂಬಿದ್ದನು. ಆದರೆ ಶಿವರಾಜು ಮನಸ್ಸಲ್ಲಿ ಮಂಜು ಮೇಲಿನ ದ್ವೇಷ ಮಾತ್ರ ಆರಿರಲಿಲ್ಲ.



ಘಟನಾ ಸ್ಥಳದಲ್ಲಿ ಪೊಲೀಸರ ಪರಿಶೀಲನೆ

6 ☞

ಈ ರೀತಿ ನೋಡಿದ್ದು ಸರಿಯೆ?

ಅನುಮಾನ ಬರಲಿಲ್ಲವೆ?'

''ತಡೆದು ನಿಲ್ಲಿಸಿ ಯಾಕೆ ಕೇಳಲಿಲ್ಲಫಿ?''

ಅಷ್ಟೊಂದು ತಾತ್ಸಾರವೆ?''

ಬೇಜವಾಬ್ದಾರಿತನದ ಪರಮಾವಟಯೆ?

ಏನು... ಇದೆಲ್ಲಾ ಏನು?

●●●

ಪೋಸ್ಟ್‌ಮಾರ್ಟಮ್ ರಿಪೋರ್ಟ್ ಬಂದಿದೆ.

ಸಾವು ಸುಮಾರು ರಾತ್ರಿ ಏಳೂವರೆಯಿಂದ ಎಂಟೂವರೆ ಒಳಗೆ ಸಂಭವಿಸಿದೆ.

ಸಾವಿಗೆ ಕಾರಣ ವಿಷ! ತಂಪು ಪಾನೀಯ, ಸಿಹಿ ತಿಂಡಿಗಳಲ್ಲಿ ವಿಷ ಬೆರೆತಿರಬಹುದು ಅಥವಾ ವಿಷವನ್ನೇ ನೇರವಾಗಿ ಕುಡಿದಿರಬಹುದು.

ಸಾವಿಗೆ ಮೊದಲು ಹೆಣ್ಣಿನ ಸಹಕಾರದೊಂದಿಗೆ ಸಂಭೋಗ ನಡೆದಿದೆ.

ಪೊಲೀಸ್ ಅಟಕಾರಿ ಮಾದಪ್ಪ ಜೀಪಲ್ಲಿ ಮೃತರ ಮನೆಗೆ ಬಂದನು.

ಎಲ್ಲರೂ ದುಃಖಿತರಾಗಿದ್ದಾರೆ.

''ನಿಮ್ಮ ಮಗ ಉಪಯೋಗಿಸುತ್ತಿದ್ದ ಕೊಠಡಿಯನ್ನು ಒಂದು ಸಲ ನೋಡಬೇಕು ಎಂದು ಹೇಳಿ, ಡೋರ್ ಲಾಕ್ ಮಾಡಿದ್ದ ಆ ರೂಮಿನ ಲಾಕ್ ಓಪನ್ ಮಾಡಿ ಒಳಗೆ ಬಂದನು.

ಮಂಚ, ಸ್ಟಡಿ ಟೇಬಲ್, ಟೇಬಲ್ ಲ್ಯಾಂಪ್ ಎಲ್ಲಾ ಇದೆ. ವಾರ್ಡ್ ರೋಬ್‌ನಲ್ಲಿ ಅಗತ್ಯವಾದ ಪುಸ್ತಕಗಳನ್ನು ನೀಟಾಗಿ ಜೋಡಿಸಿದ್ದಾನೆ.

ಪೊಲೀಸ್ ಅಟಕಾರಿ ತುಂಬಾ ಎಚ್ಚರಿಕೆಯಿಂದ ಎಲ್ಲವನ್ನೂ ಸಹ ಗಮನಿಸುತ್ತಿದ್ದನು ಎಂಬುದು ನಿಜ. ಆಗ ಟೇಬಲ್ ಲಾಕರ್ ಇವನ ಗಮನ ಸೆಳೆಯಿತು.

ಟೇಬಲ್ ಲಾಕರ್ ಒಳಭಾಗದಲ್ಲಿ ಕೆಲವು ಪುಸ್ತಕಗಳಿವೆ. ಸಣ್ಣ ಗಾತ್ರದ ಡೈರಿ ಇದೆ. ಅದರ ಜೊತೆಗೆ ಮೊಬೈಲ್ ಇದೆ. ಕುತೂಹಲ ಉಂಟಾಗುತ್ತಿದೆ. ಆ ಮೊಬೈಲ್ ಎತ್ತಿಕೊಂಡನು.

ಅದರಲ್ಲಿ ಸಿಮ್ ಇದೆ. ತುಂಬಾ ಕಡಿಮೆ ಮೊತ್ತದ ಹಣದಿಂದ ರೀಚಾರ್ಜ್ ಮಾಡಲಾಗಿದೆ. ಮೊಬೈಲ್ ಆಪರೇಟ್ ಮಾಡಿ ನೋಡಿದಾಗ ಫೋನ್ ಡೀಟೈಲ್ಸ್ ಇರಲಿಲ್ಲಫಿ.

ಎಲ್ಲಾ ಡಿಲೀಟ್ ಆಗಿದೆ. ಇತ್ತೀಚೆಗೆ ಅವನು ಫೋನ್ ಮಾಡಿರಲಿಲ್ಲ ಎಂಬುದು ಗೊತ್ತಾಗಿದೆ.

ಫೋಟೋ ಗ್ಯಾಲರಿ ಕಡೆ ಗಮನ ಬಂದು ಪರಿಶೀಲನೆ ನಮಾಡಿದನು.

ಆದಿತ್ಯನಾಥನ ತಂದೆ-ತಾಯಿ, ತಂಗಿ ಮತ್ತು ಹತ್ತಿರದ ಸಂಬಂಟಕರ ಜೊತೆ ತೆಗೆಸಿಕೊಂಡಿದ್ದ ಫೋಟೋಗಳಿವೆ.

ಛೇ... ಛೇ... ಏನಿದು ಈ ಸಾವಿನ ಬಗ್ಗೆ ಸಣ್ಣ ಸುಳಿವೂ ಸಹ ಸಿಗುತ್ತಿಲ್ಲವಲ್ಲ ಎಂದುಕೊಂಡು, ಫೋಟೋ ಗ್ಯಾಲರಿಯ ಕಡೆ ಗಮನ ನೀಡಿದನು.

ಆ ದೃಶ್ಯ ಕಂಡಿತು. ಮೈ ಪುಳುಕಗೊಂಡಿತು.

ಆದಿತ್ಯನಾಥ ಯುವತಿಯೊಬ್ಬಳನ್ನು ತಬ್ಬಿಕೊಂಡು ಫೋಟೋ ತೆಗೆಸಿಕೊಂಡಿದ್ದಾನೆ.

ಅವಳು ಆಕರ್ಷಕ ರೂಪವತಿ ಅಲ್ಲಫಿ. ಆದರೂ ಪರವಾಗಿಲ್ಲ ಎಂದು ಹೇಳಬಹುದಾದ ಸಾಮಾನ್ಯ ರೂಪದವಳು.

ಗ್ಯಾಲರಿಯಲ್ಲಿ ಅವಳು ಬೇರೆ ಬೇರೆ ಭಂಗಿಗಳಲ್ಲಿ ತೆಗೆಸಿಕೊಂಡಿರುವ ಆರು ಫೋಟೋಗಳಿವೆ. ಆದರೆ ಅವಳ ಹೆಸರಾಗಲಿ, ವಿಳಾಸವಾಗಲಿ ಇರಲಿಲ್ಲಫಿ.

ಪೊಲೀಸ್ ಅಟಕಾರಿ ಆ ರೂಮಿನಿಂದ ಈಗ ಹೊರಗೆ ಬಂದು ಫೋಟೋಗಳನ್ನು ತಂದೆತಾಯಿ, ಸಂಬಂಟಕರಿಗೆ ತೋರಿಸಿದನು.

''ಇವಳ್ಯಾರು ಅಂತ ಗೊತ್ತಾಫಿ?''

ಎಲ್ಲರೂ ಗಾಬರಿ, ಗೊಂದಲದಿಂದ ಈಗ ಪರಸ್ಪರ ಮುಖ ನೋಡಿಕೊಂಡರು. ಈ ಯುವತಿ ಯಾರು ಎಂದು ಅವರ್ಯಾರಿಗೂ ಗೊತ್ತಿರಲಿಲ್ಲಫಿ. ಆದರೆ ಈ ಸಂಬಂಟಕರಲ್ಲಿ ಒಬ್ಬ ''ಸಾರ್... ಇವಳು ರೇಷ್ಮಾ ಆನಂದನ್ ಅಂತ. ನವಿಲೆ ಗ್ರಾಮದ ಪ್ರಭಾವಶಾಲಿ ಶ್ರೀಮಂತ ಆನಂದನ್ ಅವರ ಒಬ್ಬಳೇ ಮಗಳು.''

ಸಿಕ್ಕಿದೆ... ಲಿಂಕ್ ಸಿಕ್ಕಿದೆ.

ಪೊಲೀಸ್ ಅಟಕಾರಿ ಚುರುಕಾದನು.

''ಇವಳು ಎಲ್ಲಿ ಓದುತ್ತಿದ್ದಾಳೆ?''

''ಮಡಿಕೇರಿ ಕಾಲೇಜಿನಲ್ಲಫಿ.''

●●●

ಪೊಲೀಸ್ ಅಟಕಾರಿ ಮಾದಪ್ಪ ಪೊಲೀಸ್ ವಾಹನ ಮತ್ತು ಯೂನಿಫಾರಂ ತೆಗೆದು ನಾರ್ಮಲ್ ಡ್ರೆಸ್‌ನಲ್ಲಿ ಕಾಲೇಜಿನ ಹತ್ತಿರ ಹೋದರು.

ಬೆಳಗಿನ ಹತ್ತು ಗಂಟೆ.

ಕಾಲೇಜಿನ ಯುವಕ, ಯುವತಿಯರು ಈಗ ತಾನೇ ತರಗತಿಯ ಕಡೆ ಹೋಗುತ್ತಿದ್ದಾರೆ.

ಕಾರಿನ ಹಾರನ್ ಶಬ್ದ ಕೇಳಿತು.

'ಬರ್ರ್' ಎಂಬ ಶಬ್ದದೊಂದಿಗೆ ವೇಗವಾಗಿ ಬಂದ ಕಾರೊಂದು ಮರದ ಅಡಿಯಲ್ಲಿ ನಿಂತಿತು. ಅದರಿಂದ, ಸಾಮಾನ್ಯ ರೂಪಿನ, ಆದರೆ ತುಂಬಾ ಗ್ರಾಂಡ್ ಆಗಿ ಡ್ರೆಸ್ ಮಾಡಿಕೊಂಡಿದ್ದ ರೇ,ಷ್ಮಾ ಆನಂದನ್ ಇಳಿದಳು.

ಯುವತಿಯರು ಕೈ ಆಡಿಸುತ್ತಾ ಇವಳ ಹತ್ತಿರ ಬಂದರು.

ನಗು, ನಗುತ್ತಾ ಮಾತಾಡಿದರು. ಇವಳು ಕೊಡಿಸುತ್ತಿದ್ದ ಪಾರ್ಟಿ ಮತ್ತು ಪ್ರತಿನಿತ್ಯದ ಕಾಲೇಜ್ ಕ್ಯಾಂಟೀನ್ ಬಿಲ್ ಪೇ ಮಾಡುತ್ತಿದ್ದಳು.

ಹಾಗಾಗಿ ಯುವತಿಯರು ಇವಳನ್ನು ಸದಾ ಅಂಟಿಕೊಂಡಿರುತ್ತಿದ್ದರು ಮತ್ತು ಹೊಗಳಿ ಹಾಡಿ ಅಟ್ಟಕ್ಕೇರಿಸುತ್ತಿದ್ದರು.

ಯುವಕರಲ್ಲಿ ಕೆಲವರ ಜೊತೆ ಮಾತ್ರ ಇವಳು ಫ್ರೀಯಾಗಿರುತ್ತಿದ್ದಳು.

ಕಾಲಿಗೆ ಒರಗಿಕೊಂಡು ಗೆಳತಿಯರ ಜೊತೆ ಮಾತಾಡುತ್ತಿದ್ದಾಗ ಕೇಳಿ ಬಂದಿದೆ. ಗಡುಸಾದ ಗಂಡಸಿನ ಧ್ವನಿ!

''ಎಕ್ಸ್‌ಕ್ಯೂಜ್ ಮೀ ಮೇಡಂ.''

ಅವಳು ಆ ಕಡೆ ತಿರುಗಿದಳು.

ಯಾಕೆ ಅಂತ ಗೊತ್ತಿಲ್ಲಫಿ.

ಸ್ವಲ್ಪ ಗಾಬರಿಯಾಗಿದ್ದಾಳೆ.

ಮುಖ ಬಿಳುಚಿಕೊಳ್ಳುತ್ತಿದೆ.

ಅವನು ಹತ್ತಿರ ಬಂದು ''ನಾನ್ಯಾರು ಅಂತ ನಿಮಗೆ ಗೊತ್ತಾಗಿರಬಹುದು ಅಂತ ನಿಮ್ಮ ಮುಖಭಾವ ಹೇಳುತ್ತಿದೆ'' ಎಂದನು.

ಅವಳು ಚಡಪಡಿಸಿದಳು.

''ಯಾರು... ನೀವ್ಯಾರು? ನನಗೆ ನಿಮ್ಮ ಬಗ್ಗೆ ಗೊತ್ತಿಲ್ಲಫಿ.'

''ನಿಮ್ಮ ತಂದೆ ಆನಂದನ್ ಸುತ್ತಮುತ್ತಲಿನ ಹತ್ತಾರು ಹಳ್ಳಿಗಳಲ್ಲಿ ಪ್ರಭಾವಶಾಲಿ ಶ್ರೀಮಂತರು, ನೀನು ಅವರ ಮಗಳು ರೇಷ್ಮಾಫಿ. ನಾನು.. ನಾನು ಈ ನವಿಲೆ ಗ್ರಾಮಕ್ಕೆ ಹೊಸದಾಗಿ ಬಂದಿರುವ ಪೊಲೀಸ್ ಆಫೀಸರ್ ಮಾದಪ್ಪಫಿ.''

ಅವಳಲ್ಲಿ ತುಂಬಾ ಕಡಿಮೆ ಪ್ರಮಾಣದಲ್ಲಿ ಕಂಪನ ಉಂಟಾಗಿದೆ. ಆದರೂ ಸಹ ಸಾವರಿಸಿಕೊಂಡು ''ನೀವು... ನೀವು ಅಪ್ಪಾಜಿನ ಭೇಟಿ ಮಾಡಬೇಕಾದ್ರೆ ಮನೆಗೆ ಹೋಗಿ. ನನಗೆ ಈಗ ಕಾಮರ್ಸ್ ತರಗತಿ ಇದೆ'' ಎಂದಳು.

''ನಾನು ಬಂದಿರೋದು ನಿಮ್ಮ ಜೊತೆ ಮಾತಾಡಲು ರೇಷ್ಮಾ ಮೇಡಂ.''

ಅವಳು ಗಾಬರಿಯಿಂದ ''ಏನು... ನನ್ನ ಜೊತೆನಾ... ಯಾಕೆ... ಏನು ಮಾತಾಡಬೇಕು'' ಎಂದಳು.

''ಎಲ್ಲರ ಎದುರಿಗೆ ಚರ್ಚೆ ಬೇಡ. ಹತ್ತು ನಿಮಿಷದಲ್ಲಿ ವಿಚಾರಣೆ ಮಾಡ್ತೀನಿ. ಸ್ವಲ್ಪ ಈ ಕಡೆ ಬರ್ತೀರ?''

ಅವಳೀಗ ಗೆಳತಿಯರ ಕಡೆ ನಾಚಿಕೆ, ಗಾಬರಿಯಿಂದ ನೋಡಿದಳು. ಅವರ ಮುಖದಲ್ಲಿ ಕುತೂಹಲದ ಜೊತೆಗೆ ಏನೋ ಒಂದು ರೀತಿಯ ಅನುಮಾನ ಇದೆ.

''ಬರ್ತೀರ ಮೇಡಂ.''

ರೇಷ್ಮಾ ಹೆಜ್ಜೆ ಹಾಕಿದಳು.

ಕಾಲೇಜಿನ ಕಾಂಪೌಂಡ್ ಆವರಣದಲ್ಲಿ ಬೆಳೆದಿರುವ ಮರದ ಅಡಿಯಲ್ಲಿ ಪೊಲೀಸ್ ಅಟಕಾರಿ ಮತ್ತು ರೇಷ್ಮಾ ನಿಂತಿದ್ದಾರೆ. ಅವಳ ಮುಖದ ಮುಂದೆ ಫೋಟೋ ಹಿಡಿದು ''ಇವನ್ಯಾರು ಅಂತ ಗೊತ್ತೆಫಿ?''

ಆದಿತ್ಯನಾಥನ ಫೋಟೋ.

ಅವಳು ತಡಬಡಿಸಿದಳು.

''ಕಮಾನ್... ಇವನ್ಯಾರು ಅಂತ ಗೊತ್ತಾಫಿ?'

ಅವಳು ಮೆಲ್ಲಗೆ ''ಗೊತ್ತಿಲ್ಲಫಿ.'

''ವಾಟ್ ಎ ವಂಡರ್. ಇವನ ಕೊಲೆ ಆಗಿರುವ ಸಂಗತಿ ಊರಲ್ಲಿ ಪ್ರಚಾರ ಆಗಿದೆ. ಎಲ್ಲಾ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟ ಆಗಿದೆ. ಟಿ.ವಿ. ಚಾನಲ್‌ಗಳಲ್ಲಿ ಗ್ಯಾಪ್ ಕೊಡದ ರೀತಿ ಪ್ರಚಾರ ಮಾಡುತ್ತಿದ್ದಾರೆ'' ಎಂದು ಈಗ ಅವಳ ಮುಖದ ಹತ್ತಿರ ಮುಖ ತಂದು ''ನಿನ್ನ ಜೊತೆ ಮೂರು ವರ್ಷಗಳಿಂದ ಈ ಕಾಲೇಜಿನಲ್ಲಿ ಓದುತ್ತಿರುವ ಆದಿತ್ಯ ಗೊತ್ತಿಲ್ಲಫಿ?

''ಅದು... ಅದು... ಅವನು...'' ಎಂದು ತಡವರಿಸುತ್ತಿರುವಾಗಲೇ ನಾಲ್ಕು ಫೋಟೋಗಳನ್ನು ಹಿಡಿದರು.

ಲವರ್ಸ್ ತಬ್ಬಿಕೊಂಡಿರುವ ಬೇರೆ, ಬೇರೆ ಭಂಗಿಗಳ ಫೋಟೋಗಳು.

ಅವಳ ಮುಖ ಬಿಳುಚಿಕೊಂಡಿದೆ.

''ಈಗ ಏನು ಹೇಳ್ತೀರ?''

ಅವಳಿಂದ ಉತ್ತರ ಬರಲಿಲ್ಲಫಿ.

''ನೀವಿಬ್ಬರು ತುಂಬಾ ದಿನಗಳಿಂದ ಲವ್ ಮಾಡುತ್ತಿದ್ದೀರ ನಿಜ ತಾನೆ?''

''ಲವ್ ಅಂತ ಏನಿಲ್ಲಫಿ. ಅವನ ಜೊತೆ ಕ್ಲೋಸ್ ಆಗಿದ್ದೆಫಿ.''

''ಗುರುವಾರ ರಾತ್ರಿ ಏಳೂವರೆಯಿಂದ ಎಂಟೂವರೆ ಅವಟಯಲ್ಲಿ ಅವನ ಕೊಲೆ ಈ ಗ್ರಾಮದ ಹೊಂಗೆ ಗುಡ್ಡದಲ್ಲಿ ನಡೆದಿದೆ. ನೀವು ಅವನ ಜೊತೆಯಲ್ಲಿದ್ದೀರಿ?'

ಅವಳು ತಟ್ಟನೆ ಹೇಳಿದಳು.

''ನೋ... ನೋ... ಗುರುವಾರ ಪೂರ್ತಿ ಊರಲ್ಲಿ ಇರಲಿಲ್ಲಫಿ.''

''ಆಗ ಎಲ್ಲಿಗೆ ಹೋಗಿದ್ರಿಫಿ?''

''ನನ್ನ ಆಂಟಿಯ ಮನೆಗೆ.''

''ಯಾವ ಊರಲ್ಲಿದ್ದಾರೆ.''

''ಮೈಸೂರಲ್ಲಿಫಿ.''

''ಅವರ ವಿಳಾಸ, ಫೋನ್ ನಂಬರ್ ಕೊಡಿ'' ಎಂದಾಗ ಅವಳು ಅದರಂತೆ ಮಾಡಿದಳು. ಫೋನ್ ಮಾಡಿದ ಕೂಡಲೇ ಜೀಪಿನ ಹತ್ತಿರ ಇದ್ದ ಪಿ.ಸಿ.ಗೆ ಫೋನ್ ಮಾಡಿದನು. ಅವನು ಬಂದು ರೇಷ್ಮಾಳ ಬೆರಳು ಗುರುತುಗಳನ್ನು ಪಡೆದು ಫಿಂಗರ್ ಪ್ರಿಂಟ್‌ನವರ ಪರಿಶೀಲನೆಗೆ ಕಳಿಸಿದನು.

''ರೇಷ್ಮಾಫಿ...ಈಗ ನೀವು ತರಗತಿಗೆ ಹೋಗಬಹುದು. ನಮಗೆ ತಿಳಿಸದೆ ಬೇರೆ ಊರಿಗೆ ಹೋಗಬಾರದು. ನಾನು ಹೇಳಿ ಕಳಿಸಿದಾಗ ಸ್ಟೇಷನ್‌ಗೆ ಬರಬೇಕು.''

ಅವಳು ಹೆದರುತ್ತಲೇ ತಲೆಯಾಡಿಸಿದಾಗ ಪೊಲೀಸ್ ಅಟಕಾರಿ ಅವಳ ಕಡೆ ತೀಕ್ಷ್ಣವಾಗಿ ನೋಡಿ ಹೊರಟನು.

●●●

ಕಾಲೇಜಿಗೆ ಬಂದು ಮಗಳನ್ನು ಪೊಲೀಸ್ ಅಟಕಾರಿ ವಿಚಾರಣೆ ಮಾಡಿರುವುದು ಶ್ರೀಮಂತ ಆನಂದನ್‌ಗೆ ತಿಳಿಯಿತು. ಅವರು ಕೋಪ, ಆವೇಶದಿಂದ ಕೂಗಾಡಿದನು.

ಅಸಲು ಸಂಗತಿ ಏನು? ಅಂತಹ ಪ್ರಭಾವಶಾಲಿ ಶ್ರೀಮಂತ ನಗಳನ್ನು ಒಬ್ಬ ಪೊಲೀಸ್ ಅಟಕಾರಿ ಕಾಲೇಜಿಗೆ ಹೋಗಿ ವಿಚಾರಣೆ ಮಾಡಿದರೆ ಅವಮಾನ ಅಲ್ಲವೆ?

ಫೋನ್ ಮಾಡಿ ಮಾದಪ್ಪನಿಗೆ ಬೆದರಿಕೆ ಹಾಕಿದನು.

ಮಾದಪ್ಪ ಕ್ಯಾರೇ ಎನ್ನಲಿಲ್ಲಫಿ.

ಉನ್ನತ ಪೊಲೀಸ್ ಅಟಕಾರಿಗೆ ಫೋನ್ ಮಾಡಿ ಪ್ರಭಾವ ಬೀರಲು ಪ್ರಯತ್ನಿಸಿದನು. ಹೈಯರ್ ಆಫೀಸರ್‌ಗಳಿಂದ ಫೋನ್ ಕಾಲ್ ಬಂದಿತು.

ಮಾದಪ್ಪ ನಯವಾಗಿ ಉತ್ತರಿಸಿದನು. ಶಾಲೆಯ ಕೊಲೆಯ ಕೇಸು ಮುಖ್ಯ ಹಂತದಲ್ಲಿರುವಾಗ ನಾನು ಯಾರ ಮಾತನ್ನೂ ಕೇಳಲಾರೆ. ಸಂಜೆ ಹೊತ್ತಿಗೆ ರಿಪೋರ್ಟ್ ತಗೊಂಡು ಬರ್ತೀನಿ ಆಗ ನಿಮಗೆ ಗೊತ್ತಾಗುತ್ತೆ ಎಂದು ನಯವಾಗಿ ಹೇಳಿದನು.

ಲ್ಯಾಬ್ ರಿಪೋರ್ಟ್ ಮತ್ತು ಬೆರಳಚ್ಚು ತಜ್ಞರ ವರದಿ ಬಂದಿತು. ವರದಲ್ಲಿ ಆಶ್ಚರ್ಯಕರ ಮಾಹಿತಿ ಇದೆ. ವಿಷಯ ಎರಡು ಸೀಸೆಗಳು ಶವ ಇದ್ದ ಜಾಗದಲ್ಲಿ ಸಿಕ್ಕಿದ್ದವು.

ರಿಪೋರ್ಟ್ ಅಂಶ ಏನು?

ಎರಡು ಸೀಸೆಗಳಲ್ಲಿ ಒಂದರಲ್ಲಿ ಮಾತ್ರ ವಿಷ ಇದೆ.

ಆ್ಯಂಟಿ ಮಿಲಾರ್-ಡಿ-ಸಿಎಸ್. ಮತ್ತೊಂದರಲ್ಲಿ ಆ ವಿಷದ ಬಣ್ಣದ ಹೋಲಿಕೆ ಇರುವ ನೇರಳೆ ಹಣ್ಣಿನ ರಸ ಇದೆ...!

ಬೆರಳಚ್ಚು ತಜ್ಞರ ವರದಿ! ವಿಷದ ದ್ರಾವಣದ ಸೀಸೆಯ ಮೇಲೆ ಆದಿತ್ಯನ ಬೆರಳು ಗುರುತುಗಳು ಮೂಡಿವೆ.

ದ್ರಾವಣದ ಸೀಸೆಯ ಮೇಲೆ ರೇಷ್ಮಾಳ ಬೆರಳು ಗುರುತುಗಳಿವೆ. ಆ ಸ್ಥಳದಲ್ಲಿ ಕೆಲವು ಕಡೆ ಬಿದ್ದಿರುವ ಹೆಜ್ಜೆ ಗುರುತುಗಳು ರೇಷ್ಮಾ ಮತ್ತು ಆದಿತ್ಯನಾಥನದ್ದು ಎಂಬುದು ಖಚಿತವಾಗಿದೆ. ಮತ್ತೊಂದು ಸಂಗತಿ ತನಿಖೆಯಿಂದ ಬೆಳಕಿಗೆ ಬಂದಿತು.

ಆ ಸಂಗತಿ ಏನು?

ಆ್ಯಂಟಿ ಮಿಲಾರ್ ಡಿ-ಸಿಎಸ್ ಎಂಬುದು ಬೆಂಗಳೂರಿನ ಸೈಂಟಿಫಿಕ್ ರೀಸರ್ಚ್ ಸೆಂಟರ್‌ನ ಪ್ರಯೋಗಾಲಯದಲ್ಲಿ ಮಾತ್ರ ಸಿಗುತ್ತದೆ. ಇಂತಹ ವಿಷ ಪ್ರಯೋಗಾಲಯದಿಂದ ಹೊರಗೆ ಬಂದಿದ್ದು ಹೇಗೆ? ಇವಳಿಗೆ ಯಾರು ತಂದು ಕೊಟ್ಟರು?

ಪೊಲೀಸ್ ಅಟಕಾರಿಗಳು ಅವಳನ್ನು ವಶಕ್ಕೆ ಪಡೆದು ತೀವ್ರ ರೀತಿಯಲ್ಲಿ ವಿಚಾರಣೆ ಮಾಡಿದಾಗ ಸತ್ಯ ಬಾಯಿ ಬಿಟ್ಟಳು. ಲ್ಯಾಬ್ ಅಸಿಸ್ಟೆಂಟ್ ರಂಗಬಾಬುಗೆ ಇಪ್ಪತ್ತೈದು ಸಾವಿರ ರೂಪಾಯಿ ಕೊಟ್ಟು ತರಿಸಿಕೊಂಡಿದ್ದಳು. ಎರಡು ಸೀಸೆಗಳನ್ನು ತಂದಿದ್ದಳು. ಎರಡರಲ್ಲಿ ವಿಷ ಇದೆ ಎಂದು ನಂಬಿಸಿದ್ದಳು. ದ್ರಾವಣ ಇದ್ದ ಸೀಸೆ ತಾನು ತಗೊಂಡು ವಿಷ ಇರುವ ಸೀಸೆಯನ್ನು ಕೊಟ್ಟಿದ್ದಳು.

ಅವಳು ಪ್ರಚೋದನೆ ಮಾಡಿದ್ದು ಹೇಗೆ? ನನ್ನ ತಂದೆ ಪ್ರಭಾವಶಾಲಿ ರಾಜಕಾರಣಿ. ಅವರು ನಿನ್ನಂತವನ ಜೊತೆ ನನ್ನ ಮದುವೆ ಮಾಡೋಲ್ಲಫಿ. ನಿನ್ನ ವಿನಹ ಬೇರೆ ಗಂಡಸರನ್ನು ಮದುವೆ ಆಗಲಾರೆ. ಹಾಗಾಗಿ ನನಗೆ ನೀನೇ ಬೇಕು. ನಮ್ಮಿಬ್ಬರ ಪ್ರೀತಿ ಬಗ್ಗೆ ಡ್ಯಾಡಿಗೆ ತಿಳಿದರೆ ನಿನ್ನನ್ನು ಕೊಲೆ ಮಾಡುತ್ತಾರೆ. ಆಮೇಲೆ ನಾನು ಬದುಕಲಾರೆ.

ಉಳಿದಿರೋದು ಒಂದೇ ದಾರಿ. ಸ್ವರ್ಗದಲ್ಲಿ ಮದುವೆ ಆಗೋಣ. ಕೊನೆಯ ಸಲ ನಾವಿಬ್ಬರು ಎಲ್ಲಾ ರೀತಿಯ ಸುಖ ಅನುಭವಿಸಿ ವಿಷ ಕುಡಿದು ಸಾಯೋಣ ಎಂದು ಹೇಳಿದ್ದಳು.

ರತಿ-ಮನ್ಮಥರ ಮಿಲನದ ನಂತರ ಸಾಯಲು ಸಿದ್ದರಾದರು. ಇವಳು ನೇರಳೆಹಣ್ಣಿನ ದ್ರಾವಣ ಕುಡಿದು ಸತ್ತವಳಂತೆ ನಾಟಕ ಆಡಿದಳು. ಅವನು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡನು.

ಇದರ ಹಿನ್ನೆಲೆ ಏನು?

ರೇಷ್ಮಾಳಿಗೆ ವಿಪರೀತ ಕಾಮದ ದಾಹವಿತ್ತುಫಿ. ಆ ಕ್ಷಣಗಳಲ್ಲಿ ಅವಳಿಗೆ ವಿಪರೀತ ದಾಹ ಇತ್ತುಫಿ. ಆಕರ್ಷಕ ರೂಪಿನ ಹಲವಾರು ಯುವಕರನ್ನು ಇದೇ ರೀತಿ ಮರುಳು ಮಾಡಿ ಕಾಮದ ಆಸೆ ತೀರಿಸಿಕೊಂಡಿದ್ದಳು. ಡ್ಯಾಡಿ ಆಯ್ಕೆ ಮಾಡುವ ಶ್ರೀಮಂತ, ಸ್ವಭಾವಶಾಲಿ ರಾಜಕಾರಣಿಯ ಮಗನನ್ನು ಮದುವೆ ಆಗಲು ಅವಳಿಗೆ ಇಷ್ಟ ಇತ್ತುಫಿ. ಆಸೆ ತೀರಿಸಿಕೊಳ್ಳಲು ಅವಳು ಪ್ರೀತಿ-ಪ್ರೇಮದ ನಾಟಕ ಆಡುತ್ತಿದ್ದಳು. ನ್ಯಾಯಾಲಯದಲ್ಲಿ ಕೇಸಿನ ವಿಚಾರಣೆ ನಡೆಯುತ್ತಿದೆ.

# ಲವ್ವಿಡವ್ವಿ ಇಟ್ಟುಕೊಂಡಿದ್ದ ಮಹಿಳೆಯಿಂದಲೇ ಕೊಲೆಯಾದ ಯುವಕ!

**ಇತ್ತೀಚೆಗೆ ಹೆಚ್ಚಿನ ಜನರು ಸೋಶಿಯಲ್ ಮೀಡಿಯಾಗಳನ್ನು ಬಳಸುತ್ತಾರೆ. ಸೋಶಿಯಲ್ ಮೀಡಿಯಾಗಳು ಜೀವನದ ಅವಿಭಾಜ್ಯ ಅಂಗವಾಗಿವೆ. ಆದ್ರೆ ಅವು ಎಷ್ಟು ಅನುಕೂಲವಾಗಿವೆಯೋ ಅಷ್ಟೇ ಅವುಗಳಿಂದ ಅನಾಹುತಗಳು ಕೂಡಾ ಆಗುತ್ತಿವೆ. ಕೊಪ್ಪಳ ಜಿಲ್ಲೆಯಲ್ಲಿ ಸೋಶಿಯಲ್ ಮೀಡಿಯಾದಲ್ಲಿ ಸಕ್ರೀಯನಾಗಿದ್ದ ಯುವಕನೋರ್ವ, ವಿಧವೆ ಮಹಿಳೆಯ ಸಂಪರ್ಕಕ್ಕೆ ಸಿಲುಕಿ, ಆಕೆಯ ಸಂಬಂಧ ಬೆಳಸಿ, ನಂತರ ಆಕೆಯಿಂದಲೇ ಕೊಲೆಯಾಗಿ ಹೋಗಿದ್ದಾನೆ.**


ಕೊಲೆಯಾದ ಶರಣಪ್ಪ

**ಕೊಪ್ಪಳ** ಜಿಲ್ಲೆಯ ಕುಷ್ಟಗಿ ತಾಲೂಕಿನ ಹಿರೇಮನ್ನಾಪುರ ಗ್ರಾಮದಲ್ಲಿ ಯುವಕನೋರ್ವ ಸುಟ್ಟ ಸ್ಥಿತಿಯಲ್ಲಿ ಶವ ಪತ್ತೆ ಪ್ರಕರಣಕ್ಕೆ ಬಿಗ್ ಟ್ವಿಸ್ಟ್ ಸಿಕ್ಕಿದೆ. ಸೆಪ್ಟೆಂಬರ್ 30 ರಂದು ಶರಣಪ್ಪ ಮುಸ್ಕಿ ಮನೆಯಲ್ಲಿ ಸಾವನ್ನಪ್ಪಿದ್ದ. ಇದು ಕೊಲೆಯೋ ಅಥವಾ ಆತ್ಮಹತ್ಯೆಯೋ ಎನ್ನುವುದೇ ನಿಗೂಢವಾಗಿತ್ತು. ಈ ಸಂಬಂಧ ಪ್ರಕರಣದ ತನಿಖೆಗಿಳಿದ ಕುಷ್ಟಗಿ ಠಾಣೆಯ ಪೊಲೀಸರಿಗೆ ಇಂದೊಂದು ಕೊಲೆ ಎನ್ನುವುದು ಗೊತ್ತಾಗಿದೆ. ಇನ್‌ಸ್ಟಾಗ್ರಾಮ್‌ನಲ್ಲಿ ಪರಿಚಯವಾಗಿದ್ದ ವಿಧವೆ ಮಹಿಳೆಯೇ ಶರಣಪ್ಪನನ್ನು ಕೊಲೆ ಮಾಡಿರುವುದು ಗೊತ್ತಾಗಿದ್ದು, ಸದ್ಯ ಕೊಲೆಪಾತಕಿ ಪೊಲೀಸರ ಅತಿಥಿಯಾಗಿದ್ದಾಳೆ. ಇನ್ನು ಈ ಪ್ರಕರಣವನ್ನು ಬೇಽಸಿದ್ದೇ ರೋಚಕ.

ಶರಣಪ್ಪನನ್ನು ಕೊಲೆ ಮಾಡಿದವರು ಬೆಳಗಾವಿ ಜಿಲ್ಲೆಯ ಮುಗಳಖೋಡ ಗ್ರಾಮದ ನಿವಾಸಿಗಳಾದ ಮೂವತ್ತು ವರ್ಷದ ಭಾಗ್ಯಶ್ರೀ ಮತ್ತು ಇಬ್ರಾಹಿಂ ಅನ್ನೋರು. ಆರೋಪಿ ಭಾಗ್ಯಶ್ರೀಗೆ ಮದುವೆಯಾಗಿದ್ದು ಪತಿ ಕೆಲ ವರ್ಷಗಳ ಹಿಂದೆಯೇ ಮೃತಪಟ್ಟಿದ್ದಾನಂತೆ. ಇನ್ನು ವರ್ಷದ ಹಿಂದೆ ಶರಣಪ್ಪಳಿಗೆ ಇನ್‌ಸ್ಟಾಗ್ರಾಂ ಮೂಲಕ ಭಾಗ್ಯಶ್ರೀ ಪರಿಚಯವಾಗಿದ್ದಳಂತೆ. ಇದು ಇಬ್ಬರ ನಡುವೆ ಅನೈತಿಕ ಸಂಬಂಧಕ್ಕೆ ಕೂಡಾ ಕಾರಣವಾಗಿತ್ತು. ಹೀಗಾಗಿ ಆಗಾಗ ಭಾಗ್ಯಶ್ರೀ, ಶರಣಪ್ಪನ ಸ್ವಗ್ರಾಮವಾಗಿರೋ ಹಿರೇಮನ್ನಾಪುರ ಗ್ರಾಮಕ್ಕೆ ಬಂದು ಹೋಗುತ್ತಿದ್ದಳಂತೆ. ಶರಣಪ್ಪ ಕೂಡಾ ಭಾಗ್ಯಶ್ರೀ ಇದ್ದಲ್ಲಿ ಹೋಗಿ ಬರ್ತಿದ್ದನಂತೆ.


ಎಸ್ಪಿ ಡಾ. ರಾಮ್ ಎಲ್. ಅರಸಿದ್ದಿ

ಅವಿವಾಹಿತನಾಗಿದ್ದ ಶರಣಪ್ಪ ಮತ್ತು ಭಾಗ್ಯಶ್ರೀ ಇಬ್ಬರು ಇದ್ದಾಗ ಅನೇಕ ಖಾಸಗಿ ಕ್ಷಣಗಳ ಫೋಟೋಗಳನ್ನು ತನ್ನ ಮೊಬೈಲ್‌ನಲ್ಲಿ ತಗೆದುಕೊಂಡಿದ್ದನಂತೆ. ಇನ್ನು ಭಾಗ್ಯಶ್ರೀಗೆ ಶರಣಪ್ಪನ ಜೊತೆ ಸಂಬಂಧವಿದ್ರು ಕೂಡಾ ತನ್ನದೇ ಗ್ರಾಮದಲ್ಲಿರುವ ಇಬ್ರಾಹಿಂ ಅನ್ನೋನ ಜೊತೆ ಕೂಡಾ ಸಂಬಂಧ ಬೆಳಸಿದ್ದಳಂತೆ. ಇಬ್ರಾಹಿಂಗೆ, ಭಾಗ್ಯಶ್ರೀಗೆ ಶರಣಪ್ಪಳ ಜೊತೆ ಸಂಬಂಧ ಇರೋದು ಗೊತ್ತಾಗಿತ್ತು. ಹೀಗಾಗಿ ಶರಣಪ್ಪನ ತಂಟೆಗೆ ಹೋಗದಂತೆ ಭಾಗ್ಯಶ್ರೀಗೆ ಹೇಳಿದ್ದ. ಹೀಗಾಗಿ ಭಾಗ್ಯಶ್ರೀ, ಶರಣಪ್ಪನಿಂದ ದೂರವಾಗುತ್ತಾ ಹೊರಟಿದ್ದಳು. ಇದು ಶರಣಪ್ಪನ ಆಕ್ರೋಶಕ್ಕೆ ಕಾರಣವಾಗಿತ್ತು. ಹೀಗಾಗಿ ತಾವು ಇಬ್ಬರು ಇರೋ ಫೋಟೋಗಳನ್ನು ಸೋಶಿಯಲ್ ಮೀಡಿಯಾದಲ್ಲಿ ಹರಿಬಿಡೋದಾಗಿ ಭಾಗ್ಯಶ್ರೀಗೆ ಶರಣಪ್ಪ ಬೆದರಿಕೆ ಹಾಕಿದ್ದ.

ಫೋಟೋಗಳು ವೈರಲ್ ಆದ್ರೆ ತನ್ನ ಮರ್ಯಾದೆ ಹಾಳಾಗುತ್ತದೆ ಅಂತ ತಿಳಿದ ಭಾಗ್ಯಶ್ರೀ, ಸೆಪ್ಟೆಂಬರ್ 30 ರಂದು ಇಬ್ರಾಹಿಂನನ್ನು ಕರೆದುಕೊಂಡು ಬೈಕ್ ಮೇಲೆ ರಾತ್ರಿ ಹಿರೇಮನ್ನಾಪುರ ಗ್ರಾಮಕ್ಕೆ ಬಂದಿದ್ದಳು. ರಾತ್ರಿ ಎರಡು ಗಂಟೆ ಸಮಯದಲ್ಲಿ ಶರಣಪ್ಪನನ್ನು ಕೊಲೆ ಮಾಡಿ, ಪೆಟ್ರೋಲ್ ಹಾಕಿ ಶವ ಸುಟ್ಟು, ನಂತರ ಗ್ಯಾಸ್ ಬಳಿ ಶವ ಹಾಕಿ ಪರಾರಿಯಾಗಿದ್ದರು. ಹೋಗುವಾಗ ಶರಣಪ್ಪನ ಮೊಬೈಲ್ ಕೂಡಾ ತೆಗೆದುಕೊಂಡು ಹೋಗಿದ್ದರು. ತಮ್ಮೂರಿಗೆ ಹೋಗಿದ್ದ ಭಾಗ್ಯಶ್ರೀ ಮತ್ತು ಇಬ್ರಾಹಿಂ, ತಮ್ಮ ಪಾಡಿಗೆ ತಾವು ಇದ್ದರಂತೆ.

## ಆರೋಪಿಗಳು ಸಿಕ್ಕಿದ್ದು ಹೇಗೆ ಗೊತ್ತಾ?

ಶರಣಪ್ಪನ ಕೊಲೆಯಾಗಿದ್ದರ ಬಗ್ಗೆ ತನಿಖೆ ಆರಂಭಿಸಿದ್ದ ಕುಷ್ಟಗಿ ಠಾಣೆಯ ಪೊಲೀಸರಿಗೆ ಸೂಕ್ತ ಸಾಕ್ಷಿಗಳಿಗಾಗಿ ಹುಡುಕಾಟ ನಡೆಸಿದ್ದರು. ಆದ್ರೆ, ಆರೋಪಿಗಳು ಬಂದು ಕೊಲೆ ಮಾಡಿ ಹೋಗಿದ್ದನ್ನು ಯಾರು ನೋಡಿರಲಿಲ್ಲ. ಹೀಗಾಗಿ ಯಾರು ಕೊಲೆ ಮಾಡಿದ್ದರು ಅನ್ನೋದು ಪತ್ತೆ ಮಾಡುವುದೇ ಸವಾಲಾಗಿತ್ತು. ಆದ್ರೆ, ಕಳೆದ ಕೆಲ ದಿನಗಳಿಂದ ಶರಣಪ್ಪನ ಮೊಬೈಲ್‌ಗೆ ಯಾರೆಲ್ಲರ ಕರೆಗಳು ಬಂದಿವೆ ಅನ್ನೋದನ್ನು ಪತ್ತೆ ಮಾಡಿದಾಗ ಭಾಗ್ಯಳ ನಂಬರ್ ಸಿಕ್ಕಿದೆ. ಹೀಗಾಗಿ ಭಾಗ್ಯಶ್ರೀಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೊಲೆ ರಹಸ್ಯ ಬಯಲಾಗಿದೆ. ಅಚ್ಚರಿಯೆಂದ್ರೆ, ಆರೋಪಿಗಳು ಇಬ್ಬರು ಕೂಡಾ, ಕೊಲೆ ಮಾಡಲು ಬರುವಾಗ, ಮೊಬೈಲ್ ತಂದ್ರೆ, ಸಿಕ್ಕಿ ಬೀಳ್ತೇವೆ ಅಂತ ತಿಳಿದು ಮೊಬೈಲ್‌ಗಳನ್ನು ಮನೆಯಲ್ಲಿಯೇ ಬಿಟ್ಟು ಬಂದಿದ್ದರಂತೆ.

ಸದ್ಯ ಭಾಗ್ಯ ಮತ್ತು ಇಬ್ರಾಹಿಂನನ್ನು ಬಂಽಸಿರೋ ಕುಷ್ಟಗಿ ಪೊಲೀಸರು ಇಬ್ಬರನ್ನು ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ. ಆದ್ರೆ, ಮದುವೆಯಾಗಿ ಚೆನ್ನಾಗಿ ಸಂಸಾರ ನಡೆಸೋದನ್ನು ಬಿಟ್ಟು, ವಿಧವೆ ಮಹಿಳೆ ಜೊತೆ ಅಕ್ರಮ ಸಂಬಂಧ ಹೊಂದಿದ್ದ ಶರಣಪ್ಪ ಕೊಲೆಯಾಗಿ ಬಾರದ ಲೋಕಕ್ಕೆ ಹೋಗಿದ್ದು ಮಾತ್ರ ದುರ್ದೈವದ ಸಂಗತಿಯಾಗಿದೆ.


ಆರೋಪಿ ಇಬ್ರಾಹಿಂ

## ಘಟನೆ ವಿವರ

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಹಿರೇಮನ್ನಾ ಪುರ ಗ್ರಾಮದಲ್ಲಿ, ಸೆಪ್ಟೆಂಬರ್ 30 ಯುವಕನೋರ್ವ ಸುಟ್ಟ ಸ್ಥಿತಿಯಲ್ಲಿ ಶವವಾಗಿ ಪತ್ತೆಯಾಗಿತ್ತು. ಇನ್ನು ಯುವಕನ ಹೆಸರು ಶರಣಪ್ಪ ಮುಸ್ಕಿ ಅಂತ. ಇಪ್ಪತ್ತೆರಡು ವರ್ಷದ ಶರಣಪ್ಪ ಗ್ರಾಮದಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದ. ತಾಯಿ ಅನೇಕ ವರ್ಷಗಳ ಹಿಂದೆಯೇ ಬಾರದ ಲೋಕಕ್ಕೆ ಹೋಗಿದ್ದಳು. ತಂದೆಗೆ ವಯಸ್ಸಾಗಿದ್ದರಿಂದ, ಆತ ಸಹೋದರಿ ಜೊತೆ ಬೇರೆ ಗ್ರಾಮದಲ್ಲಿ ಇದ್ದ. ಅವಿವಾಹಿತನಾಗಿದ್ದ ಶರಣಪ್ಪ ಒಬ್ಬನೇ ಮನೆಯಲ್ಲಿ ಇರ್ತಿದ್ದ. ಆದ್ರೆ ಸೆಪ್ಟೆಂಬರ್ 30ರಂದು ಮುಂಜಾನೆ ಕೆಲಸಕ್ಕೆ ಕರೆಯಲು ಹೋದಾಗ, ಮನೆ ಬಾಗಿಲು ಒಳಗಿನಿಂದ ಲಾಕ್ ಇರಲಿಲ್ಲ. ಬಾಗಿಲು ದೂಡಿದಾಗ, ಸುಟ್ಟ ಸ್ಥಿತಿಯಲ್ಲಿ ಶವ ಪತ್ತೆಯಾಗಿತ್ತು. ಶವ ನೋಡಿದ ಸುತ್ತಮುತ್ತಲಿನ ಜನರು, ಆತ್ಮಹತ್ಯೆ ಇರಬಹುದು ಅಂತ ಅಂದುಕೊಂಡಿದ್ದರು. ಆದ್ರೆ ಪೊಲೀಸರು, ಶ್ವಾನದಳ, ಬೆರಳಚ್ಚು ತಜ್ಞರು ಬಂದು ನೋಡಿದಾಗ ಗೊತ್ತಾಗಿದೆ, ಶರಣಪ್ಪನದು ಆತ್ಮಹತ್ಯೆಯಲ್ಲಾ, ಬದಲಾಗಿ ಕೊಲೆ ಅನ್ನೋದು.


ಆರೋಪಿ ಭಾಗ್ಯಶ್ರೀ

ಹೌದು, ಸೆಪ್ಟೆಂಬರ್ 29 ರಂದು ರಾತ್ರಿ ಮನೆಗೆ ಬಂದಿದ್ದ ಹಂತಕರು, ಕೊಲೆ ಮಾಡಿ, ನಂತರ ಗ್ಯಾಸ್ ಸಿಲಿಂಡರ್ ಬಳಿ ಶವ ಹಾಕಿ, ಬೆಂಕಿ ಹಚ್ಚಿದ್ದಲ್ಲದೇ, ಗ್ಯಾಸ್ ಆನ್ ಮಾಡಿ, ಇಡೀ ಮನೆಯನ್ನು ಸ್ಪೋಟಗೊಳ್ಳುವಂತೆ ಮಾಡಿ ಹೋಗಿದ್ದಾರೆ. ಆದ್ರೆ, ಗ್ಯಾಸ್ ಖಾಲಿಯಾಗಿದ್ದರಿಂದ ಯಾವುದೇ ದೊಡ್ಡ ಅನಾಹುತವಾಗಿಲ್ಲ. ಇನ್ನು ಆತ್ಮಹತ್ಯೆ ಅಂತ ತಿಳಿದಿದ್ದವರಿಗೆ ಕೊಲೆ ಅನ್ನೋದು ಗೊತ್ತಾಗುತ್ತಿದ್ದಂತೆ ಕುಟುಂಬದವರು ಕುಷ್ಟಗಿ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಿಸಿದ್ದರು. ಪ್ರಕರಣಕ್ಕೆ ಸಂಬಂಽಸಿದಂತೆ ಕುಷ್ಟಗಿ ಪೊಲೀಸರು ಇದೀಗ ಓರ್ವ ಮಹಿಳೆ ಸೇರಿದಂತೆ ಇಬ್ಬರನ್ನು ಬಂಽಸುವಲ್ಲಿ ಯಶಸ್ವಿಯಾಗಿದ್ದಾರೆ.

ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಽಕಾರಿ ಡಾ. ರಾಮ್ ಎಲ್. ಅರಸಿದ್ದಿ ಅವರು ತನಿಖಾ ತಂಡಗಳಾದ ಅಮರೇಶ್, ಶ್ರೀಧರ್, ಪ್ರಶಾಂತ್, ಸಂಗಮೇಶ್, ಪರಶುರಾಮ್, ಪ್ರಸಾದ್ ಹಾಗೂ ಮಂಜುನಾಥ್‌ರವರುಗಳನ್ನು ಶ್ಲಾಘಿಸಿ ಬಹುಮಾನ ಘೋಷಿಸಿದರು.

## ಓದುಗರ ಗಮನಕ್ಕೆ

### ರಾಜಕೀಯ ಸುದ್ದಿಯೂ ಇರುತ್ತದೆ...

'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಬರೀ ಅಪರಾಧ ವರದಿಗಳು ಮಾತ್ರ ಬರುತ್ತದೆ ಅಂದುಕೊಳ್ಳಬೇಡಿ. ಬದಲಾದ ಕಾಲಮಾನದಲ್ಲಿ ಇನ್ನು ಮುಂದೆ ರಾಜಕೀಯ, ಭ್ರಷ್ಟಾಚಾರ, ಮುಚ್ಚಿ ಹೋಗಿರುವ 'ಕ್ರೈಂ' ಮುಂತಾದ ರಹಸ್ಯ ವರದಿಗಳನ್ನು ಬ್ಲಾಸ್ಟ್ ಮಾಡಲಿದ್ದೇವೆ. ನಿಮ್ಮ ಊರುಗಳಲ್ಲಿ ಇಂತಹ ಬ್ಲಾಸ್ಟ್ ಮಾಡುವಂತಹ ಸುದ್ದಿಗಳಿದ್ದರೆ ನಮಗೆ ಕಳುಹಿಸಿ ಕೊಡಿ. ನಿಮ್ಮ ಹೆಸರು, ವಿಳಾಸವನ್ನು ರಹಸ್ಯವಾಗಿಡುವ ಜವಾಬ್ದಾರಿ ನಮ್ಮದು. ನೀವು ಕಳುಹಿಸುವ ವರದಿಗೆ ದಾಖಲೆಗಳಿದ್ದರೆ ಒಳ್ಳೆಯದು. ಅಕಸ್ಮಾತ್ ದಾಖಲೆಗಳು ಇಲ್ಲದಿದ್ದಲ್ಲಿ, ನೀವು ಕಳುಹಿಸುವ ವರದಿಯಲ್ಲಿ ದಾಖಲೆಗಳು ಸಿಗುವ ಜಾಗವನ್ನು ನಮೂದಿಸಿದರೆ ಸಾಕು, ದಾಖಲೆ ಎತ್ತುವ ಜವಾಬ್ದಾರಿ ನಮ್ಮದು.

**ನಮ್ಮ ವಿಳಾಸ :**

8884452699 policenewsreporter@gmail.com 080-23588510

ನಂ. 165, 8ನೇ ಮುಖ್ಯರಸ್ತೆಘಿ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079

**3** ☞

ಯಶಸ್ವಿ ಆಗಿದ್ದರು.

**ರಾಯಚೂರು ರೈತನಿಗೆ 'ಹನಿಟ್ರ್ಯಾಪ್'...**

ಗಜಲಾಬಾನು ಬಂಗಾರದ ತತ್ತಿ ಇಡುವ ಕೋಳಿ ಯಂತಾಗಿದ್ದಳು. ಇವಳು ಬರುಬರುತ್ತ 'ಹನಿಟ್ರ್ಯಾಪ್' ಮಾಡುವುದರಲ್ಲಿ ಎಕ್ಸ್‌ಪರ್ಟ್ ಆಗಿದ್ದಳು. ತನ್ನ ಮಾದಕ ವಾದ ಮಾತುಗಳಿಂದಲೇ ಪರ ಪುರುಷರನ್ನು 'ಹನಿಟ್ರ್ಯಾಪ್' ಖೆಡ್ಡಾಗೆ ಕೆಡವುತ್ತಿದ್ದಳು. ಕಳೆದ ಸುಮಾರು ದಿನಗಳ ಹಿಂದೆ ರಾಯಚೂರು ಮೂಲದ ಮಸ್ಕಿ ಪಟ್ಟಣದ ಆಗರ್ಭ ಶ್ರೀಮಂತ ರೈತನೊಬ್ಬನನ್ನು ಸಾಮಾಜಿಕ ಜಾಲ ತಾಣದಲ್ಲಿ ಪರಿಚಯ ಮಾಡಿಕೊಂಡು, ಮೊಬೈಲ್ ನಂಬರ್ ಪಡೆದು ಸಂಪರ್ಕ ಸಾಧಿಸುತ್ತ ತೀರಾ ಸಲುಗೆ ಬೆಳೆಸಿಕೊಂಡು 'ನೀವು... ಅಂದರೆ ನನ್ನ ಜೀವಾಧಿ ದಯವಿಟ್ಟು ಪ್ಲೀಸ್ ಬನ್ನಿ' ಎಂದು ಅಂಗಲಾಚಿದ್ದಳು. ಅತ್ತ ಕಡೆ ಬಲೆಗೆ ಬಿದ್ದ ರೈತ ಗಜಾಲಾಬಾನುವಿನ ಭೇಟಿಗಾಗಿ ತಡಪಡಿಸಿ ಅದೊಂದು ದಿನ ಬರುವ ದಿನಾಂಕ ಫಿಕ್ಸ್ ಮಾಡಿದನು. 'ರೀ... ಲಾಡ್ಜ್‌ಗೆ ಬೇಡಾಧಿ ಪೊಲೀಸರ ಭಯವಿದೆ. ನಮ್ಮ ಗೆಳತಿ ಒಬ್ಬಳೇ ಇದ್ದಾಳೆ. ಅವಳ ಮನೆಯಲ್ಲಿ ಭೇಟಿಯಾಗೋಣ' ಎಂದು ಸಲೀಸಾಗಿ ನಂಬಿಸಿದಳು.

ಗಜಾಲಾಬಾನುವಿನ ಮೋಹದ ಜಾಲದಲ್ಲಿ ಸಿಲುಕಿದ್ದ ರಾಯಚೂರು ಮೂಲದ ರೈತನನ್ನು ತನ್ನ ಗ್ಯಾಂಗ್‌ನ ಸದಸ್ಯೆ ಆಗಿದ್ದ ರೇಣುಕಾ ಉಪ್ಪಾರಳ ಮನೆಗೆ ಕರೆದೊಯ್ದಳು. 'ಬೆಡ್‌ರೂಂ'ನಲ್ಲಿ ಬೆತ್ತಲೆ ಆಗಿ, ರೈತನನ್ನು ಬೆತ್ತಲೆ ಮಾಡಿಕೊಂಡು ಖಾಸಗಿತನದ ಫೋಟೋ ಮತ್ತು ವ್ಹಿಡಿಯೋಗಳನ್ನು ಮಾಡಿಕೊಂಡಳು. ಇದೇ ಸಮಯದಲ್ಲಿ ಆಕಾಶನ ಮೊಬೈಲ್‌ಗೂ ಫೋಟೋ ಮತ್ತು ವ್ಹಿಡಿಯೋ ಕಳಿಸಿದ್ದಳು ವಂಚಕಿ ಗಜಾಲಾಬಾನು.

**ನಕಲಿ ಪೊಲೀಸ್ ಅಧಿಕಾರಿ ಎಂಟ್ರಿಘಿ...**

ವಂಚಕಿ ಗಜಾಲಾಬಾನುವಿನ ಬೆತ್ತಲೆ ತೋಳ್ತೆಕ್ಕೆಯಲ್ಲಿ ಬಂಧಿಯಾಗಿದ್ದ ರೈತ ಮೈಮರೆತಿದ್ದಾಗ ಒಮ್ಮೆಲೆ ಬಾಗಿಲನ್ನು ಧಡಧಡನೇ ಬಡಿದ ಶಬ್ದವಾಗುತ್ತದೆ. ಸರಕ್ಕನೇ ಎದ್ದು ಗಜಾಲಾಬಾನು ಬಾಗಿಲು ತೆಗೆದಾಗ ಎದುರಿಗೆ ಬಂದಿದ್ದ ನಕಲಿ ಪೊಲೀಸ್ ಅಧಿಕಾರಿ ಆಕಾಶ 'ಏಧಿ ಇಲ್ಲಿ ಏನು ನಡೆಸಿದ್ದೀರಿ. ಈ ಮನೆಯಲ್ಲಿ ಅನೈತಿಕ ದಂಧೆ ನಡೆಯುತ್ತಿವೆ ಎಂದು ನಮಗೆ ಮಾಹಿತಿ ದೊರೆತಿದೆ' ಎಂದು ಬೆದರಿಸಿ ತನ್ನ ಮೊಬೈಲ್‌ನಲ್ಲಿ ಗಜಾಲಾಬಾನು ಜತೆಗೆ ಬೆತ್ತಲಾಗಿದ್ದ ರೈತನ ಫೋಟೋ ಮತ್ತು ವ್ಹಿಡಿಯೋ ತೆಗೆದುಕೊಂಡು ನಿನ್ನ ಮೇಲೆ ಪ್ರಕರಣ ದಾಖಲಿಸುತ್ತೇನೆ ಮತ್ತು ನಿಮ್ಮ ಕುಟುಂಬದವರಿಗೆ ನೀವು ಮಾಡುತ್ತಿರುವ ಕಾಮದಾಟ ಕಳಿಸಲಾಗುವುದು ಎಂದಾಗ ರೈತನು ಹೆದರಿ ಬೆವರಿದ್ದನು. 'ಬೇಡಾಧಿ ಸಾಹೇಬ್ರ' ಎಂದು ದಬಕ್ಕನೇ ಕಾಲಿಗೆ ಬಿದ್ದು ಹೇಗಾದರೂ ಮಾಡಿ ಇಲ್ಲಿಯೇ ಮುಗಿಸಿಬಿಡ್ರಿಘಿ... ನೀವು ಹೆಂಗ ಹೇಳತೀರಿ ಹಂಗ... ಕೇಳತೇನು' ಎಂದಿದ್ದಾನೆ. ಆಗ ಆಕಾಶನು 'ನಮ್ಮ ಡಿವೈಎಸ್ಪಿ ಸಾಹೇಬರು ಮಾತಾಡ್ತಾರೆ ಮಾತಾಡು...' ಎಂದು ವಂಚಕ ಮಲ್ಲಿಕ್‌ಜಾನ್‌ಗೆ ಮೊಬೈಲ್ ಕರೆ ಮಾಡುತ್ತಾನೆ. ಆ ಕಡೆಯಿಂದ ಪೊಲೀಸ್ ಅಧಿಕಾರಿ ಗತ್ತಿನಲ್ಲಿ ವಾಮಗೋಚರವಾಗಿ ಬೈದು 'ನಮ್ಮ ಅಧಿಕಾರಿ ಹೇಳಿದಂತೆ ಕೇಳು ಇಲ್ಲವಾದರೆ ನಿನ್ನ ಪರಿಸ್ಥಿತಿ ನೆಟ್ಟಗಿರಲಾರದು' ಎಂದು ರೈತನಿಗೆ ಆವಾಜ್ ಹಾಕುತ್ತಾನೆ.



'ಹನಿಟ್ರ್ಯಾಪ್' ಗ್ಯಾಂಗ್‌ನಿಂದ ಸ್ಕೋಡಾ ಕಾರು, ಚಿನ್ನಾಭರಣ, ನಗದು ಹಣ, ಮೊಬೈಲ್‌ಗಳು ವಶಪಡಿಸಿಕೊಂಡಿರುವುದು

**ಬ್ಲ್ಯಾಕ್‌ಮೇಲ್ ಮಾಡಿ 50 ಲಕ್ಷ ರೂ...**

ರಾಯಚೂರು ಮೂಲದ ರೈತ ಸಮಾಜದಲ್ಲಿ ತುಂಬಾ ಮರ್ಯಾದಸ್ತನಾಗಿರುತ್ತಾನೆ. ಆತನಿಗೆ ತನ್ನ ಕುಟುಂಬದ ಮರ್ಯಾದೆಯೂ ಅಷ್ಟೇ ಮುಖ್ಯವಾಗಿರುತ್ತದೆ. 'ತಾನು ಗಜಾಲಾಬಾನುವಿನ ಜತೆಗೆ ಅಸಹ್ಯವಾಗಿ ಬೆತ್ತಲಾದ ಫೋಟೋ ಮತ್ತು ವ್ಹಿಡಿಯೋಗಳು ನನ್ನ ಕುಟುಂಬಕ್ಕೆ ತಲುಪಿದರೆ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದರೆ ನನ್ನ ಗತಿಯೇನು' ಎಂದು ತುಂಬಾ ಹೆದರಿದ್ದನು. ಆಗ ಖದೀಮ ಆಕಾಶ ಉಪ್ಪಾರ ಹೇಳಿದಂತೆ ರೈತ ಹಣವನ್ನು ಹೇಗೊ ಹೊಂದಿಸಿ ನೀಡಿ ತಾನು ಪಾರಾದೆ ಎಂದು ಕೈ ಮುಗಿದು ಕೃತಜ್ಞತೆ ಅರ್ಪಿಸಿದನು. ವಂಚಕರ 'ಹನಿಟ್ರ್ಯಾಪ್' ಗ್ಯಾಂಗ್ ತಮಗೆ ಹಣ ಕಡಿಮೆ ಬಿದ್ದಾಗೊಮ್ಮೆ ರೈತನಿಗೆ ಬ್ಲ್ಯಾಕ್‌ಮೇಲ್ ಮಾಡುತ್ತ 'ನಿನ್ನ ಫೋಟೋ ಮತ್ತು ವ್ಹಿಡಿಯೋ ನಿನ್ನ ಮನೆಗೆ ಕಳಿಸುತ್ತೇವೆ. ಹಾಗೂ ನಿನ್ನ ಮೇಲೆ ಕೇಸ್ ಮಾಡುತ್ತೇವೆ ಎಂದು ಹೆದರಿಸಿದಾಗೊಮ್ಮೆ ರೈತ ಹಣ ಕಳಿಸತೊಡಗಿದನು. ಸುಮಾರು ದಿನಗಳಲ್ಲಿ ರೈತ ಬರೋಬ್ಬರಿ 50 ಲಕ್ಷ ರೂ. ಗಳನ್ನು ಕಳಿಸಿದ್ದನು.

**'ಹನಿಟ್ರ್ಯಾಪ್'ಗೆ ಹೆದರಿ ಆತ್ಮಹತ್ಯೆಗೆ ನಿರ್ಧಾರ...**

'ಹನಿಟ್ರ್ಯಾಪ್'ಗೆ ಈಡಾದ ರೈತನಿಗೆ ನಿಜವಾಗಿ ಬದುಕು ಸಾಕಾಗಿತ್ತುಘಿ. ವಂಚಕರ ಗ್ಯಾಂಗ್ ಮೇಲಿಂದ ಮೇಲೆ ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮುಂದುವರೆಸಿತ್ತುಘಿ. 'ಎಷ್ಟು ಅಂತಾ ಹಣ ಕೊಡುವುದು... ಇದಕ್ಕಿಂತ ತಾನು ಆತ್ಮಹತ್ಯೆ ಮಾಡಿಕೊಳ್ಳುವುದೇ ಸೂಕ್ತ' ಎಂದು ನಿರ್ಧಾರ ವೊಂದಕ್ಕೆ ಬಂದನು. ರೈತನಿಗೆ ಅತ್ಯಂತ ಆತ್ಮೀಯರಾಗಿದ್ದ ಪೊಲೀಸ್ ಅಧಿಕಾರಿಯ ಮುಂದೆ ಎಲ್ಲ ವಿಷಯ ತಿಳಿಸಿ ದಾಗ ಇದೊಂದು 'ಹನಿ ಟ್ರ್ಯಾಪ್' ಗ್ಯಾಂಗ್‌ನ ಕೆಲಸ. ನೀನೇನು ಹೆದರಬೇಡ. ನೇರವಾಗಿ ಧಾರವಾಡದ ವಿದ್ಯಾಗಿರಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಲು ಸಲಹೆ ನೀಡಿದರು. ಅದರಂತೆ ರೈತ ಪೊಲೀಸ್ ಕಂಪ್ಲೆಂಟ್ ನೀಡಲು ನಿರ್ಧರಿಸಿದನು.

**ಪೊಲೀಸರಿಗೆ 'ಹನಿಟ್ರ್ಯಾಪ್' ದೂರು...**

ಅಂದು ದಿನಾಂಕ 09-10-2024ರಂದು ಧಾರ ವಾಡದ ವಿದ್ಯಾನಗರದ ಪೊಲೀಸ್ ಠಾಣೆಗೆ ಆಗಮಿಸಿದ ರಾಯಚೂರಿನ ರೈತ ಇನ್‌ಸ್ಪೆಕ್ಟರ್ ಸಂಗಮೇಶ ದಿಡಿಗಿನ ಹಾಳ ಅವರನ್ನು ಕಂಡು ತಾನು ಹನಿಟ್ರ್ಯಾಪ್‌ಗೆ ಬಲಿ ಯಾಗಿ ಹಣ ಕಳೆದುಕೊಂಡ ಬಗ್ಗೆ ತಿಳಿಸಿ ಮತ್ತೆ ಹಣಕ್ಕಾಗಿ ಇನ್ನಿಲ್ಲದ ಕಿರಿಕಿರಿ ಮಾಡುತ್ತಿದ್ದಾರೆ ಎಂದು ವಿವರಿಸಿ ವಿವರವಾದ ದೂರು ನೀಡಿದ್ದನು. ವಿದ್ಯಾನಗರದ ಧಾಡಸಿ ಹಾಗೂ ಚತುರ ಇನ್‌ಸ್ಪೆಕ್ಟರ್ ಸಂಗಮೇಶ ದಿಡಿಗನಾಳ ಅವರು ತಡ ಮಾಡದೇ ಎಸಿಪಿ ಸಿದ್ದನಗೌಡ ಪಾಟೀಲ, ಡಿಸಿಪಿ (ಕಾ.ಸು) ಮಹಾನಿಂದ ನಂದಗಾಂವಿ ಪೊಲೀಸ್ ಕಮೀಷನರ್ ಎನ್. ಶಶಿಕುಮಾರ್ ಅವರ ಗಮನಕ್ಕೆ 'ಹನಿಟ್ರ್ಯಾಪ್' ವಿಷಯವನ್ನು ತಂದು ಸುದೀರ್ಘ ಸಮಾಲೋಚನೆ ನಡೆಸಿ ಅವರಿಂದ ಸೂಕ್ತ ನಿರ್ದೇಶನ ಗಳನ್ನು ಪಡೆದು 'ಹನಿಟ್ರ್ಯಾಪ್' ಖದೀಮರ ಹೆಡೆಮುರಿ ಕಟ್ಟಲು ನಿರ್ಧರಿಸಿದರು.

**'ಹನಿಟ್ರ್ಯಾಪ್' ಗ್ಯಾಂಗ್‌ನ 4 ಜನರ ಬಂಧನ...**

ಪೊಲೀಸ್ ಇನ್‌ಸ್ಪೆಕ್ಟರ್ ಸಂಗಮೇಶ ದಿಡಿಗಿನಹಾಳ ಮತ್ತು ಪಿಎಸ್‌ಐಗಳಾದ ಪ್ರಮೋದ ಹೆಚ್., ಬಾಬು ಎಂ. ಮತ್ತು ಸಿಬ್ಬಂದಿಗಳೊಡನೆ 'ಹನಿಟ್ರ್ಯಾಪ್' ಜಾಲವನ್ನು ಶತಾಯ-ಗತಾಯ ಬೇಧಿಸಿ ಖದೀಮರನ್ನು ಖೆಡ್ಡಾಗೆ ಕೆಡವಲು ನಿರ್ಧರಿಸಿದ್ದರು. ಮೊದಲಿಗೆ ರೈತನು ನೀಡಿದ ಸಣ್ಣ ಸುಳಿವು ಆಧರಿಸಿ ಮಾಹಿತಿ ಕಲೆ ಹಾಕಲು ಆರಂಭಿಸಿದ ಇನ್‌ಸ್ಪೆಕ್ಟರ್ ಸಂಗಮೇಶ ಅವರ ತಂಡ ಎರಡು ದಿನಗಳಲ್ಲಿ ಸಂಪೂರ್ಣ 'ಹನಿಟ್ರ್ಯಾಪ್ ಗ್ಯಾಂಗ್'ನ ಕುಂಡಲಿಯನ್ನು ಅಂಗೈನಲ್ಲಿರಿಸಿತ್ತುಘಿ. ಇದಕ್ಕಾಗಿ ಹುಬ್ಬಳ್ಳಿ-ಧಾರವಾಡ ಸಿಸಿಬಿ ಪೊಲೀಸ್ ಅಧಿಕಾರಿಗಳಾದ ಪ್ರಭು, ಗಂಗೇನಹಳ್ಳಿಘಿ, ಮಾರುತಿ ಗುಳ್ಳಾರಿ ಅವರ ನೆರವು ಮತ್ತು ಸಹಕಾರವನ್ನು ಪಡೆದುಕೊಂಡಿತು.

ಅಂದುಕೊಂಡಂತೆ ದಿನಾಂಕ 11-10-2024ರಂದು 'ಹನಿಟ್ರ್ಯಾಪ್'ನ ಆಕಾಶ ರವಿ ಉಪ್ಪಾರ ಸಾ|| ಧಾರವಾಡ, ಗಜಾಲಾಬಾನು ಅಲಿಯಾಸ್ ಅಂಜು ಅಲಿಯಾಸ್ ಪರ್ವಿನ್ ತಂದೆ ಬಶೀರ್ ನಗರಿ, ಸಾ|| ಹುಬ್ಬಳ್ಳಿಘಿ, ಶ್ರೀಮತಿ ರೇಣುಕಾ ಅಲಿಯಾಸ್ ರಿಯಾನಾ ಆಕಾಶ ಉಪ್ಪಾರ ಸಾ|| ಧಾರವಾಡ, ಮಲ್ಲಿಕ್‌ಜಾನ್ ಮೆಹಬೂಬಸಾಬ ನದಾಫ ಸಾ|| ಹುಬ್ಬಳ್ಳಿ ಇವರನ್ನು ಖಚಿತ ಮಾಹಿತಿ ಆಧರಿಸಿ ವಶಕ್ಕೆ ತೆಗೆದುಕೊಂಡು ಠಾಣೆಗೆ ಕರೆತಂದು ವಿಚಾರಿಸಿದಾಗ ತಾವೆಲ್ಲರೂ ಸೇರಿಕೊಂಡು 'ಹನಿಟ್ರ್ಯಾಪ್' ಮಾಡಿ ಅಮಾಯಕ ವ್ಯಕ್ತಿಗಳಿಂದ ಹಣ ಸುಲಿಗೆ ಮಾಡಿದ್ದಾಗಿ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ.

**ಬಂಧಿತರಿಂದ 14.73 ಲಕ್ಷದ ಸ್ವತ್ತುಘಿ...**

'ಹನಿಟ್ರ್ಯಾಪ್' ಮಾಡುವ ಮೂಲಕ ಅಕ್ರಮವಾಗಿ ಹಣ ಮಾಡಿದ್ದ ವಂಚಕರು ಐಷಾರಾಮಿ ಜೀವನ ಸಾಗಿಸುವುದಕ್ಕಾಗಿ ಒಂದು ಸ್ಕೋಡಾ ಕಾರು ಖರೀದಿಸಿದ್ದರು. ಚಿನ್ನಾಭರಣ, ವಾಚ್‌ಗಳು, ಬೆಲೆಬಾಳುವ ಬ್ರ್ಯಾಂಡೇಡ್ ಬಟ್ಟೆಗಳು, ಮೊಬೈಲ್‌ಗಳನ್ನು ಖರೀದಿಸಿದ್ದರು. 'ಯಾರದ್ದೋ ದುಡ್ಡುಘಿ... ಯಲ್ಲಮ್ಮನ ಜಾತ್ರೆ' ಮಾಡಿದ್ದರು. ಬಂಧಿತರಿಂದ ಒಂದು ಸ್ಕೋಡಾ ಕಾರು, 4 ಮೊಬೈಲ್‌ಗಳು, 85.5 ಗ್ರಾಂ ಚಿನ್ನಾಭರಣ ಇದರ ಬೆಲೆ 6.63 ಲಕ್ಷ ರೂ.ಗಳು, 3 ಸಾವಿರ ರೂ. ಬೆಳ್ಳಿಯ ಕಡಗ, 5.50 ಲಕ್ಷ ರೂ. ನಗದು ಸೇರಿದಂತೆ 14.73 ಲಕ್ಷ ರೂ.ಗಳ ಸ್ವತ್ತು ಜಪ್ತಿ ಮಾಡಿಕೊಳ್ಳಲಾಗಿದೆ.

**ಎಲ್ಲೆಡೆ ಪ್ರಶಂಸೆ...**

ಸಮಾಜದಲ್ಲಿ ತೀವ್ರ ಕಂಟಕವಾಗಿ ಪರಿಣಮಿಸಿದ್ದ 'ಹನಿಟ್ರ್ಯಾಪ್' ಗ್ಯಾಂಗ್‌ನ್ನು ಯಶಸ್ವಿಯಾಗಿ ಖೆಡ್ಡಾಗೆ ಕೆಡವಿ ಹೆಡೆಮುರಿ ಕಟ್ಟಿ ಜೈಲಿಗೆ ಸೇರಿಸಿದ ಟಫ್‌ಕಾಪ್ ಸಂಗಮೇಶ ದಿಡಿಗಿನಹಾಳ ಮತ್ತವರ ತಂಡವನ್ನು ಪೊಲೀಸ್ ಕಮೀಷನರ್ ಎನ್. ಶಶಿಕುಮಾರ್, ಡಿಸಿಪಿ (ಲಾ) ಮಹಾನಿಂಗ ನಂದಗಾವಿ, ಎಸಿಪಿ ಸಿದ್ದನಗೌಡ ಪಾಟೀಲ ಪ್ರಶಂಸಿಸಿದ್ದಾರೆ. ಸಾರ್ವಜನಿಕ ವಲಯದಲ್ಲೂ ವಿದ್ಯಾನಗರ ಪೊಲೀಸರಿಗೆ ಪ್ರಶಂಸೆ ವ್ಯಕ್ತವಾಗುತ್ತಿದೆ.

☯

---

**2** ☞

ಗಮನಿಸಿದ್ದರು.

ಯಾವ ತಿರುವಿನಲ್ಲಿ ನಿಂತು ಕಾದು ಕುಳಿತರೆ ಹುಲಿ ಕರೆಕ್ಟ್ ಆಗಿ ಬಂದೂಕಿನ ನಳಿಗೆಗೆ ಸಿಗುತ್ತದೆ ಎನ್ನುವ ಅಂದಾಜು ಯತೀಶ್‌ಗೆ ಸಿಕ್ಕುಬಿಟ್ಟಿತ್ತುಘಿ.

ದಿನಗಳು ಉರುಳುತ್ತಿತ್ತುಘಿ. ಅಮರ್ ಹತ್ಯೆಯ ಮಾಸ್ಟರ್ ಪ್ಲಾನ್‌ನಲ್ಲಿ ದುಬೈನಲ್ಲಿ ಕುಳಿತ ಅಶೋಕ್ ಶೆಟ್ಟಿಯಷ್ಟೇ ಪ್ರಮುಖ ಪಾತ್ರ ವಹಿಸಿದ್ದು ಆಗ ಬೆಂಗಳೂರು ಅಂಡರ್ ವರ್ಲ್ಡ್ ಡಾನ್ ಆಗಿದ್ದ ಮುತ್ತಪ್ಪನ ರೈ ತುಂಬಾ ಜನ ಪೊಲೀಸ್ ಅಧಿಕಾರಿಗಳಿಗೆ ಗೊತ್ತಿಲ್ಲದ ಸತ್ಯ ಇದು. ಬಿಡಿ. ಇಂತಹ ಸತ್ಯಗಳು ಅನೇಕ ಇವೆ. ಹಂತಕರ ತಂಡವನ್ನು ಅಶೋಕ್ ಶೆಟ್ಟಿ ಜೊತೆ ಮಾತನಾಡಿಸಿದ್ದು ಬಲ್ಲಾಳ್ ಭಾಗ್ ರಘು ಆದರೂ ಕೊಲೆಯ ತಂಡವನ್ನು ತೆರೆಯ ಹಿಂದೆ ನಿಂತು ಲೀಡ್ ಮಾಡಿದ್ದೇ ಮುತ್ತಪ್ಪ ರೈಘಿ. ಆದರೆ ನೆಪ ಮಾತ್ರಕ್ಕೆ ಕೂಡ ಈ ಕೇಸ್‌ನಲ್ಲಿ ನನ್ನ ಹೆಸರನ್ನು ಹೇಳಲೇಬಾರದು ಅಂತ ಯತೀಶ್‌ರಿಂದ ಮೊದಲೇ ಪ್ರಾಮಿಸ್ ಪಡೆದುಕೊಂಡಿದ್ದರು.

ಅಮರ್ ಆಳ್ವ ಪ್ರತಿದಿನ ಸಂಜೆ ಮಂಗಳೂರಿನ ಮಿಲಾಗ್ರಿಸ್ ಬಳಿ ಇರುವ ಸೂಪರ್ ಬಜಾರ್ ಹತ್ತಿರ ಬರುತ್ತಾರೆ. ಎಲ್ಲಾ ಸೇರಿದರೆ ಎಂಟರಿಂದ ಹತ್ತು ಮಂದಿಯ ಗುಂಪು ಅವರೊಂದಿಗಿರುತ್ತದೆ. ಮುಂಬೈನ ಶಾರ್ಪ್ ಶೂಟರ್‌ಗಳಾದ ರಮೇಶ್ ಪೂಜಾರಿ, ಫ್ರಾನ್ಸಿಸ್ ಕುಟಿನ್ನ ಇದ್ದರೆ ಮಾತ್ರ ಸ್ವಲ್ಪ ರಿಸ್ಕ್. ಅಲ್ಲಿಂದ ಮತ್ತೆ ಹೊರಟರೆ ಅಮರ್‌ರನ್ನು ಮುಟ್ಟುವುದು ಕಷ್ಟಘಿ. ಇದು ಅಶೋಕ್ ಶೆಟ್ಟಿಗೆ ಮುತ್ತಪ್ಪ ರೈ ರವಾನಿಸಿದ ಮಾಹಿತಿ.

ಅದೊಂದು ದಿನ ಮಂಗಳೂರು ಸಮೀಪದ ಕೂಳೂರಿನ ಲೇಡಿಸ್ ಬಾರ್ ವಿವಾದದ ಕುರಿತು ಮಾತುಕತೆ ನಡೆಸಲು ಅಮರ್ ಸೂಪರ್ ಬಜಾರ್‌ಗೆ ಬರುತ್ತಾರೆ ಎಂಬ ಖಚಿತ ಮಾಹಿತಿ ಮುತ್ತಪ್ಪ ರೈ ಮೂಲಕ ಅಶೋಕ್ ಶೆಟ್ಟಿಕಿವಿಗೆ ಬಿತ್ತುಘಿ. ಹಂತಕರ ತಂಡ ಕೂಡ ತಕ್ಷಣ ಜಾಗ್ರತವಾಯಿತು. ಮೈತುಂಬ ಆಯುಧಗಳನ್ನು ಹೊತ್ತು ಬಂದ ಹಂತಕರು ಅಂಬಾಸಿಡರ್ ಕಾರನ್ನು ಮಿಲಾಗ್ರಿಸ್ ಚರ್ಚಿನ ಬದಿಯ ರಸ್ತೆಯಲ್ಲಿರುವ ಬ್ಯೂಟಿ ಪಾರ್ಲರ್ (ಈಗಲ್ಲಿ ಮಸೀದಿ ನಿರ್ಮಾಣವಾಗಿದೆ) ಎದುರು ಪಾರ್ಕ್ ಮಾಡಿ ಕಾಂಪೌಂಡ್ ಹಾರಿ ಚರ್ಚ್ ಆವರಣದೊಳಕ್ಕೆ ಬಂದರು. ಮುಂಬೈ ಶಾರ್ಪ್ ಶೂಟರ್ ಬಾಲೇಶ್ ತನ್ನ ಬಳಿ ಇದ್ದ ಯುಎಸ್ ಕಾರ್ಬೈನ್ ವೆಪನ್ ರೆಡಿ ಮಾಡಿಕೊಂಡ. ಗಜಗಾತ್ರದ ಗುಂಡು ಇದರಲ್ಲಿತ್ತುಘಿ. ಒಮ್ಮೆ ಟ್ರಿಗರ್ ಒತ್ತಿದರೆ 20 ಬುಲೆಟ್‌ಗಳು ಒಮ್ಮೆಗೆ ತೂರಿ ಬರುತ್ತಿದ್ದವು. ಒಂದು ಕಡೆಯಿಂದ ದೇಹದೊಳಕ್ಕೆ ಹೋದರೆ ಇನ್ನೊಂದು ಕಡೆಯಿಂದ ಸೀಳಿಕೊಂಡು ಹೊರ ಬರುವ ಅನಾಹುತಕಾರಿ ವೆಪನ್ ಅದು. ಇದರ ಎದುರಲ್ಲಿ ಪಿಸ್ತೂಲು, ರಿವಾಲ್ವರ್ ಲೆಕ್ಕಕ್ಕೇ ಇರಲಿಲ್ಲ. ಅಂತಹುದೇ ಇನ್ನೆರಡು ಅನಾಹುತಕಾರಿ ವೆಪನ್ ಜೊತೆಗಿರಿಸಿಕೊಂಡಿದ್ದಘಿ. ಯತೀಶ್ ಮತ್ತು ಶ್ರೀಕರ್ ಅಂತಿಮ ಯುದ್ಧಕ್ಕೆ ತಯಾರಾಗಿಬಿಟ್ಟಿದ್ದರು. ಹಂತಕರಿಗೆ ಆವತ್ತು ಬೇಟೆ ಮುಖಾಮುಖಿಯಾಗಿತ್ತುಘಿ. 'ಹುಲಿ' ಬಂದು ನಿಂತಿದ್ದನ್ನು ನೋಡಿದ ತಕ್ಷಣ ಬೇಟೆಗಾರರು ಜಾಗ್ರತರಾದರು.

ಚರ್ಚ್ ಆವಣದೊಳಗೆ ನಾಲ್ವರು ಹಂತಕರಿದ್ದರು. ಯತೀಶ್, ಶ್ರೀಕರ್, ಮುರಳಿ ಮತ್ತು ಬಾಲೇಶ್. ಯತೀಶ್ ಕಡು ಕಪ್ಪು ಬಣ್ಣದ ಟ್ರ್ಯಾಕ್ ಸೂಟ್ ಧರಿಸಿದ್ದಘಿ. ಬಾಲೇಶ್ ಕೈಯಲ್ಲಿದ್ದ ಯುಎಸ್ ಕಾರ್ಬೈನ್ ವೆಪನ್ ಎದೆಗೆ ಅಂಟಿಕೊಂಡಿತ್ತುಘಿ. ಎಲ್ಲರ ಬೆನ್ನ ಹಿಂದೆ ಬ್ಯಾಗ್‌ಗಳಿದ್ದವು. ಚರ್ಚ್ ಒಳಆವರಣದ ಸಿಮೆಂಟ್ ಕಂಬಗಳ ಮರೆಯಿಂದ ರಸ್ತೆಯ ಇನ್ನೊಂದು ಬದಿಯ ಸೂಪರ್ ಬಜಾರ್‌ಅಂಗಡಿಯ ಎದುರಿಗೆ ಅಮರ್ ಆಳ್ವ ಜಿಪ್ಸಿ ವಾಹನದಲ್ಲಿ ಬಂದಿಳಿಯುತ್ತಿರುವುದು ಸ್ಪಷ್ಟವಾಗಿ ಕಾಣಿಸಿತು. ಆದರೂ ಕಾಯುವುದು ಅನಿವಾರ್ಯವಾಗಿತ್ತುಘಿ. ಕೊಲ್ಲುವ ಉತ್ಸಾಹದ ಜೊತೆ ಜೊತೆಗೆ ಕಾಯುವ ಸಹನೆಯೂ ಇರಬೇಕು ಎನ್ನುವ ಅಂಡರ್ ವರ್ಲ್ಡ್ ಪಾಠವನ್ನು ಆ ಹೊತ್ತಿಗಾಗಲೇ ಹಂಕಕರು ಕಲಿತುಕೊಂಡಿದ್ದರು.

ಯತೀಶ್ ಶೆಟ್ಟಿ ಅದೇ ಮೊದಲ ಬಾರಿಗೆ ಅಮರ್ ಆಳ್ವಾರನ್ನು ಅಷ್ಟು ಹತ್ತಿರದಿಂದ ನೋಡಿದ್ದಘಿ. ಮತ್ತು ಆವತ್ತೇ ಕಡೆ. ಜೀವಂತವಾಗಿ ನೋಡಿದ್ದು ಕೂಡ. ಬದುಕಿದರೆ ಈ ಸುಂದರದ್ರೂಪಿ ಯುವಕ ಮಂಗಳೂರಿಗಷ್ಟೇ ಅಲ್ಲಘಿ. ಇಡೀ ಭೂಗತಲೋಕಕ್ಕೆ ದೊಡ್ಡ ಆಸ್ತಿಯಾದಾನು ಅಂದುಕೊಂಡ. ಆದರೆ ಆತ ಹೆಚ್ಚೆಂದರೆ ಇನ್ನೇನು ಹತ್ತು ನಿಮಿಷ ಬದುಕಿರಬಹುದು. ಹಾಗಂತ ಮನಸ್ಸಿನಲ್ಲಿ ಹೇಳಿಕೊಂಡ ಯತೀಶ್, ಪಕ್ಕಕ್ಕೆ ತಿರುಗಿದವನೇ ''ಎಲ್ಲರ ಕೈ ರಿವಾಲ್ವರ್ ಟ್ರಿಗರ್ ಮೇಲಿರಲಿ. ಈ ಬಾರಿ ಗುರಿ ತಪ್ಪಿದರೆ ನಾವ್ಯಾರೂ ಬದುಕವುದಿಲ್ಲ ಎಂಬುದೂ ನೆನಪಿರಲಿ'' ಅಂತ ಪಿಸುಗುಟ್ಟಿ ಗಡಿಯಾರ ನೋಡಿಕೊಂಡ.

**ಆವತ್ತು ತಾರೀಖು ಜುಲೈ 14.**

**1992.**

**ಸಮಯ ಸಂಜೆ 7.35**

(ಮುಂದಿನ ಸಂಚಿಕೆಯಲ್ಲಿ)

# ಅತಿದೊಡ್ಡ ಡ್ರಗ್ಸ್ ಜಾಲ ಪತ್ತೆ; 6 ಕೋಟಿ ರೂ. ಮೌಲ್ಯದ ಮಾದಕ ವಸ್ತು ವಶ!

ಮಂಗಳೂರಿನ ಇತಿಹಾಸದಲ್ಲೇ ಅತೀ ದೊಡ್ಡ ಡ್ರಗ್ಸ್ ಜಾಲವನ್ನು ಪೊಲೀಸರು ಪತ್ತೆ ಮಾಡಿದ್ದು, ಈ ಸಂಬಂಧ ಮಂಗಳೂರು ಸಿಸಿಬಿ ಪೊಲೀಸರು ಬೆಂಗಳೂರಿನಲ್ಲಿ ಕಾರ್ಯಾಚರಣೆ ನಡೆಸಿ ನೈಜೀರಿಯಾ ಪ್ರಜೆಯನ್ನು ವಶಕ್ಕೆ ಪಡೆದಿದ್ದಾರೆ.

ಮಂಗಳೂರಿನ ಇತಿಹಾಸದಲ್ಲೇ ಅತೀ ದೊಡ್ಡ ಡ್ರಗ್ಸ್ ಜಾಲವನ್ನು ಪೊಲೀಸರು ಪತ್ತೆ ಮಾಡಿದ್ದು, ಬರೋಬ್ಬರಿ 6 ಕೋಟಿ ರೂ. ಮೌಲ್ಯದ ಆರು ಕೆಜಿಗೂ ಅಧಿಕ ಎಂಡಿಎಂಎ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ.

ಅಂತೆಯೇ ಈ ಸಂಬಂಧ ಮಂಗಳೂರು ಸಿಸಿಬಿ ಪೊಲೀಸರು ಬೆಂಗಳೂರಿನಲ್ಲಿ ಕಾರ್ಯಾಚರಣೆ ನಡೆಸಿ ನೈಜೀರಿಯಾ ಪ್ರಜೆಯನ್ನು ವಶಕ್ಕೆ ಪಡೆದಿದ್ದಾರೆ.

ಈ ಸಂಬಂಧ ಮಾಹಿತಿ ನೀಡಿದ ನೀಡಿದ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್, ಮಂಗಳೂರು ಕಮಿಷನರೇಟ್ ವ್ಯಾಪ್ತಿಯ ಇತಿಹಾಸದಲ್ಲೇ ದೊಡ್ಡ ಮೌಲ್ಯದ ಡ್ರಗ್ ದಂಧೆ ಬಯಲಿಗೆಳೆದ ಪ್ರಕರಣ ಇದಾಗಿದೆ. ಒಟ್ಟು ಆರು ಕೆ.ಜಿ.ಯ ಆರು ಕೋಟಿ ರೂ. ಮೌಲ್ಯದ ಎಂಡಿಎಂ ಡ್ರಗ್ ವಶಕ್ಕೆ ಪಡೆಯಲಾಗಿದೆ.


ಕಮೀಷನರ್ ಅನುಪಮ್ ಅಗರ್ವಾಲ್

ವಾರದ ಹಿಂದೆ ಹೈದರ್ ಅಲಿ ಎಂಬಾತನನ್ನು ವಶಕ್ಕೆ ಪಡೆದು 15 ಗ್ರಾಂ ಎಂಡಿಎಂ ವಶಕ್ಕೆ ಪಡೆಯಲಾಗಿತ್ತು. ಈತನನ್ನ ವಶಕ್ಕೆ ಪಡೆದು ತನಿಖೆ ನಡೆಸಿದಾಗ ಮಾಹಿತಿ ಲಭ್ಯವಾಗಿದೆ ಎಂದರು. ಅಂತೆಯೇ ಒಂದು ಬ್ಯಾಂಕ್ ವಿವರದಡಿ ಆಳವಾಗಿ ತನಿಖೆ ನಡೆಸಿದಾಗ ನೈಜೀರಿಯನ್ ಪ್ರಜೆಯ ಕೈವಾಡ ಇರುವುದು ಬೆಳಕಿಗೆ ಬಂದಿತ್ತು. ಆತನ ಜಾಡು ಹಿಡಿದು ಬೆಂಗಳೂರಿಗೆ ತೆರಳಿ ಆತನನ್ನ ಸಿಸಿಬಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಸಿಸಿಬಿ ಪೊಲೀಸರ ಅತ್ಯುತ್ತಮ ಕಾರ್ಯಾಚರಣೆ ಇದಾಗಿದೆ ಎಂದು ಅನುಪಮ್ ಅಗರ್ವಾಲ್ ಹೇಳಿದರು.


ವಶಪಡಿಸಿಕೊಂಡಿರುವ ಡ್ರಗ್ಸ್

**ಕಸದಂತೆ ಡ್ರಗ್ಸ್ ಎಸೆದು ಹೋಗುತ್ತಿದ್ದ!**

ಕಾರ್ಯಾಚರಣೆ ವೇಳೆ ಪೊಲೀಸ್ ಅಧಿಕಾರಿಗಳು 35 ಡೆಬಿಟ್ ಕಾರ್ಡ್‌ಗಳು, 10 ಬ್ಯಾಂಕ್ ಪಾಸ್ ಪುಸ್ತಕಗಳು, 17 ಇನ್ ಆಕ್ಟಿವ್ ಸಿಮ್ ಕಾರ್ಡ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಅಲ್ಲದೆ ಬಂಧಿತನ ಪಾಸ್‌ಪೋರ್ಟ್ ಸಹಿತ ಎಲ್ಲಾ ದಾಖಲೆ ವಶಕ್ಕೆ ಪಡೆಯಲಾಗಿದೆ. ಈತ ಸಣ್ಣ ಸಣ್ಣ ಪ್ಯಾಕೆಟ್‌ಗಳ ಮೂಲಕ ರಾಜ್ಯದ ಹಲವೆಡೆ ಆತ ಡ್ರಗ್ ಪೂರೈಕೆ ಮಾಡುತ್ತಿದ್ದ.

ನಗರದಲ್ಲಿ ಬಿಸ್ಕಿಟ್ ಪ್ಯಾಕೆಟ್, ಗುಟ್ಕಾ, ಚಿಪ್ಸ್‌ನ ಪ್ಯಾಕೆಟ್‌ಗಳಲ್ಲಿ ಕಸ ಎಸೆಯೋ ಜಾಗದಲ್ಲಿ ಎಸೆದು, ಬಳಿಕ ಪೆಡ್ಲರ್‌ಗಳಿಗೆ ಅದರ ಫೋಟೊ ತೆಗೆದು ಪೂರೈಕೆದಾರನಿಗೆ ಮಾಹಿತಿ ರವಾನೆ ಮಾಡುತ್ತಿದ್ದ. ಅ ಬಳಿಕ ಅವರು ಅಲ್ಲಿಂದ ಅದನ್ನು ತೆಗೆದುಕೊಂಡು ಗ್ರಾಹಕರಿಗೆ ಪೂರೈಕೆ ಮಾಡುತ್ತಿದ್ದರು ಎನ್ನಲಾಗಿದೆ.

ಹೀಗೆ ಮಂಗಳೂರು ನಗರದಲ್ಲಿ ಐವತ್ತಕ್ಕೂ ಅಧಿಕ ಪ್ಯಾಕೆಟ್ ಡ್ರಗ್ಸ್ ವಶಕ್ಕೆ ಪಡೆಯಲಾಗಿದೆ. ಬಂಧಿತ ಆರೋಪಿಯ ವಿಸಾ ಅವಧಿ ಮುಕ್ತಾಯ ಆಗಿದೆ. ಸಿಸಿಬಿ ತಂಡಕ್ಕೆ ಡಿಜಿಪಿ ಒಂದು ಲಕ್ಷ ರೂ. ಬಹುಮಾನ ಘೋಷಿಸಿದ್ದಾರೆ. ಕಮಿಷನರೇಟ್‌ನಿಂದ ಪ್ರತ್ಯೇಕ ಒಂದು ಲಕ್ಷ ರೂ. ಬಹುಮಾನ ಘೋಷಿಸುತ್ತಿರುವುದಾಗಿ ಅನುಪಮ್ ಅಗರ್ವಾಲ್ ತಿಳಿಸಿದರು.

**ಬೆಂಗಳೂರಿನಲ್ಲಿ ಬಂಧನ**

ಇತ್ತೀಚೆಗೆ ಮಂಗಳೂರು ಪೂರ್ವ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಪಂಪ್‌ವೆಲ್ ಬಳಿಯ ಲಾಡ್ಜೊಂದರಲ್ಲಿ ಇದ್ದುಕೊಂಡು ಸಾರ್ವಜನಿಕರಿಗೆ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಹೈದರ್ ಯಾನೆ ಹೈದರ್ ಆಲಿ (51) ಎಂಬಾತನನ್ನು ಬಂಧಿಸಿ, ಆತನಿಂದ 75,000 ಮೌಲ್ಯದ15 ಗ್ರಾಂ ಎಂಡಿಎಂಎ ವಶಪಡಿಸಿಕೊಳ್ಳಲಾಗಿತ್ತು. ಈ ಪ್ರಕರಣದ ಮುಂದಿನ ತನಿಖೆಯನ್ನು ಮಂಗಳೂರು ಸಿಸಿಬಿ ಘಟಕಕ್ಕೆ ಹಸ್ತಾಂತರಿಸಲಾಗಿತ್ತು. ಈ ಪ್ರಕರಣದಲ್ಲಿ ಮಾದಕ ವಸ್ತುವನ್ನು ಪೂರೈಕೆ ಮಾಡುವ ಡ್ರಗ್ಸ್ ಪೆಡ್ಲರ್‌ಗಳನ್ನು ಪತ್ತೆ ಹಚ್ಚುವ ಸಲುವಾಗಿ ಮಂಗಳೂರು ಸಿಸಿಬಿ ಪೊಲೀಸರು ಕಾರ್ಯಾಚರಣೆ ಕೈಗೊಂಡಿದ್ದರು.


ಬಂಧಿತ ಆರೋಪಿ

ಈ ತನಿಖೆಯ ವೇಳೆ ಆರೋಪಿ ಹೈದರ್ ಯಾನೆ ಹೈದರ್ ಆಲಿಗೆ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಇನ್ನಿತರ ಡ್ರಗ್ ಪೆಡ್ಲರ್‌ಗಳ ಬಗ್ಗೆ ಮಾಹಿತಿ ಸಂಗ್ರಹಿಸಿದಾಗ ಪ್ರಮುಖ ಆರೋಪಿ ಬೆಂಗಳೂರಿನಲ್ಲಿ ವಾಸ್ತವ್ಯವಿರುವ ನೈಜೇರಿಯಾ ದೇಶದ ವಿದೇಶಿ ಪ್ರಜೆ ಎಂದು ತಿಳಿದುಬಂದಿತ್ತು. ಅದರಂತೆ ಬೆಂಗಳೂರು ನಗರದ ದೊಮ್ಮಸಂದ್ರ, ಗ್ರಾಮದ ಸ್ವಾಮಿ ವಿವೇಕಾನಂದ ನಗರದ ಬಾಡಿಗೆ ಮನೆಯೊಂದರ ಮೇಲೆ ದಾಳಿ ನಡೆಸಿ, ಮಾದಕ ವಸ್ತುವನ್ನು ಹೊಂದಿದ್ದ ನೈಜೀರಿಯಾ ಪ್ರಜೆಯನ್ನು ಬಂಧಿಸಿದ್ದಾರೆ.

# ನಕಲಿ ಪತ್ರಕರ್ತರಿಂದ ಶಿಕ್ಷಕ ಸುರೇಂದ್ರ, ಕಾಖಂಡಕಿ ಮೇಲೆ ದಾಳಿ!

ರಾಯಚೂರು ತಾಲೂಕಿನ ತಲಮಾರಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲಾ ಸಹಶಿಕ್ಷಕ ಸುರೇಂದ್ರ, ಕಾಖಂಡಕಿ, ಇತ್ತೀಚೆಗೆ ಅಮಾನತುಗೊಂಡ ನಂತರ, ನಕಲಿ ಪತ್ರಕರ್ತರೆಂದು ಹೇಳಿಕೊಂಡು ಬಂದ ಅಪರಿಚಿತರಿಂದ ಹಲ್ಲೆ ಮಾಡಿ ಹಣ, ಬಂಗಾರ ದೋಚಿಕೊಂಡು ಹೋದ ಘಟನೆಗೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಯರಗೇರಾ ಪೊಲೀಸರು ಬಂಧಿಸಿದ ಘಟನೆ ನಡೆದಿದೆ.

ಕಳೆದ 21 ವರ್ಷಗಳಿಂದ ತಲಮಾರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅವರು, ಈ ಸಮಯದಲ್ಲಿ ಯರಗೇರಾ ಗ್ರಾಮದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಕಿರುಕುಳ ಆಪಾದನೆ ಮೇಲೆ ಶಿಕ್ಷಕ ಸುರೇಂದ್ರ ಅಮಾನತ್ತುಗೊಂಡಿದ್ದರು. ಶಾಲೆಯ ಅತಿಥಿ ಶಿಕ್ಷಕಿ ತಾರಾ ಅವರೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾರೆ ಎಂಬ ಆರೋಪದ ಮೇಲೆ 2024 ಅಕ್ಟೋಬರ್ 1ರಂದು ಸೇವೆಯಿಂದ ಅಮಾನತ್ತು ಗೊಳಿಸಲಾಗಿತ್ತು. ಅಮಾನತ್ತಾದ ಬೆನ್ನಲ್ಲೆ ಕೆಲವರು ನಕಲಿ ಪತ್ರಕರ್ತರು ಮತ್ತು ಸಮಾಜ ಸೇವಕರು ಎಂದು ಹೇಳಿಕೊಂಡು ಹಣದ ಬೇಡಿಕೆ ಇಟ್ಟು, ಹಲ್ಲೆ ಮಾಡಿ 50 ಸಾವಿರ ಹಣ ಮತ್ತು ಚಿನ್ನ ದೋಚಿಕೊಂಡು ಹೋಗಿದ್ದಾರೆ ಎಂದು ಯರಗೇರಾ ಪೊಲೀಸ್ ಠಾಣೆಯಲ್ಲಿ ದಿನಾಂಕ 7ರ ಸೋಮವಾರ ದೂರು ನೀಡಿದ್ದರು. ಅಕ್ಟೋಬರ್ 3 ರಂದು ಬೆಳಿಗ್ಗೆ 8 ಗಂಟೆಗೆ, ರಾಯಚೂರು ಮೂಲದ ನಾಲ್ಕು ವ್ಯಕ್ತಿಗಳು ಮನೆಗೆ ಬಂದು, ಶಿಕ್ಷಕನ ಮೇಲೆ ಹಲ್ಲೆಗೈದು, 10 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಅವರಲ್ಲಿ ಒಬ್ಬರಾದ ಪರಶುರಾಮ, ನಿನ್ನ ಬಗ್ಗೆ ಪತ್ರಿಕೆಗಳಲ್ಲಿ ಮತ್ತು ಟಿವಿ ಮಾಧ್ಯಮದಲ್ಲಿ ತಾತ್ಕಾಲಿಕ ಅಮಾನತು ಹಾಗೂ ತಾರಾ ಕುರಿತ ದೂರು ಪ್ರಕಟಿಸುತ್ತೇವೆ ಎಂದು ಬೆದರಿಸಿದರು. ಇದರಿಂದ ಭಯಗೊಂಡ ಸುರೇಂದ್ರ, ಅವರು ದಯಮಾಡಿ ಬಿಟ್ಟುಬಿಡುವಂತೆ ಕಳಕಳಿಯಿಂದ ಕೇಳಿಕೊಂಡರು.


ಸಿಪಿಐ ನಿಂಗಪ್ಪ

**ಹಲ್ಲೆ ಮತ್ತು ಹಣದ ಬಲವಂತದ ವಸೂಲಿ**

ಸಮೂಹವು 50,000 ರೂ. ಹಣ ಮತ್ತು 9 ಗ್ರಾಂ ಚೈನ್ ಹಾಗೂ 10 ಗ್ರಾಂ ಉಂಗುರುಗಳನ್ನು ಬಲವಂತವಾಗಿ ಕಸಿದುಕೊಂಡು, ಈ ವಿಷಯವನ್ನು ಯಾರಿಗಾದರೂ ಹೇಳಿದರೆ ನಿನ್ನನ್ನು ಸಾಯಿಸುತ್ತೇವೆ ಎಂದು ಜೀವ ಬೆದರಿಕೆ ಹಾಕಿದರು ಎಂದು ಹೇಳಿದರು. ಸುರೇಂದ್ರ, ಅವರ ಕುಟುಂಬದ ಸದಸ್ಯರು ಹಲ್ಲೆಯಿಂದ ಅವರನ್ನು ಬಿಡಿಸಿದರು, ಘಟನೆ ನಂತರ ಕುಟುಂಬ ತೀವ್ರ, ಆತಂಕದಲ್ಲಿದೆ. ನ್ಯಾ ಯಕ್ಕಾಗಿ ಅಹ್ವಾನ ನೀಡಿದ


ಆರೋಪಿಗಳಾದ ಪರಶುರಾಮ್ ಅ|| ಡೇವಿಡ್, ನರಸಿಂಹಲು

ಶಿಕ್ಷಕ ಸುರೇಂದ್ರ ಕಾಖಂಡಕಿ ಮತ್ತು ಅವರ ಕುಟುಂಬವು ಈ ದುರ್ಘಟನೆಯ ಬಗ್ಗೆ ಪೊಲೀಸರ ಮತ್ತು ಅಧಿಕಾರಿಗಳಲ್ಲಿ ದೂರು ಸಲ್ಲಿಸಿದ್ದು, ಘಟನೆಗೆ ಸಂಬಂಧಿಸಿದಂತೆ ನ್ಯಾಯಕ್ಕಾಗಿ ಯರಗೇರಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಕಾರ್ಯಾಚರಣೆಗಿಳಿದ ಪೊಲೀಸ್ ಆರೋಪಿಗಳನ್ನು ದಿನಾಂಕ 9ರಂದು ಬಂಧಿಸಲಾಗಿದೆ ಎಂದು ಯರಗೇರಾ ಸಿಪಿಐ ನಿಂಗಯ್ಯ ಮಾಹಿತಿ ನೀಡಿದರು. ಆರೋಪಿಗಳಾದ ಪರಶುರಾಮ ಅಲಿಯಾಸ್ ಡೇವಿಡ್ ರಾಯಚೂರು, ನರಸಿಂಹಲು, ರಾಮು, ನರಸಪ್ಪ, ರಾಯಚೂರು ಎಂದು ದೂರಿನಲ್ಲಿ ಸುರೇಂದ್ರ ತಿಳಿಸಿದ್ದಾರೆ. ಪರಶುರಾಮ ಹಾಗೂ ನರಸಿಂಹಲು ಅವರನ್ನು ಪೊಲೀಸರು ಬಂಧಿಸಿದ್ದಾರೆ. ಪರುಶುರಾಮ್ ಅಲಿಯಾಸ್ ಡೇವಿಡ್ ನಗರದ ಆಯುರ್ವೇದ ವಿಭಾಗದಲ್ಲಿ ವೈದ್ಯರನ್ನಾಗಿ ನೌಕರಿ ಕೊಡಿಸುವುದಾಗಿ ಹೇಳಿ ಅವರಿಂದ 3.25 ಲಕ್ಷ ಹಣವನ್ನು ಜಿಲ್ಲಾ ಆರೋಗ್ಯ ಅಧಿಕಾರಿ ಹೆಸರನ್ನು ಬಳಸಿ ತನ್ನ ಸ್ವಂತಕ್ಕೆ ಬಳಕೆ ಮಾಡಿಕೊಂಡು ಅವರಿಗೆ ಮೋಸವೆಸಿಗಿದ್ದಾನೆ. ತಾಯಿಗೆ ಆರಾಮಿಲ್ಲ ಆಸ್ಪತ್ರೆಯಲ್ಲಿ ಇದ್ದಾರೆ 25 ಸಾವಿರ ಹಣಬೇಕೆಂದು ಕೇಳಿದಾಗ ಅನುಮಾನ ಬಂದ ಅವರು ಪರುಶುರಾಮ್ ಮನೆಗೆ ಭೇಟಿ ಮಾಡಿದಾಗ ತಾಯಿ ಕಟ್ಟೆಯ ಮೇಲೆ ಕಾಫೀ ಕುಡಿಯತ್ತಾ ಕಂಡು ಗಾಬರಿಗೊಂಡ ಅವರು ಮೋಸಕ್ಕೆ ಮಾರು ಹೋದ ವಿಷಯ ಬಹಿರಂಗವಾಗಿದೆ.

-ವೀರನಗೌಡ

# ಪ್ರೀತ್ಸೇ ಪ್ರೀತ್ಸೇ ಎಂದು ಯುವಕನ ಬಲಿ ಪಡೆದ ಕನ್ನಡ ಸೀರಿಯಲ್ ನಟಿ!

**ಬೆಂ**ಗಳೂರಿನಲ್ಲಿ ನೇಣು ಬಿಗಿದುಕೊಂಡು ಯುವಕ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತ ಯುವಕನ ತಾಯಿ ದೂರಿನ ಮೇರೆಗೆ ಹುಳಿಮಾವು



ಠಾಣೆಯಲ್ಲಿ ಕಿರುತೆರೆ ನಟಿ ವೀಣಾ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಆಕೆಯ ಕಾಟಕ್ಕೆ ಸಾವನ್ನಪ್ಪಿರುವುದಾಗಿ ಕುಟುಂಬಸ್ಥರು ಆರೋಪಿಸುತ್ತಿದ್ದಾರೆ. ಸದ್ಯ ಹುಳಿಮಾವು ಠಾಣೆ ಪೊಲೀಸರಿಂದ ತನಿಖೆ ನಡೆಯುತ್ತಿದೆ.

ಆಕೆ ಸೀರಿಯಲ್ ನಟಿ ಸಣ್ಣಪುಟ್ಟ ಜಾಹೀರಾತುಗಳಲ್ಲಿ ನಟನೆ ಮಾಡುತ್ತಿದ್ದಳು. ಬೆಂಗಳೂರಿಗೆ ಬಂದಿದ್ದ ಆಕೆ ಒಂಟಿಯಾಗಿ ಬದುಕು ಕಟ್ಟಿಕೊಂಡಿದ್ದಳು. ಆದರೆ ಆಕೆಯ ಮನೆಯಲ್ಲಿ ಪತ್ತೆಯಾದ ಯುವಕನ ಮೃತದೇಹ ಸಾಕಷ್ಟು ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ಆಕೆಯ ಕಾಟಕ್ಕೆ ಸಾವನ್ನಪ್ಪಿರುವುದಾಗಿ ಕುಟುಂಬಸ್ಥರು ಆರೋಪಿಸುತ್ತಿದ್ದಾರೆ. ಸದ್ಯ ಮೃತ ಯುವಕನ ತಾಯಿ ದೂರಿನ ಮೇರೆಗೆ ಹುಳಿಮಾವು ಪೊಲೀಸ್ ಠಾಣೆಯಲ್ಲಿ ನಟಿ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು ತನಿಖೆ ನಡೆಸುತ್ತಿದ್ದಾರೆ.

**ಸೀರಿಯಲ್ ನಟಿ ಮೋಹಕ್ಕೆ ಯುವಕ ಆತ್ಮಹತ್ಯೆ**

ಪಿಳ್ಳಹಾನಹಳ್ಳಿ ನಿವಾಸಿ ಮದನ್ (25) ಎಂಬಾತ ಇವೆಂಟ್ ಮ್ಯಾನೇಜ್‌ಮೆಂಟ್ ಕೆಲಸ ಮಾಡಿಕೊಂಡಿದ್ದ. ಇನ್ನೂ ರೀಲ್ಸ್‌ನಲ್ಲಿ ಸೊಂಟ ಬಳಕಿಸುತ್ತಿದ್ದವಳು ವೀಣಾ. 24 ವರ್ಷ ವಯಸ್ಸಿನಲ್ಲಿ ಕಿರುತೆರೆ ನಟಿಯಾಗಿರುವ ವೀಣಾ, ಉದಯ ಟಿವಿಯಲ್ಲಿ ಪ್ರಸಾರವಾಗುತ್ತಿದ್ದ 'ಜನನಿ' ಎಂಬ ಧಾರವಾಹಿ ಸೇರಿದಂತೆ ಬೇರೆ ಬೇರೆ ಸೀರಿಯಲ್‌ನಲ್ಲಿ ನಟಿಸಿದ್ದಳು.

ಬೆಂಗಳೂರಿನ ಸಿ.ಕೆ. ಪಾಳ್ಯ ರಸ್ತೆಯಲ್ಲಿರುವ ಸಾಯಿ ಸಮೃದ್ಧಿ ಲೇಔಟ್‌ನಲ್ಲಿರುವ ಮನೆಯಲ್ಲಿ ವೀಣಾ ಒಂಟಿಯಾಗಿ ವಾಸವಿದ್ದಳು. ಹೀಗಿದ್ದವಳಿಗೆ ಒಂದು ವರ್ಷದ ಹಿಂದೆ ಅದ್ಹೇಗೋ ಈ ಮದನ್ ಪರಿಚಯವಾಗಿದೆ. ಅದೇ ಪರಿಚಯ ಸ್ನೇಹವಾಗಿ ಬೆಳೆದಿದ್ದು, ವೀಣಾ, ಮದನ್‌ನನ್ನ ಪ್ರೀತಿಸುವಂತೆ ಕಿರುಕುಳ ಕೊಟ್ಟು ಆಗಾಗ ಮನೆಗೆ ಬರುವಂತೆ ಒತ್ತಾಯ ಮಾಡುತ್ತಿದ್ದಳಂತೆ. ವೀಣಾ ಎಷ್ಟೇ ಒತ್ತಾಯಿಸಿದ್ರೂ ಮದನ್ ಇಷ್ಟವಿಲ್ಲ ಎಂದು ಹೇಳಿದ್ದ. ಹಾಗಾಗಿ ಮಾನ ಹರಾಜು ಹಾಕ್ತೀನಿ ಎಂದು ವೀಣಾ ಬೆದರಿಕೆ ಹಾಕುತ್ತಿದ್ದಳು. ಮನೆ ಬಳಿ ಬಂದು ರಂಪಾಟ ಮಾಡುತ್ತಿದ್ದಳಂತೆ. ಜೊತೆಗೆ ಬ್ಲೇಡ್‌ನಿಂದ ಕೈ ಕೊಯ್ದುಕೊಳ್ಳುತ್ತಿದ್ದಳಂತೆ.



ಹೀಗಿರಬೇಕಾದರೆ ಅಂದು ಸಂಜೆ ಅಂದರೆ ಅಕ್ಟೋಬರ್ 1ರಂದು ನಾಲ್ಕು ಗಂಟೆಗೆ ವೀಣಾ, ಮದನ್‌ನನ್ನು ಮನೆಗೆ ಕರೆಸಿಕೊಂಡಿದ್ದಾಳೆ. ಈ ಸಂದರ್ಭದಲ್ಲಿ ಕುಡಿದು ಮಾನಸಿಕವಾಗಿ ಕಿರುಕುಳ ನೀಡಿದ್ದಾಳೆ ಎಂದು ಕುಟುಂಬಸ್ಥರು ಆರೋಪ ಮಾಡಿದ್ದಾರೆ. ಅದೇ ಕಿರುಕುಳಕ್ಕೆ ಬೇಸತ್ತ ಮದನ್ ರೂಮ್‌ನಲ್ಲಿರುವ ಫ್ಯಾನಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಸ್ಥಳಕ್ಕೆ ಭೇಟಿ ನೀಡಿದ ಹುಳಿಮಾವು ಠಾಣೆ ಪೊಲೀಸರು ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರ ಮಾಡಿದ್ದು, ಬಿಳೇಕಹಳ್ಳಿಯಲ್ಲಿರುವ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಸಲಾಗಿದೆ. ಈ ವೇಳೆ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಸದ್ಯ ಮದನ್ ಸಾವು ಹಲವು ಅನುಮಾನಗಳಿಗೆ ಕಾರಣವಾಗಿದ್ದು, ತನಿಖೆ ಬಳಿಕ ಮದನ್ ಸಾವಿನ ಅಸಲಿ ಕಾರಣ ಗೊತ್ತಾಗಲಿದೆ.

ಮದನ್ ತಾಯಿ ದೂರಿನ ಮೇಲೆ ಎಫ್‌ಐಆರ್ ದಾಖಲಾಗಿದ್ದರೆ, ಜೊತೆಗೆ ವೀಣಾ ಮೇಲೆ ಅಟ್ರಾಸಿಟಿ ಕೇಸ್ ಕೂಡ ದಾಖಲಾಗಿದೆ. ಮದನ್ ಎಸ್ಸಿ ಸಮುದಾಯಕ್ಕೆ ಸೇರಿದ್ದು, ವೀಣಾ ಲಿಂಗಾಯತ ಸಮುದಾಯಕ್ಕೆ ಸೇರಿದ್ದಾಳೆ.

# ಟೈಗರ್ ಪ್ರಭಾಕರ್ ಚಿತ್ರವನ್ನು ಕಾಪಿ ಮಾಡಿ 'ಈಗ' ಸಿನಿಮಾ ಮಾಡಿದ ರಾಜಮೌಳಿ!



**ಒಂ**ದು ಸಿನಿಮಾದಿಂದ ಪ್ರೇರಣೆಗೊಂಡು ಮತ್ತೊಂದು ಸಿನಿಮಾ ಮಾಡುವುದು ಸರ್ವೇ ಸಾಮಾನ್ಯ. ಬೇರೆ ಭಾಷೆಯ ದೊಡ್ಡ ದೊಡ್ಡ ಸಿನಿಮಾಗಳಿಗೆ ಕನ್ನಡ ಸಿನಿಮಾಗಳು ಪ್ರೇರಣೆಯಾಗಿರುವ ಉದಾಹರಣ ಸಾಕಷ್ಟಿದೆ. ತೆಲುಗು ನಿರ್ದೇಶಕ ರಾಜಮೌಳಿ ಸಾಕಷ್ಟು ಸೂಪರ್ ಹಿಟ್ ಸಿನಿಮಾಗಳನ್ನು ನಿರ್ದೇಶನ ಮಾಡಿದ್ದಾರೆ.

ರಾಜಮೌಳಿ ತಂದೆ ವಿಜಯೇಂದ್ರ ಪ್ರಸಾದ್ ಮಗನ ಚಿತ್ರಗಳಿಗೆ ಕಥೆ ಬರೆಯುತ್ತಾರೆ. ವಿಜಯೇಂದ್ರ ಪ್ರಸಾದ್ ರಾಯಚೂರು ಮೂಲದವರು. ಮೌಳಿ ಕೂಡ ಮಾನ್ವಿಯ ಹಿರೇಕೆರೂರಿನಲ್ಲಿ ಹುಟ್ಟಿದವರು. ಕನ್ನಡ ಸಿನಿಮಾಗಳ ಬಗ್ಗೆ ವಿಜಯೇಂದ್ರ ಪ್ರಸಾದ್ ಸಾಕಷ್ಟು ಸಂದರ್ಭಗಳಲ್ಲಿ ಮಾತನಾಡಿದ್ದಾರೆ. ಅಣ್ಣಾವ್ರ ಸಿನಿಮಾಗಳ ಬಗ್ಗೆ ಮೆಚ್ಚಿಕೊಂಡಿಡಿದ್ದಾರೆ. ಇನ್ನು ರಾಜಮೌಳಿ ನಿರ್ದೇಶನದ 'ಬಾಹುಬಲಿ' ಹಾಗೂ 'ಮಗಧೀರ' ಚಿತ್ರಗಳಿಗೆ ಕನ್ನಡ ಸಿನಿಮಾಗಳೇ ಪ್ರೇರಣೆ ಎಂದು ಸಾಕಷ್ಟು ಜನ ಕಾಮೆಂಟ್ ಮಾಡುತ್ತಲೇ ಇರುತ್ತಾರೆ.



ಖ್ಯಾತ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಕೂಡ ಕನ್ನಡ ಚಿತ್ರಗಳಿಂದ ಪ್ರೇರಣೆಗೊಂಡು ರಾಜಮೌಳಿ ಸಿನಿಮಾಗಳನ್ನು ಮಾಡಿದ್ದಾರೆ ಎಂದು ಹೇಳಿರುವುದು ಇದೆ. ಜಕ್ಕಣ್ಣ ನಿರ್ದೇಶನದ ಸಿನಿಮಾಗಳಲ್ಲಿ 'ಈಗ' ಬಹಳ ಮುಖ್ಯವಾದ ಸಿನಿಮಾ. ಚಿತ್ರದಲ್ಲಿ ಸುದೀಪ್ ಲೀಡ್ ರೋಲ್‌ನಲ್ಲಿ ನಟಿಸಿದ್ದಾರೆ. 2012ರಲ್ಲಿ ಬಂದಿದ್ದ ಈ ಫ್ಯಾಂಟಸಿ ಆಕ್ಷನ್ ಸಿನಿಮಾ ಬರೆದ ದಾಖಲೆಗಳು ಒಂದೆರಡಲ್ಲ. ವಿಲನ್ ಆಗಿ ಸುದೀಪ್ ನಟನೆ ಮರೆಯೋಕೆ ಸಾಧ್ಯವಿಲ್ಲ.



ಗ್ರಾಫಿಕ್ಸ್ ಬಳಸಿ ರಾಜಮೌಳಿ ನೊಣವನ್ನು ತೆರೆಮೇಲೆ ತಂದಿದ್ದ ಪರಿ ಹುಬ್ಬೇರಿಸುವಂತಿತ್ತು. ಇನ್ನು ಕಣ್ಣಿಗೆ ಕಾಣದ ನೊಣವನ್ನು ಕಲ್ಪಿಸಿಕೊಂಡು ಸುದೀಪ್ ನಟಿಸಿದ್ದ ಪರಿಯೂ ಮೆಚ್ಚುವಂತಿದೆ. ಆದರೆ 'ಈಗ' ಚಿತ್ರದ ಕಥೆಗೆ ಕನ್ನಡದ 'ವಿಘ್ನೇಶ್ವರನ ವಾಹನ' ಸ್ಫೂರ್ತಿ ಎನ್ನುವುದು ಬಹಳ ಜನರಿಗೆ ಗೊತ್ತಿಲ್ಲ. ಬಹಳ ಹಿಂದೆಯೇ ಕೆಲವರು ಈ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿ ಕಾಮೆಂಟ್ ಮಾಡಿದ್ದರು.

1984ರಲ್ಲಿ 'ವಿಘ್ನೇಶ್ವರನ ವಾಹನ' ಸಿನಿಮಾ ಮೂಡಿ ಬಂದಿತ್ತು. ಟೈಗರ್ ಪ್ರಭಾಕರ್ ದ್ವಿಪಾತ್ರದಲ್ಲಿ ನಟಿಸಿದ್ದರು. ಜಯಮಾಲ ನಾಯಕಿಯಾಗಿ ಮಿಂಚಿದ್ದರು. ಈ ಚಿತ್ರಕ್ಕೆ ಖ್ಯಾತ ಕಥೆಗಾತ ಎಂ. ಡಿ. ಸುಂದರ್ ಚಿತ್ರಕ್ಕೆ ಕಥೆ ಬರೆದಿದ್ದರು. ಕನ್ನಡದಲ್ಲಿ 90ಕ್ಕೂ ಅಧಿಕ ಸಿನಿಮಾಗಳಲ್ಲಿ ಅವರು ಕಥೆ ಒದಗಿಸಿದ್ದಾರೆ. 'ಚಕ್ರವ್ಯೂಹ', 'ಗಂಧದ ಗುಡಿ', 'ಶಂಕರ್ ಗುರು', 'ಆಟೋರಾಜ' ಸೇರಿ ಹಲವು ಚಿತ್ರಗಳ ಕಥೆಗಳ ಹಿಂದಿನ ಮಾಸ್ಟರ್ ಮೈಂಡ್ ಅವರದ್ದು.





ನಿರ್ದೇಶಕ ರಘುರಾಮ್ ತಮ್ಮ ಯೂಟ್ಯೂಬ್ ಚಾನಲ್‌ನಲ್ಲಿ ಎಂ.ಡಿ. ಸುಂದರ್ ಅವರ ಹಿರಿಯ ಮಗ ಬಾಲಾಜಿ ಅವರ ಸಂದರ್ಶನ ಮಾಡಿದ್ದಾರೆ. ಈ ವೇಳೆ ತಮ್ಮ ತಂದೆಯ ಬಗ್ಗೆ ಅವರ ಸಿನಿಮಾಗಳ ಬಗ್ಗೆ ಬಾಲಾಜಿ ಸಾಕಷ್ಟು ಸಂಗತಿಗಳನ್ನು ಹಂಚಿಕೊಂಡಿದ್ದಾರೆ. ಅದರಲ್ಲಿ ರಾಜಮೌಳಿ ಅವರ 'ಈಗ' ಚಿತ್ರಕ್ಕೆ ನಮ್ಮ ತಂದೆ ಕಥೆ ಬರೆದ 'ವಿಘ್ನೇಶ್ವರನ ವಾಹನ' ಸಿನಿಮಾ ಪ್ರೇರಣೆ ಎಂದು ಬಾಲಾಜಿ ಹೇಳಿದ್ದಾರೆ.

ಸ್ವತಃ ಎಂ.ಡಿ. ಸುಂದರ್ 'ವಿಘ್ನೇಶ್ವರನ ವಾಹನ' ಚಿತ್ರ ನಿರ್ಮಾಣ ಮಾಡಿದ್ದರು. ಸಿನಿಮಾ ನಿರೀಕ್ಷಿಸಿದ ಮಟ್ಟದಲ್ಲಿ ಗೆಲ್ಲಲಿಲ್ಲ. ಆದರೆ ಇದೇ ಕಥೆ 'ಈಗ' ಚಿತ್ರದ ಥೀಮ್ ಎಂದರೂ ತಪ್ಪಾಗಲ್ಲ. 'ವಿಘ್ನೇಶ್ವರನ ವಾಹನ' ಚಿತ್ರದಲ್ಲಿ ಸೈಂಟಿಸ್ಟ್ ವಿನೋದ್ ಹಾಗೂ ಕಳ್ಳನಾಗಿ ಎರಡು ಪಾತ್ರಗಳಲ್ಲಿ ಪ್ರಭಾಕರ್ ಕಾಣಿಸಿಕೊಂಡಿದ್ದರು. ಸೈಂಟಿಸ್ಟ್ ವಿನೋದ್ ಪುತ್ರ ಕೃಷ್ಣ (ಸಂಜಯ್) ಇಲಿಯೊಂದನ್ನು ಸಾಕಿಕೊಂಡಿರುತ್ತಾನೆ.

ಕೃಷ್ಣನ ಸಾವಿಗೆ 'ವಿಘ್ನೇಶ್ವರನ ವಾಹನ' ಇಲಿ ಸೇಡು ತೀರಿಸಿಕೊಳ್ಳುವ ಕಥೆ ಚಿತ್ರದಲ್ಲಿತ್ತು. ಇಲಿ ಕಳ್ಳನಿಗೆ ಕಾಟ ಕೊಡುವ ಸನ್ನಿವೇಶಗಳು 'ಈಗ' ಚಿತ್ರದ ಸನ್ನಿವೇಶಗಳನ್ನು ನೆನಪಿಸುತ್ತದೆ. ಅದರಲ್ಲೂ ಕ್ಲೈಮ್ಯಾಕ್ಸ್‌ನಲ್ಲಿ ಕಾರ್ ಏರಿ ತಪ್ಪಿಸಿಕೊಳ್ಳಲು ಮುಂದಾಗುವುದು. ಆಗ ಕಾರಿನ ಗಾಜಿನ ಮೇಲೆ ಇಲಿ ಕಾಣಿಸಿಕೊಂಡು ಕಾರು ಅಪಘಾತಕ್ಕೆ ಈಡಾಗುವ ಸನ್ನಿವೇಶ ಸೇಮ್ ಟು ಸೇಮ್ ಎನ್ನುವಂತಿದೆ.

ರಾಜಮೌಳಿ ತಂದೆ ವಿಜಯೇಂದ್ರ ಪ್ರಸಾದ್ 'ಈಗ' ಚಿತ್ರಕ್ಕೆ ಕಥೆ ಬರೆದಿದ್ದರು. ಕಾಕ್ರೋಚ್ ಎನ್ನುವ ಇಂಗ್ಲೀಷ್ ಸಿನಿಮಾ ನೋಡಿ ಅದರಿಂದ ಪ್ರೇರಣೆಗೊಂಡು 'ಈಗ' ಚಿತ್ರ ಮಾಡಿರುವುದಾಗಿ ಅವರು ಹೇಳುತ್ತಾರೆ. ಜರಳೆಯೊಂದು ಮನಷ್ಯನನ್ನು ಹೆದರಿಸುವ ಕಾನ್ಸೆಪ್ಟ್ ಅದು. ಆದರೆ ಅದನ್ನೇ ಕೊಂಚ ಬದಲಿಸಿಕೊಂಡು ಈ ಸಿನಿಮಾ ಕಥೆ ಬರೆದೇ ಎಂದು ಹೇಳಿದ್ದಾರೆ.



# ಪ್ರಶಾಂತ್‌ನೀಲ್ ಚಿತ್ರಕ್ಕೆ ರುಕ್ಮಿಣಿ ವಸಂತ್ ನಾಯಕಿ

ಸಪ್ತಸಾಗರದಾಚೆ ಎಲ್ಲೋ ಖ್ಯಾತಿಯ ನಟಿ ರುಕ್ಮಿಣಿ ವಸಂತ್ ಕೈಲೀಗ ಹಲವಾರು ಪ್ರಾಜೆಕ್ಟ್ ಗಳಿವೆ. ಕನ್ನಡ ಅಲ್ಲದೆ ತೆಲುಗಿನಲ್ಲೂ ಸಹ ಮಿಂಚುತ್ತಿರುವ ಈ ಕೃಷ್ಣಸುಂದರಿಗೆ ಸೌತ್ ಸಿನಿಮಾರಂಗದಲ್ಲಿ ಬೇಡಿಕೆಯೂ ಹೆಚ್ಚಾಗಿದೆ. ಸದ್ಯ ಕನ್ನಡ ಸಿನಿಮಾಗಳ ಜೊತೆ ಕಾಲಿವುಡ್‌ನಲ್ಲಿ ಬ್ಯುಸಿಯಿರುವ ಈ ಬೆಡಗಿಗೆ ಇದೀಗ ತೆಲುಗು ಚಿತ್ರರಂಗದಿಂದ ಬುಲಾವ್ ಬಂದಿದೆ. ಟಾಲಿವುಡ್‌ನ ಸ್ಟಾರ್ ನಟನಿಗೆ ರುಕ್ಮಿಣಿ ವಸಂತ್ ಅವರು ನಾಯಕಿಯಾಗಿ ಆಯ್ಕೆಯಾಗಿದ್ದಾರೆ.

ಜ್ಯೂನಿಯರ್ ಎನ್‌ಟಿಆರ್ ನಟಿಸುತ್ತಿರುವ ಹೊಸ ಸಿನಿಮಾಗೆ ರುಕ್ಮಿಣಿ ವಸಂತ್ ಅವರು ನಾಯಕಿಯಾಗಿ ಆಯ್ಕೆಯಾಗಿದ್ದಾರೆ ಎನ್ನುವ ಸುದ್ದಿ ಇದೀಗ ಸೋಶಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿದೆ. ಈ ಚಿತ್ರವನ್ನು ಕೆಜಿಎಫ್, ಸಲಾರ್ ಖ್ಯಾತಿಯ ನಿರ್ದೇಶಕ ಪ್ರಶಾಂತ್ ನೀಲ್ ನಿರ್ದೇಶಕ ಮಾಡುತ್ತಿದ್ದಾರೆ. ಇತ್ತೀಚೆಗಷ್ಟೇ ಪ್ರಶಾಂತ್‌ನೀಲ್ ಮತ್ತು ತಾರಕ್ ಕಾಂಬಿನೇಷನ್‌ನ ಹೊಸ ಸಿನಿಮಾದ ಮುಹೂರ್ತ ಸಮಾರಂಭ ನೆರವೇರಿದೆ. ಈ ಚಿತ್ರದಲ್ಲಿ ಕನ್ನಡದ ನಟಿ ರುಕ್ಮಿಣಿ ವಸಂತ್ ಅವರು ನಾಯಕಿ ಪಾತ್ರಕ್ಕೆ ಆಯ್ಕೆಯಾಗಿದ್ದಾ ರೆ ಎನ್ನಲಾಗಿದೆ. ಈ ವಿಚಾರದ ಬಗ್ಗೆ ಚಿತ್ರತಂಡವೇ ಅಧಿಕೃತವಾಗಿ ತಿಳಿಸುವವರೆಗೆ ಕಾದುನೋಡಬೇಕಿದೆ.

ಅಂದಹಾಗೆ, ಪ್ರಶಾಂತ್‌ನೀಲ್ ನಿರ್ದೇಶನದ, ಶ್ರೀಮುರಳಿ ನಾಯಕನಾಗಿ ಅಭಿನಯಿಸುರುವ ಬಘೀರ ಚಿತ್ರದಲ್ಲೂ ರುಕ್ಮಿಣಿ ವಸಂತ್ ಅವರು ನಾಯಕಿಯಾಗಿ ನಟಿಸಿದ್ದಾರೆ. ಅಲ್ಲದೆ ಶಿವಣ್ಣ ಅವರ ಜೊತೆ ಭೈರತಿ ರಣಗಲ್ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ, ಇದರ ಜೊತೆ ವಿಜಯ್ ಸೇತುಪತಿ ಅಭಿನಯದ ಹೊಸ ಚಿತ್ರ, ಶಿವಕಾರ್ತಿಕೇಯನ್ ಜೊತೆಗಿನ ಹೊಸ ಚಿತ್ರ ಸೇರಿದಂತೆ, ಕನ್ನಡ ಅಲ್ಲದೆ ಬೇರೆ ಬೇರೆ ಭಾಷೆಯ ಹಲವು ಸಿನಿಮಾಗಳಲ್ಲೂ ಸಹ ರುಕ್ಮಿಣಿ ವಸಂತ್ ಅವರು ಅಭಿನಯಿಸುತ್ತಿದ್ದಾರೆ, ಹೀಗೆ ಕನ್ನಡದ ನಟಿಯೊಬ್ಬಳು ಬೇರೆ ಭಾಷೆಯಲ್ಲಿ ಮಿಂಚುತ್ತಿರುವುದು ಹೆಮ್ಮೆಯ ವಿಷಯ. ☯

# ಕನ್ನಡದ ಹಿರಿಯ ಚಿತ್ರ ನಿರ್ದೇಶಕ ಚಿ. ದತ್ತರಾಜ್ ನಿಧನ



ಕಾಮನ ಬಿಲ್ಲು ಸೇರಿದಂತೆ ಹಲವಾರು ಹಿಟ್ ಚಿತ್ರಗಳನ್ನು ನೀಡಿದ್ದ ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕ ಚಿ. ದತ್ತರಾಜ್ ನಿಧನರಾಗಿದ್ದಾರೆ. ಅವರಿಗೆ 87 ವರ್ಷ ವಯಸ್ಸಾಗಿತ್ತು. ಖ್ಯಾತ ಸಾಹಿತಿ ದಿ|| ಚಿ. ಉದಯಶಂಕರ್ ಅವರ ಸಹೋದರರಾಗಿದ್ದ ಚಿ. ದತ್ತರಾಜ್ ಅವರು ರಾಜ್ ಕುಮಾರ್ ಅವರೊಂದಿಗೆ ಉತ್ತಮ ಒಡನಾಟ ಹೊಂದುವ ಮೂಲಕ ಅವರ ಅಭಿನಯದ ಕಾಮನಬಿಲ್ಲು, ಕೆರಳಿದ ಸಿಂಹ, ಅದೇ ಕಣ್ಣು, ಶ್ರುತಿ ಸೇರಿದಾಗ ಚಿತ್ರಗಳನ್ನು ನಿರ್ದೇಶಿಸಿದ್ದರು. ಶಿವರಾಜ್‌ಕುಮಾರ್ ಅಭಿನಯದ ಮೃತ್ಯುಂಜಯ, ಆನಂದ ಜ್ಯೋತಿ ಚಿತ್ರಗಳನ್ನು ನಿರ್ದೇಶಿಸಿದ ದತ್ತರಾಜ್ ಅವರು, ಮಂಜುಳ ನಟಿಸಿದ್ದ ರುದ್ರಿ ಮುಂತಾದ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಇವರ ಆತ್ಮಕ್ಕೆ ಶಾಂತಿ ಸಿಗಲೆಂದು ಪತ್ರಿಕೆ ಪ್ರಾರ್ಥಿಸುತ್ತದೆ. ☯

# 'ಬಿಗ್‌ಬಾಸ್' ನಿರೂಪಣೆಗೆ ಕಿಚ್ಚ ಸುದೀಪ್ ಗುಡ್ ಬೈ!

ಬಿಗ್ ಬಾಸ್ ಕನ್ನಡ 11ನೇ ಆವೃತ್ತಿ ಎರಡನೇ ವಾರ ಕಳೆದು ಮೂರನೇ ವಾರಕ್ಕೆ ಕಾಲಿಟ್ಟಿದೆ. ಇದರ ಮಧ್ಯೆ, ಬಿಗ್ ಬಾಸ್ ಕಾರ್ಯಕ್ರಮ ನಿರೂಪಕ ಕಿಚ್ಚ ಸುದೀಪ್ ಬಹುದೊಡ್ಡ ಘೋಷಣೆಯೊಂದನ್ನು ಮಾಡಿದ್ದಾರೆ. ಹೌದು... ಕಿಚ್ಚ ಸುದೀಪ್ ಬಿಗ್ ಬಾಸ್‌ಗೆ ಗುಡ್ ಬೈ ಹೇಳುತ್ತಿದ್ದಾರೆ. ಈ ವರ್ಷವೇ ಬಿಗ್ ಬಾಸ್ ನಿರೂಪಣೆ ಕುರಿತಂತೆ ಸಾಕಷ್ಟು ಚರ್ಚೆಗಳು ಶುರುವಾಗಿದ್ದವು. ಕಿಚ್ಚ ಸುದೀಪ್ ನಿರೂಪಣೆ ಮಾಡಲು ಒಪ್ಪುತ್ತಿಲ್ಲ, ಹೀಗಾಗಿ ಬೇರೆಯವರನ್ನು ಹಾಕಿಕೊಳ್ಳಲಿದ್ದಾರೆ ಎಂಬ ಚರ್ಚೆಗಳು ಕೇಳಿಬಂದಿದ್ದವು. ಆದರೆ ಈ ಸಲ ನಿರೂಪಣೆ ಮಾಡಲು ಒಪ್ಪಿದ್ದ ಇದೀಗ ಕಿಚ್ಚ ಸುದೀಪ್ ಬಿಗ್ ಬಾಸ್ ನಿರೂಪಣೆಗೆ ಗುಡ್ ಬೈ ಹೇಳುತ್ತಿರುವುದನ್ನು ಸ್ವತಃ ಘೋಷಿಸಿದ್ದಾರೆ.



ಬಿಗ್ ಬಾಸ್ ಕನ್ನಡ 11 ಕಾರ್ಯಕ್ರಮಕ್ಕೆ ಅತ್ಯುತ್ತಮ ಪ್ರತಿಕ್ರಿಯೆ ನೀಡಿದ್ದಕ್ಕೆ ನಿಮಗೆಲ್ಲ ಧನ್ಯವಾಗಳು. ಸಿಕ್ಕಿರುವ ಟಿಆರ್‌ಪಿ ನೋಡಿದರೆ ನನ್ನ ಬಗ್ಗೆ ಮತ್ತು ಈ ಶೋ ಬಗ್ಗೆ ನೀವು ತೋರಿಸಿ ಪ್ರೀತಿ ಏನೆಂಬುದು ತಿಳಿಯುತ್ತದೆ. ಈ 11 ವರ್ಷ ನಿಮ್ಮೊಂದಿಗೆ ಪಯಣ ಮಾಡಿದ್ದು ಚೆನ್ನಾಗಿತ್ತು. ಈಗ ನಾನು ಬೇರೆ ಕಡೆಗೆ ಗಮನ ಹರಿಸುವ ಸಮಯ ಬಂದಿದೆ ಎಂದು ಸುದೀಪ್ ಟ್ವೀಟ್ ಮಾಡಿದ್ದಾರೆ. ಬಿಗ್ ಬಾಸ್ ಕನ್ನಡ ನಿರೂಪಕನಾಗಿ ಇದು ನನ್ನ ಕೊನೆಯ ಆವೃತಿ. ಇಷ್ಟು ವರ್ಷಗಳ ಕಾಲ ಬಿಗ್ ಬಾಸ್ ಕಾರ್ಯಕ್ರಮವನ್ನು ನೋಡಿ ನೀವು ಮತ್ತು ಕಲರ್ಸ್‌ನವರು ನನ್ನ ನಿರ್ಧಾರವನ್ನು ಗೌರವಿಸುತ್ತೀರಿ ಎಂದು ನಿಜವಾಗಿಯೂ ನಂಬಿದ್ದೇನೆ. ಈ ಆವೃತಿ ಅತ್ಯುತ್ತಮ ಆಗುವಂತೆ ಮಾಡೋಣ. ಮುಂದೆ ನಿಮ್ಮೆಲ್ಲರನ್ನೂ ನಾನು ಮನರಂಜಿಸುತ್ತೇನೆ ಎಂದು ಸುದೀಪ್ ಹೇಳಿದ್ದಾರೆ. ☯

# ಯುವನ 2ನೇ ಚಿತ್ರಕ್ಕೆ ಅಶ್ವಿನಿ ಪುನೀತ್ ರಾಜ್ ಕುಮಾರ್ ಬಂಡವಾಳ

ರಾಘವೇಂದ್ರ ರಾಜ್‌ಕುಮಾರ್ ಪುತ್ರ ಗುರುರಾಜ್ ಕುಮಾರ್ ಈಗಾಗಲೇ 'ಯುವ' ಸಿನಿಮಾ ಮೂಲಕ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಾಗಿದೆ. ತನ್ನ ಮೊದಲ ಚಿತ್ರದಲ್ಲೇ ಪ್ರೇಕ್ಷಕರ ಮನಗೆಲ್ಲುವಲ್ಲಿ 'ಯುವ' ಗೆದ್ದಿದ್ದರು. ಆದರೆ ಆ ಸಿನಿಮಾ ತೆರೆಕಂಡು ಆರು ತಿಂಗಳು ಕಳೆದರೂ ಗುರು ಅವರ ಹೊಸ ಸಿನಿಮಾ ಅನೌನ್ಸ್ ಆಗಿಲ್ಲ. ಇನ್ನು ತಮ್ಮ ಚೊಚ್ಚಲ ಚಿತ್ರದಲ್ಲೇ ಯುವ ರಾಜಕುಮಾರ್ ಅವರು ಡ್ಯಾನ್ಸ್, ಫೈಟ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿದ್ದರು, ನಟನೆಯಲ್ಲಿ ಕೊಂಚ ಮಾಗಿದರೆ, ಯುವ ರಾಜಕುಮಾರ್ ಕನ್ನಡ ಚಿತ್ರರಂಗದ ಸ್ಟಾರ್ ನಟರ ಕೊರತೆಯನ್ನು ಕೊಂಚ ನೀಗಿಸುತ್ತಾರೆ ಎನ್ನಲಾಗಿತ್ತು, ಅದೇ ಕಾರಣಕ್ಕೆ ಕಥೆಗಳ ಆಯ್ಕೆಯಲ್ಲಿ ಅವರು ಬಹಳ ಚ್ಯೂಸಿ ಆಗಿದ್ದಾರೆ. ಯುವ ಚಿತ್ರ ಹಿಟ್ ಆದ ಬಳಿಕ ಗಿರಿತಾಜ್‌ಕುಮಾರ್ ಸಾಕಷ್ಟು ಕಥೆಗಳನ್ನು ಕೇಳಿದ್ದಾರೆ. ಆದರೆ ಯಾವುದನ್ನೂ ಫೈನಲ್ ಮಾಡಿಲ್ಲ. ಸದ್ಯ ಕೇಳಿಬರುತ್ತಿರುವ ಮಾಹಿತಿ ಪ್ರಕಾರ ಶೀಘ್ರದಲ್ಲೇ ಅವರ ಹೊಸ ಸಿನಿಮಾ ಘೋಷಣೆ ಆಗಲಿದೆ. ಪಿಆರ್‌ಕೆ ಪ್ರೊಡಕ್ಷನ್ ಬ್ಯಾನರ್‌ನಲ್ಲೇ ಯುವ ರಾಜಕುಮಾರ್ ಅವರ 2ನೇ ಸಿನಿಮಾ ಮೂಡಿ ಬರುವುದು ಬಹುತೇಕ ಖಚಿತವಾಗಿದೆ. 'ಯುವ' ಬಿಡುಗಡೆಗೂ ಮೊದಲೇ ಇಂಥಾದೊಂದು ಚರ್ಚೆ ನಡೆದಿತ್ತು. ಅದು ನಿಜವಾಗುವ ಸಮಯ ಹತ್ತಿರ ಬರ್ತಿದೆ. ಎಲ್ಲಾ ಅಂದುಕೊಂಡಂತೆ ಆಗಿದ್ದರೆ ಯುವ ರಣಧೀರ ಕಂಠೀರವ ಚಿತ್ರದಲ್ಲಿ ಯುವ ರಾಜ್‌ಕುಮಾರ್ ಮೊದಲೇ ನಟಿಸಬೇಕಿತ್ತು. ಆದರೆ ಕಾರಣಾಂತರಗಳಿಂದ ಆ ಸಿನಿಮಾ ನಿಂತಿದೆ. ಸದ್ಯಕ್ಕೆ ಬೇರೆ ಕಥೆಗಳ ಬಗ್ಗೆ ಚರ್ಚೆ ನಡೀತಿದೆ. ತಮ್ಮದೇ ಬ್ಯಾನರ್‌ನಲ್ಲಿ ಯುವ ರಾಜಕುಮಾರ್‌ಗಾಗಿ ಚಿತ್ರವೊಂದನ್ನು ನಿರ್ಮಾಣ ಮಾಡಲು ಅಶ್ವಿನಿ ಪುನೀತ್ ರಾಜಕುಮಾರ್ ಅವರು ಮುಂದಾಗಿದ್ದಾರೆ ಎಂದು ತಿಳಿದುಬಂದಿದೆ.



ಅದಕ್ಕಾಗಿ ತುಂಬಾ ಕಥೆಗಳನ್ನು ಕೇಳುತ್ತಿದ್ದು, ಶೀಘ್ರದಲ್ಲೇ ಹೊಸ ಸಿನಿಮಾದ ಘೋಷಣೆ ಆಗಲಿದೆ. ಒಂದು ಪಕ್ಕಾ ಕಮರ್ಷಿಯಲ್ ಚಿತ್ರವನ್ನು ಬಹಳ ಅದ್ದೂರಿಯಾಗಿ ಕಟ್ಟಿಕೊಡುವ ಪ್ರಯತ್ನ ಶುರುವಾಗಿದೆ. ಈಗಾಗಲೇ ಪಿಆರ್‌ಕೆ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ಸಾಕಷ್ಟು ಸಿನಿಮಾಗಳು ನಿರ್ಮಾಣವಾಗಿವೆ. ಈವರೆಗೆ ಪಿಆರ್‌ಕೆ ಸಂಸ್ಥೆಯಿಂದ ಹೊರ ಬಂದಿರುವ ಎಲ್ಲಾ ಸಿನಿಮಾದ ಕಥೆಗಳನ್ನು ಪುನೀತ್ ಅವರೇ ಫೈನಲ್ ಮಾಡಿದ್ದರು. ಒಂದಷ್ಟು ಸಿನಿಮಾಗಳು ಆಗಲೇ ತೆರೆಗೆ ಬಂದಿದ್ದವು. ಇನ್ನು ಕೆಲವು ಚಿತ್ರಗಳ ಕಥೆಯನ್ನು ಓಕೆ ಮಾಡಿ ಚಿತ್ರೀಕರಣ ನಡೆಯುತ್ತಿದ್ದ ಸಮಯದಲ್ಲಿಯೇ ಪುನೀತ್ ರಾಜ್‌ಕುಮಾರ್ ಅವರು ನಿಧನರಾಗಿದ್ದರು. ಬಳಿಕ ಇದರ ಜವಾಬ್ದಾರಿಯನ್ನು ಅಶ್ವಿನಿ ಪುನೀತ್‌ರಾಜ ಕುಮಾರ್ ಅವರು ವಹಿಸಿಕೊಂಡಿದ್ದರು. ಅರ್ಧಕ್ಕೆ ನಿಂತ ಸಿನಿಮಾಗಳನ್ನು ಪೂರ್ಣಗೊಳಿಸಿ ಅವನ್ನೆಲ್ಲ ರಿಲೀಸ್ ಮಾಡಿದ್ದಾರೆ. ಇದೇ ಮೊದಲ ಬಾರಿಗೆ ಅಶ್ವಿನಿ ಪುನೀತ್ ರಾಜಕುಮಾರ್ ಅವರು ಒಂದು ಕಥೆಯನ್ನು ಕೇಳಿ ಓಕೆ ಮಾಡಿ ನಿರ್ಮಾಣಕ್ಕೆ ಮುಂದಾಗುತ್ತಿದ್ದಾರೆ. ಯುವ ರಾಜಕುಮಾರ್ ಅವರ ಎರಡನೇ ಚಿತ್ರದಿಂದಲೇ ಅದು ಶುರು ವಾಗುತ್ತಿದೆ. ಇನ್ನುಳಿದಂತೆ ತಮ್ಮ ಬ್ಯಾನರ್‌ನಲ್ಲಿ ಒಂದಷ್ಟು ಹೊಸ ಪ್ರತಿಭೆಗಳಿಗೆ ಅವಕಾಶ ಮಾಡಿಕೊಡಲು ಅಶ್ವಿನಿ ಅವರು ಮನಸು ಮಾಡಿದ್ದಾರೆ. ಶೀಘ್ರದಲ್ಲೇ ಮತ್ತಷ್ಟು ಸಿನಿಮಾಗಳನ್ನು ಘೋಷಣೆ ಮಾಡುವ ಸಾಧ್ಯತೆಯೂ ಇದೆ, ಯುವ ರಾಜಕುಮಾರ್ ಲಾಂಚಿಂಗ್ ಸಿನಿಮಾದ ಜವಾಬ್ದಾರಿಯನ್ನು ಹೊಂಬಾಳೆ ಸಂಸ್ಥೆ ವಹಿಸಿಕೊಂಡಿತ್ತು. ಸಂತೋಷ್ ಆನಂದ್ ರಾಮ್ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದರು. ಇದರಲ್ಲಿ ಕಾಲೇಜ್ ಹೀರೊ ಆಗಿ ಯುವ ರಾಜ್ ಕುಮಾರ್ ಅಬ್ಬರಿಸಿದ್ದರು. ಕಾಂತಾರ ಬೆಡಗಿ ಸಪ್ತಮಿ ಗೌಡ ಚಿತ್ರದ ನಾಯಕಿಯಾಗಿ ಮಿಂಚಿದರೆ, ಅಚ್ಯುತ್ ಕುಮಾರ್, ಸುಧಾರಾಣಿ ಸೇರಿದಂತೆ ದೊಡ್ಡ ತಾರಾಗಣವೇ ಈ ಚಿತ್ರದಲ್ಲಿತ್ತು. ಜಬರ್ದಸ್ತ್ ಆಕ್ಷನ್, ಡೈಲಾಗ್, ನೃತ್ಯ ಹಾಗೂ ಹಾಡುಗಳಿಂದ 'ಯುವ' ಸಿನಿಮಾ ದೊಡ್ಡ ಸದ್ದು ಮಾಡಿತ್ತು. ಆದರೆ ತಿಂಗಳಿಗೂ ಮುನ್ನ ಓಟಿಟಿಗೆ ಬಂದು ಅಭಿಮಾನಿಗಳಲ್ಲಿ ಬೇಸರವನ್ನೂ ಮೂಡಿಸಿತ್ತು. ☯




# ಸಾರ್ವಜನಿಕರೇ ಗಮನಿಸಿ
# ಡೆಂಗೀ ಹಾಗೂ ಚಿಕೂನ್‌ಗುನ್ಯ
## ನಿಯಂತ್ರಣಕ್ಕೆ ಸಹಕರಿಸಿ



ನೀರು ನಿಲ್ಲದಂತೆ ಸಹಕರಿಸಿ - ಸೊಳ್ಳೆ ಉತ್ಪತ್ತಿ ತಡೆಗಟ್ಟಿರಿ

ಸೊಳ್ಳೆಗಳ ಜೀವನ ಚಕ್ರ




**ಸೊಳ್ಳೆ ಉತ್ಪತ್ತಿ ತಾಣಗಳು**
- ಒಡೆದ ಟೈರ್‌ಗಳು
- ತೆಂಗಿನ ಚಿಪ್ಪುಗಳು
- ಸಿಮೆಂಟ್ ತೊಟ್ಟಿಗಳು
- ತೆರೆದ ಪ್ಲಾಸ್ಟಿಕ್ ತೊಟ್ಟಿಗಳು
- ಬಕೆಟ್‌ಗಳು
- ನೀರಿನ ತೊಟ್ಟಿಗಳು
- ಏರ್‌ಕೂಲರ್‌ಗಳು
- ಹೂವಿನ ಕುಂಡಗಳ ತಟ್ಟೆಗಳು ಇತ್ಯಾದಿಗಳು






**ಡೆಂಗೀ ಹಾಗೂ ಚಿಕೂನ್‌ಗುನ್ಯ** ಜ್ವರಗಳು ಸೋಂಕು ಹೊಂದಿದ ಸೊಳ್ಳೆಯ ಕಡಿತದಿಂದ ಬರುತ್ತವೆ. ನಿಂತ ಸ್ವಚ್ಛ ನೀರಿನಲ್ಲಿ ಹುಟ್ಟುವ ಈ ಸೊಳ್ಳೆ ಸಾಧಾರಣವಾಗಿ ಹಗಲಿನಲ್ಲಿ ಕಚ್ಚುತ್ತದೆ.

**ಲಕ್ಷಣಗಳು :** ಹಠಾತ್ತನೆ ಬರುವ ಅಧಿಕ ಜ್ವರ, ತೀವ್ರ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ತೀವ್ರತರ ನೋವು, ಮೈ ನೋವು, ಕೀಲುಗಳಲ್ಲಿ ನೋವು, ವಾಕರಿಕೆ ಮತ್ತು ವಾಂತಿ.

**ವೈದ್ಯಕೀಯ ಉಪಚಾರ :** ರೋಗದ ಲಕ್ಷಣ ಕಂಡೊಡನೆ ಉಚಿತ ಚಿಕಿತ್ಸೆಗಾಗಿ ಹತ್ತಿರದ ಬಿಬಿಎಂಪಿ ಆಸ್ಪತ್ರೆಯನ್ನು ಸಂಪರ್ಕಿಸಿ, ವೈದ್ಯರಿಂದ ಪರೀಕ್ಷೆ ಮಾಡಿಸಿ ಸೂಕ್ತ ಚಿಕಿತ್ಸೆ ಪಡೆಯಿರಿ.

**ಮುನ್ನೆಚ್ಚರಿಕೆ :** ಸಿಮೆಂಟ್ ತೊಟ್ಟಿಗಳು, ಪ್ಲಾಸ್ಟಿಕ್ ತೊಟ್ಟಿಗಳು, ಬಕೆಟ್‌ಗಳು, ಡ್ರಂಗಳು, ಬ್ಯಾರಲ್‌ಗಳು, ಖಾಲಿ ಡಬ್ಬಗಳು, ಏರ್‌ಕೂಲರ್‌ಗಳು, ಗಡಿಗೆ, ಗಡಿಗೆ ತುಂಡುಗಳು, ತೆಂಗಿನ ಚಿಪ್ಪುಗಳು, ಹಳೆಯ/ಒಡೆದ ಟೈರುಗಳು, ಹೀಗೆ ಎಲ್ಲೆಲ್ಲಿ ಸ್ವಚ್ಛ ನೀರು ನಿಲ್ಲಬಹುದೋ ಅಲ್ಲೆಲ್ಲಾ ಈ ಸೊಳ್ಳೆಗಳು ಹೇರಳವಾಗಿ ಉತ್ಪತ್ತಿಯಾಗುತ್ತವೆ.

ಎಲ್ಲಾ ನೀರಿನ ತೊಟ್ಟಿಗಳು, ಡ್ರಂ, ಬ್ಯಾರಲ್‌ಗಳು, ಏರ್ ಕೂಲರ್ ಇತ್ಯಾದಿಗಳನ್ನು ವಾರಕ್ಕೊಮ್ಮೆ ಖಾಲಿ ಮಾಡಿ ಸ್ವಚ್ಛಪಡಿಸಿ ಮತ್ತೆ ಭರ್ತಿ ಮಾಡಿಕೊಳ್ಳುವುದು/ ಮುಚ್ಚಳದಿಂದ ಮುಚ್ಚುವುದು, ಬಯಲಿನಲ್ಲಿರುವ ತ್ಯಾಜ್ಯ ವಸ್ತುಗಳಾದ ಒಡೆದ ಬಾಟಲಿ ಮುಂತಾದುವುಗಳಲ್ಲಿ ಮಳೆ ನೀರು ಸಂಗ್ರಹವಾಗದಂತೆ ಎಚ್ಚರವಹಿಸುವುದು ಅಥವಾ ಸೂಕ್ತ ವಿಲೇವಾರಿ ಮಾಡುವುದು ಅತ್ಯಗತ್ಯ.

ಆರೋಗ್ಯ ಇಲಾಖೆಯಲ್ಲಿ ಹಮ್ಮಿಕೊಂಡ ಸೊಳ್ಳೆ ನಿಯಂತ್ರಣ ಕ್ರಮಗಳಿಗೆ ಸಹಕಾರ ನೀಡುವುದು.

ಸ್ವಯಂ ರಕ್ಷಣಾ ವಿಧಾನಗಳಾದ ಸೊಳ್ಳೆ ನಿರೋಧಕಗಳನ್ನು ಹಾಗೂ ಸೊಳ್ಳೆ ಪರದೆಯನ್ನು ಬಳಸುವುದು ಹಾಗೂ ಹಗಲಿನಲ್ಲಿ ಸೊಳ್ಳೆಗಳ ಕಚ್ಚುವಿಕೆಯಿಂದ ದೂರವಿರುವುದು.

## ಬಿಬಿಎಂಪಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ದೊರೆಯುತ್ತದೆ.

**ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :**

| | |
|---|---|
| ಪೂರ್ವ ವಲಯ | 9480685702 / 080-22975803 |
| ಪಶ್ಚಿಮ ವಲಯ | 9480685703 / 080-23561692 |
| ದಕ್ಷಿಣ ವಲಯ | 9480685704 / 080-26566362 |
| ಮಹದೇವಪುರ ವಲಯ | 9480685706 / 080-28512300 |
| ಬೊಮ್ಮನಹಳ್ಳಿ ವಲಯ | 9480685707 / 080-25735642 |
| ಯಲಹಂಕ ವಲಯ | 9480685705 / 080-23636671 |
| ಆರ್‌ಆರ್ ನಗರ ವಲಯ | 9480685708 / 080-28601851 |
| ದಾಸರಹಳ್ಳಿ ವಲಯ | 9480685709 / 080-28394909 |

**24X7 ಉಚಿತ ಸಹಾಯವಾಣಿ**
☎ 1533

**ಬಿಬಿಎಂಪಿ ನಿಯಂತ್ರಣ ಕೊಠಡಿ**
080-22660000
080-22975595 / 080-22221188
9480685700

**ಉಮಾಶಂಕರ್ ಎಸ್.ಆರ್**, ಭಾ.ಆ.ಸೇ
ಆಡಳಿತಗಾರರು, ಬಿಬಿಎಂಪಿ

**ತುಷಾರ್ ಗಿರಿ ನಾಥ್**, ಭಾ.ಆ.ಸೇ
ಮುಖ್ಯ ಆಯುಕ್ತರು, ಬಿಬಿಎಂಪಿ

**ಸೂರಳ್ಕರ್ ವಿಕಾಸ್ ಕಿಶೋರ್**, ಭಾ.ಆ.ಸೇ
ವಿಶೇಷ ಆಯುಕ್ತರು (ಆರೋಗ್ಯ & ನೈರ್ಮಲ್ಯ) ಬಿಬಿಎಂಪಿ

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಸಂಖ್ಯೆ : CPRO/PR/DRPA/12/24-25

Vol. 40 No. 19 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com